
2023

ಉದಯವಾಣಿ ಮಂಗಳವಾರ, ಜೂನ್ 27, 2023



ಶೇಷಾದ್ರಿಪುರಂ ಸಂಯುಕ್ತ ಪ.ಪೂ.ಕಾಲೇಜಿನಲ್ಲಿ ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಣೆ ವಿರುದ್ಧದ ದಿನದ ಕಾರ್ಯಕ್ರಮವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಶಂಕರ್, ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತ ಡಾ.ದೀಪಕ್ ಆರ್.ಎಲ್. ರಂಜನಿ, ಡಾ.ವೂಡೆ ಪಿ.ಕೃಷ್ಣ, ಡಾ. ಸುನೀತಾ ಇತರರಿದ್ದರು.

ಪ್ರಜಾವಾಣಿ
ಮಂಗಳವಾರ • ಜೂನ್ 27, 2023

'ಯುವಜನರ ಭವಿಷ್ಯಕ್ಕೆ ಡ್ರಗ್ಸ್ ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಕವಸ್ತುಗಳು ಯುವಜನರ ಭವಿಷ್ಯಕ್ಕೆ ಮಾರಕವಾಗಲಿದೆ. ಅದನ್ನು ಕೊನೆಗೊಳಿಸಲು ವಿದ್ಯಾರ್ಥಿಗಳು, ಯುವ ಸಮೂಹದಲ್ಲಿ ಜಾಗೃತಿ ಮೂಡಿಸಬೇಕಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಹೇಳಿದರು.

ವಿಶ್ವ ಮಾದಕವಸ್ತು ವಿರೋಧಿ ದಿನದ ನಿಮಿತ್ತ ವಿಧಾನಸೌಧ ಎದುರು ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

'ಮಾದಕವಸ್ತುಗಳಿಗೆ ಕಡಿವಾಣ ಹಾಕುವ ಮೂಲಕ ಸಮಾಜವನ್ನು ರಕ್ಷಿಸಿ ಆರೋಗ್ಯಕರ ಸಮಾಜ ನಿರ್ಮಿಸಬೇಕು. ಮಕ್ಕಳು, ಯುವಜನರು ದೇಶದ ಆಸ್ತಿ. ಅವರು ಡ್ರಗ್ಸ್ ವ್ಯಸನ, ದುಶ್ಚಟಗಳಿಂದ ದೂರವಿದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯ' ಎಂದು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ, 'ಮಾದಕವಸ್ತುಗಳ ಮಾರಾಟದ ವಿರುದ್ಧ ಕ್ರಮ ಜರುಗಿಸಲಿದ್ದು, ಮಾದಕ ವ್ಯಸನಿಗಳಿಗೆ ಸಮಾಲೋಚನೆ ನಡೆಸಲಾಗುವುದು' ಎಂದು ಹೇಳಿದರು.

ಜಾಗೃತಿ ಜಾಥಾ: ಆ ನಂತರ ವಿಧಾನಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ಜಾಗೃತಿ ಜಾಥಾ ನಡೆಯಿತು. ಜಾಥಾದಲ್ಲಿ ಕಾಲೇಜು ವಿದ್ಯಾರ್ಥಿಗಳು, ಸ್ವಯಂ ಸೇವಕರು,



ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ ಇದ್ದರು

ವಿವಿಧ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ವಿಜಯ ಕರ್ನಾಟಕ
ಮಂಗಳವಾರ,27 ಜೂನ್ 2023

ಡ್ರಗ್ಸ್ ಮುಕ್ತ ರಾಜ್ಯ ನಿರ್ಮಾಣಕ್ಕೆ ಪಣ

ಕಾಲ್ನಡಿಗೆ ಜಾಗೃತಿ ಜಾಥಾಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ

ಬೆಂಗಳೂರು: ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಕಾಲ್ನಡಿಗೆ ಜಾಗೃತಿ ಜಾಥಾಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ವಿಧಾನಸೌಧದ ಮುಂಭಾಗ ಜಾಗೃತಿ ಜಾಥಾಗೆ ಚಾಲನೆ ನೀಡಿದ ಬಳಿಕ ನಗರದ ನಾನಾ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳೊಂದಿಗೆ ಕಂಠೀರವ ಕ್ರೀಡಾಂಗಣದವರೆಗೆ ಡಿ.ಕೆ.ಶಿವಕುಮಾರ್ ಹೆಜ್ಜೆ ಹಾಕಿದರು. ಕ್ರೀಡಾಂಗಣ ತಲುಪಿದ ಬಳಿಕ ವಿದ್ಯಾರ್ಥಿಗಳೊಂದಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಚರ್ಚಿಸಿದರು. ಅಲ್ಲದೇ, ವಿದ್ಯಾರ್ಥಿಗಳೊಂದಿಗೆ ಸರತಿ ಸಾಲಿನಲ್ಲಿ ನಿಂತು ಉಪಹಾರ ಸೇವಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ''ಹೊರ ರಾಜ್ಯ, ದೇಶಗಳಿಂದ ರಾಜ್ಯದೊಳಗೆ ಬರುತ್ತಿರುವ ಮಾದಕ ವಸ್ತು ತಡೆಗಟ್ಟಿ ಪೆಡ್ಲರ್‌ಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ರಾಜ್ಯ ಸರಕಾರ ಶಕ್ತವಾಗಿದೆ. ಆದರೆ, ಯುವ ಪೀಳಿಗೆ ಮತ್ತು ವಿದ್ಯಾರ್ಥಿಗಳು ಕರ್ನಾಟಕವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವ ಸಂಕಲ್ಪ ಮಾಡಬೇಕಾಗಿದೆ,'' ಎಂದರು.



ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಜಾಗೃತಿ ಜಾಥಾದಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ ಮಾತನಾಡಿ, ''ಮಾದಕ ವ್ಯಸನಿಗಳನ್ನು ಅಪರಾಧಿಗಳಂತೆ ನೋಡಬೇಡಿ. ಅವರನ್ನು ದೂರ ಇಡಬೇಡಿ. ಅವರನ್ನು ಪ್ರೀತಿಯಿಂದ ವಿಶ್ವಾಸಕ್ಕೆ ತೆಗೆದುಕೊಂಡು ಸಮಾಲೋಚನೆ ನಡೆಸಿ ವ್ಯಸನ ಮುಕ್ತರನ್ನಾಗಿಸಬೇಕು. ಈ ನಿಟ್ಟಿನಲ್ಲಿ ವ್ಯಸನ ಮುಕ್ತಗೊಳಿಸಲು ಇಲಾಖೆಯಿಂದ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದು'' ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಾನಾ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಮಂಗಳವಾರ 27 ಜೂನ್ 2023
27 JUNE 2023

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ | ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ, ಜಾಗೃತಿ ಜಾಥಾ

ಮಕ್ಕಳೇ, ಮಾದಕ ವಸ್ತುಗಳಿಂದ ಅಂತರ ಕಾಯ್ದುಕೊಳ್ಳಿ...

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮಾದಕ ವಸ್ತುಗಳಿಂದ ಜನರನ್ನು ರಕ್ಷಿಸಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ವಿಧಾನಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ನಡೆದ ಜಾಗೃತಿ ಜಾಥಾದಲ್ಲಿ ಮಕ್ಕಳೊಂದಿಗೆ ಹೆಜ್ಜೆ ಹಾಕಿದರು.

ವಿಶ್ವ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಡಿಕೆಶಿ, ಮಾದಕ ವ್ಯಸನಗಳಿಂದ ಆಗಬಹುದಾದ ಅನಾಹುತಗಳ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಿದರು. ಈ ವೇಳೆ ಮಕ್ಕಳೊಂದಿಗೆ ಪ್ರತಿಜ್ಞಾ ವಿಧಿ ಸ್ವೀಕರಿಸಿದ ಅವರು, ಮಾದಕ ವಸ್ತುಗಳಿಂದ ದೂರವಿರುವಂತೆ ಕರೆ ನೀಡಿದರು.

ವಿಧಾನಸೌಧ ಹಾಗೂ ಹೈಕೋರ್ಟ್ ನಡುವೆ ಮಾದಕ ವ್ಯಸನ ವಿರೋಧಿ ದಿನ ಆಚರಿಸಲಾಗುತ್ತಿದೆ. ಇಡೀ ವಿಶ್ವದಲ್ಲೇ ಶಾಸಕಾಂಗ ಹಾಗೂ ನ್ಯಾಯಾಂಗ ಎದುರು- ಬದುರು ಇಲ್ಲ. ಮುಂದೆ ನಿಮ್ಮ ಪರಿಚಯಸ್ಥರು ಯಾರಾದರೂ ಮಾದಕವ್ಯಸನಿಗಳಾದರೆ ಅವರಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗಲಿದೆ. ಅದಕ್ಕೆ ಶಾಸಕಾಂಗ ನಿಯಮ ರೂಪಿಸಲಿದೆ ಎಂಬ ಸಂದೇಶ ನಿಮಗೆ ತಲುಪಿಸಲು ಈ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಳೆದೆರಡು ವರ್ಷಗಳಲ್ಲಿ ಡ್ರಗ್ಸ್ ದಂಧೆಯಲ್ಲಿ ದೊಡ್ಡ ದೊಡ್ಡವರು ಸಿಕ್ಕಿಬಿದ್ದು ಯಾವ ರೀತಿಯ ತೊಂದರೆ ಅನುಭವಿಸಿದ್ದಾರೆ ಎಂಬುದನ್ನು ನೋಡಿದ್ದೀರಿ. ಇದು ನಿಮ್ಮ ಜೀವನದಲ್ಲಿ ಎಚ್ಚರಿಕೆ ಮೂಡಿಸಲಿ ಎಂದರು.

ಕ್ರೀಡಾ ಸಚಿವ ಬಿ. ನಾಗೇಂದ್ರ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ವಿಧಾನಪರಿಷತ್ ಸದಸ್ಯ ನಾಗರಾಜ ಯಾದವ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಭಾಗವಹಿಸಿದ್ದರು.



ವಿಶ್ವ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೋಮವಾರ ವಿಧಾನಸೌಧದ ಮುಂಭಾಗ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ನಾಗೇಂದ್ರ ಮತ್ತಿತರರು ಮಕ್ಕಳೊಂದಿಗೆ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕನ್ನಡಪ್ರಭ
ಮಂಗಳವಾರ 27.6.2023

ಯುವಕರನ್ನು ಡ್ರಗ್ಸ್‌ನಿಂದ ದೂರ ಮಾಡಿ: ದಿನೇಶ್

ಬೆಂಗಳೂರು: ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಮಾದಕ ವ್ಯಸನಗಳ ಚಟ ಹೆಚ್ಚುತ್ತಿದೆ. ಇದು ದೇಶದ ಬೆಳವಣಿಗೆಗೆ ತುಂಬಾ ಅಪಾಯಕಾರಿಯಾಗಿದ್ದು, ಯುವಕರನ್ನು ಮಾದಕ ವ್ಯಸನಗಳಿಂದ ಹೊರ ತರಲು



ಶಿಕ್ಷಕರು ಹಾಗೂ ಪೋಷಕರು ಒಟ್ಟಾಗಿ ನಿಗಾವಹಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಾದಕ ವಸ್ತುಗಳ ಬಳಕೆ ನಿಯಂತ್ರಿಸಲು ಪೊಲೀಸ್ ಇಲಾಖೆಯಿಂದ ಮಾತ್ರವೇ ಸಾಧ್ಯವಿಲ್ಲ, ಪೋಷಕರು, ಶಿಕ್ಷಕರಿಂದ ಬೆಂಬಲದ ವ್ಯವಸ್ಥೆ (ಸಪೋರ್ಟಿಂಗ್ ಸಿಸ್ಟಂ) ರೂಪುಗೊಳ್ಳಬೇಕು ಎಂದು ಹೇಳಿದರು. ಮಾದಕ ವಸ್ತುಗಳ ಕಡೆಗೆ ಯಾರಾದರೂ ಆಕರ್ಷಿತರಾದರೆ ಜತೆಗಿರುವ ಸ್ನೇಹಿತರು, ಶಿಕ್ಷಕರಿಗೆ ಸುಳಿವು ಸಿಗುತ್ತದೆ. ಈ ವೇಳೆ ಅವರನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಬೇಕು. ವ್ಯಸನಕ್ಕೆ ದಾಸರಾದವರನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು. ಇದರಿಂದ ವ್ಯಸನಿಗಳು ಮತ್ತಷ್ಟು ಖಿನ್ನತೆಗೆ ಒಳಗಾಗಿ ಹೆಚ್ಚು ಮಾದಕ ವ್ಯಸನಿ ಗಳಾಗುತ್ತಾರೆ. ಹೀಗಾಗಿ ಅವರನ್ನು ಚಟದಿಂದ ಹೊರಗೆ ತರುವ ನಿಟ್ಟಿನಲ್ಲಿ ಮಾತ್ರ ಯೋಚಿಸಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಸೇರಿದಂತೆ ಹಲವರು ಹಾಜರಿದ್ದರು.

ನಮ್ಮ ಬೆಂಗಳೂರು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಸೋಮವಾರ 26 ಜೂನ್ 2023
26 JUNE 2023

» **ದಿನಾಚರಣೆ:** ಲಯನ್ಸ್ ಕ್ಲಬ್ ಆಫ್ ಬೆಂಗಳೂರು ನಾರ್ಥ್ ಚಾರಿಟೇಬಲ್ ಟ್ರಸ್ಟ್, ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜು ಆಯೋಜನೆ. ಮಾದಕ ದ್ರವ್ಯ ಸೇವನೆ



ಮತ್ತು ಅಕ್ರಮ ಕಳ್ಳಸಾಗಣೆ ವಿರುದ್ಧ ಅಂತಾರಾಷ್ಟ್ರೀಯ ದಿನಾಚರಣೆ- 2023. ಬೆಳಗ್ಗೆ 10ಕ್ಕೆ ಬಿಬಿಎಂಪಿ ಪಶ್ಚಿಮ ವಲಯ ಆರೋಗ್ಯಾಧಿಕಾರಿ ಕಚೇರಿಯಿಂದ ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜಿನವರೆಗೆ ಜನಜಾಗೃತಿ ಜಾಥಾ. ಉದ್ಘಾಟನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್. ಮುಖ್ಯ ಅತಿಥಿಗಳು: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಶಂಕರ್, ಪಾಲಿಕೆ ಪಶ್ಚಿಮ ವಲಯದ ಆಯುಕ್ತ ಡಾ.ಆರ್.ಎಲ್. ದೀಪಕ್, ಜಂಟಿ ಆಯುಕ್ತ ಡಾ.ಲೋಕನಾಥ್, ಶೇಷಾದ್ರಿಪುರಂ ವಿದ್ಯಾಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿ **ಡಾ.ವೂಡೇ ಪಿ. ಕೃಷ್ಣ** ಮತ್ತಿತರರು. **ಸ್ಥಳ: ಕಾಲೇಜು ಸಭಾಂಗಣ, ನಂ.40, ಬಾಲಕಿಯರ ಶಾಲೆ ಬೀದಿ, ಶೇಷಾದ್ರಿಪುರ. 10.30ಕ್ಕೆ.**

ಪ್ರಜಾವಾಣಿ
ಸೋಮವಾರ • ಜೂನ್ 26, 2023

ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಣೆ ವಿರುದ್ಧ ಅಂತರರಾಷ್ಟ್ರೀಯ ದಿನಾಚರಣೆ

ಉದ್ಘಾಟನೆ: ದಿನೇಶ್ ಗುಂಡೂರಾವ್, **ಅತಿಥಿಗಳು:** ಜೈಶಂಕರ್, ದೀಪಕ್ ಆರ್.ಎಲ್., ಲೋಕನಾಥ್, ರಜನಿ ಪಿ., ವೂಡೇ ಪಿ. ಕೃಷ್ಣ, **ಆಯೋಜನೆ:** ಲಯನ್ಸ್ ಕ್ಲಬ್ ಆಫ್ ಬೆಂಗಳೂರು ನಾರ್ಥ್ ಚಾರಿಟಬಲ್ ಟ್ರಸ್ಟ್, ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, **ಸ್ಥಳ:** ಶೇಷಾದ್ರಿ ಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10



ದಿನೇಶ್ ಗುಂಡೂರಾವ್

ವಿಜಯ ಕರ್ನಾಟಕ
ಸೋಮವಾರ,26 ಜೂನ್ 2023

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು: ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಾಣಿಕೆ ವಿರುದ್ಧ ಅಂತರಾಷ್ಟ್ರೀಯ ದಿನಾಚರಣೆ. ಉಪಸ್ಥಿತಿ: ಆರೋಗ್ಯ ಸಚಿವ ಸಚಿವ ದಿನೇಶ್ ಗುಂಡೂರಾವ್.

ಸ್ಥಳ: ಬಿಬಿಎಂಪಿ ಪಶ್ಚಿಮ ವಲಯ ಕಚೇರಿಯಿಂದ ಕಾಲೇಜಿನವರೆಗೆ ಜಾಥಾ. ಬೆಳಗ್ಗೆ 10.

ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ ವಿಚಾರ ಸಂಕಿರಣ

ಡಾ. ಅಂಬೇಡ್ಕರ್ ರಾಷ್ಟ್ರೀಯ ಚಿಕಿತ್ಸಕ



ಕಲಬುರಗಿ: ಅಂಬೇಡ್ಕರ್ ವ್ಯಕ್ತಿಯಲ್ಲ. ಶಕ್ತಿ, ರಾಷ್ಟ್ರೀಯ ಚಿಕಿತ್ಸಕ. ಸಾವಿರಾರು ಜಾತಿ, ಮತ, ಧರ್ಮ, ವಿಭಿನ್ನ ಭಾಷೆ, ಪ್ರಾಂತ್ಯಗಳಿಂದ ನಮ್ಮ ಛಿದ್ರಗೊಂಡಿದ್ದ ದೇಶಕ್ಕೆ ಭಾರತ ಎಂಬ ಪರಿಕಲ್ಪನೆ ಕೊಟ್ಟವರು ಅಂಬೇಡ್ಕರ್ ಎಂದು ಸಾಹಿತಿ ಡಿ.ಎಸ್. ವೀರಯ್ಯ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಡಿ.ಎಸ್.ವಿ. ಫೌಂಡೇಶನ್ ಶನಿವಾರ ಆಯೋಜಿಸಿದ್ದ 'ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ' ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ನಂತರ ರಾಜ್ಯದಲ್ಲಿ ದೊಡ್ಡ ಹೋರಾಟಗಾರರಾಗಿ ಗುರುತಿಸಿಕೊಂಡ ಹಿರಿಯ ನಾಯಕ ಬಸವಲಿಂಗಪ್ಪ ಅವರ ಬಗೆಗಿನ ಒಲವು ನಾನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಕಾರಣ. ಅಂಬೇಡ್ಕರ್ ಅವರ ಬರಹಗಳು ಚಲನಾಶೀಲ ಸಾಹಿತ್ಯವಾಗಿ ಉಳಿದುಕೊಂಡಿದ್ದು, ರಾಷ್ಟ್ರೀಯತೆ ಬಿತ್ತುವ ಸಾಹಿತಿ ಆಗಿದ್ದಾರೆ ಎಂದು ಹೇಳಿದರು.

ನಮಗೆ ಶಿಕ್ಷಣ ಇದ್ದರೆ ಗೌರವದ ಬದುಕು, ನಾಯಕ, ಆದರ್ಶ ಜೀವನ ಸಾಗಿಸಲು ಸಾಧ್ಯ. ಸಮಾಜದಲ್ಲಿ ಇಂದು ಜನರ ನಡುವೆ ಬಹಳ ಕಂದಕ ಏರ್ಪಟ್ಟಿದೆ. ಅಸಮಾನತೆ ಹೆಚ್ಚಾಗುತ್ತಿದೆ. ಈ ಕುರಿತು ಅರಿವು ಮೂಡಿಸಲು ಇಂತಹ ಸಾಹಿತ್ಯ ಬರವಣಿಗೆಯ ಅಗತ್ಯವಿದೆ. ಚಲನಾಶೀಲ, ಬದುಕಿ ಕಟ್ಟುವ, ಸಮಾಜ ಒಗ್ಗೂಡಿಸುವ, ಕಳಕಳಿಯ ಸಾಹಿತಿಗಳ ಅಗತ್ಯವಿದೆ ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮಾತನಾಡಿ, ಡಿ.ಎಸ್. ವೀರಯ್ಯ ಅವರು ಉದಾತ್ತ ಮನೋಭಾವ, ಉನ್ನತ ಚಿಂತನೆ ಉಳ್ಳವರು ಹಾಗೂ ಹಲವು ಜನಪರ ಚಿಂತನೆಗಳ ಪ್ರತಿಫಲ. ಡಾ. ಬಿ.ಆರ್. ಅಂಬೇಡ್ಕರ್ ಅವರಿಂದ ಸ್ಫೂರ್ತಿ ಗೊಂಡ ಡಿ.ಎಸ್. ವೀರಯ್ಯ ಅವರು ಇತರರ ಒಳಿತನ್ನು ಬಯಸಿದವರು ಹಾಗೂ ಅವರ ಪೋಷಕರ ಒಳಿತಿಗಾಗಿ ಚಿಂತಿಸಿದವರು ಅವರ ಉದಾತ್ತ ಚಿಂತನೆಯನ್ನು ನಾವೆಲ್ಲ ಮೈಗೂಡಿಸಿಕೊಳ್ಳಬೇಕು. ಅವರ ಒಳ್ಳೆಯ ಆಲೋಚನೆಗಳು ನಮಗೆ ಸ್ಫೂರ್ತಿಯಾಗಬೇಕು ಎಂದು ಹೇಳಿದರು.

ಸಮಾಜದ ಎಲ್ಲರನ್ನು ಒಳಗೊಳ್ಳುವ ಸಾಹಿತ್ಯ ಪ್ರಕಾರ ರಚಿಸಿದ ಡಿ.ಎಸ್. ವೀರಯ್ಯ ಅವರು ರಾಜಕೀಯ ನಾಯಕರೂ ಕೂಡ. ಹುಟ್ಟು ಹೋರಾಟಗಾರರಾದ ಅವರು ಎಂದೂ ಹಣದ ಹಿಂದೆ ಹೋದವರಲ್ಲ. ಶಿಕ್ಷಣದಿಂದ ಆಮೂಲಾಗ್ರ ಬದಲಾವಣೆ ತರಲು ಹೊರಟಿದ್ದಾರೆ. ವೈಚಾರಿಕತೆಗೆ ಒತ್ತುಕೊಟ್ಟ ಇವರ ಸಾಹಿತ್ಯ ಅಧ್ಯಯನದಿಂದ ನಮಗೆ ಚಿಂತನಾ ನಾಯಕತ್ವ ದೊರಕುತ್ತದೆ ಎಂದು ಅಭಿಪ್ರಾಯಪಟ್ಟರು.

ಉತ್ತಮ ಚಿಂತನೆ ಹಾಗೂ ಎತ್ತರದ ಆಲೋಚನೆಯಿಂದ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯುತ್ತೇವೆ. ಅದೇ ರೀತಿಯಿಂದ ಡಿ.ಎಸ್. ವೀರಯ್ಯ ಅವರ ವ್ಯಕ್ತಿತ್ವಕ್ಕೆ ನಾಲ್ಕು ಮುಖಗಳಿದ್ದು, ಅವುಗಳನ್ನು ಸಾಹಿತ್ಯ, ಸಮಾಜ, ರಾಜಕೀಯ, ರಾಷ್ಟ್ರೀಯ ಮುಖಗಳೆಂದು ಗುರುತಿಸಬಹುದು ಎಂದರು.

ಆಡಿದ ಮಾತು ಗಾಳಿಯಲ್ಲಿ ಹೋಗುತ್ತದೆ ಆದರೆ ನಾವು ಮಾಡಿದ ಕೆಲಸಗಳು ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ಪದವಿಗಳು, ಅಧಿಕಾರ, ಶಾಶ್ವತ ಅಲ್ಲ. ನಾವು ರಚಿಸಿದ ಬರವಣಿಗೆ ಮಾತ್ರ ನಮ್ಮ ಬದುಕಿನ ನಂತರವೂ ಉಳಿಯುತ್ತದೆ. ಹಾಗಾಗಿ ನಾವು ಬರವಣಿಗೆಯಲ್ಲಿ ತೊಡಗಿಕೊಳ್ಳಬೇಕು. ದಮನಿತರ ದನಿಯಾಗಿ ಬದುಕು ಬರಹ ವನ್ನು ಆಳವಾಗಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿನ ದೌರ್ಬಲ್ಯಗಳನ್ನು ತೋರಿಸಿದವರು. ಹಿಂದೂ ಸಮಾಜದ ಜಾತಿ ವ್ಯವಸ್ಥೆ ಬಹುಮಹಡಿ ಕಟ್ಟಡ ಇದ್ದಂತೆ ಎಂದು ತಿಳಿದಿದ್ದ ಅವರು, ಒಂದು ವರ್ಗವನ್ನು ತುಚ್ಛವಾಗಿ ನೋಡುವ ಪ್ರವೃತ್ತಿ ಹಿಂದು ಧರ್ಮದಲ್ಲಿದೆ ಎಂದು ಅಂಬೇಡ್ಕರ್ ವಿಶ್ಲೇಷಣೆ ಮಾಡಿದ್ದರು ಎಂದು ಹೇಳಿದರು.

ಇಡೀ ಸಮಾಜದ ಮನುಕುಲಕ್ಕೆ ಒಳಿತು ಮಾಡುವ ಕೆಲಸ ಮಾಡಿದ ಅಂಬೇಡ್ಕರ್ ಅವರು ಇಲ್ಲಿನ ಸಮಸ್ಯೆಗಳು ಕಾನೂನಿನಲ್ಲಿ ನಿವಾರಣೆಯಾದರೆ ಸಾಲದು ಸಾಮಾಜಿಕ ಬದಲಾವಣೆ ಆಗಬೇಕು ಎಂದು ಭಾವಿಸಿದ್ದರು.

ಶ್ರೇಷ್ಠವಾದ ಹಿಂದೂ ಧರ್ಮದಲ್ಲೇ ಹಲವು ಸಮುದಾಯಗಳನ್ನು ತುಳಿಯುವ ಕೆಲಸವು ಹಿಂದು ಧರ್ಮದಲ್ಲಿ ಇದೆ. ದರಿದ್ರ, ಪಾಪಿಗಳು, ಮೂರ್ಖರಲ್ಲಿ ದೈವತ್ವವನ್ನು ಕಾಣಬೇಕು ಎಂದು ವಿವೇಕಾನಂದ ಹೇಳಿದ್ದರು ಎಂದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ ಮಾತನಾಡಿ, ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಪ್ರಚಲಿತಕ್ಕೆ ಬಂದ ಡಿ.ಎಸ್. ವೀರಯ್ಯ ಅವರು ಒಬ್ಬ ಪ್ರಾಧ್ಯಾಪಕರು ಬರೆದು ಪ್ರಕಟಿಸಿದಷ್ಟು ಸಾಹಿತ್ಯ ರಚಿಸಿದ್ದಾರೆ. ಅವರ ಸಾಹಿತ್ಯ ಜನಮುಖಿ ಬರಹಗಳಾಗಿವೆ ಎಂದು ಹೇಳಿದರು.

ಸತ್ಯವನ್ನು ನಾವು ನಿತ್ಯ ಹೇಳಬೇಕು. ಹಾಗಾಗಿ ಹೆಚ್ಚೆಚ್ಚು ಜನ ಬರೆಯಬೇಕು. ಅಕ್ಷರವಂತರಾದ ನಾವು ಸಮಾಜದಲ್ಲಿನ ಕಸವನ್ನು ತೆಗೆಯುವ ಕೆಲಸ ಮಾಡಬೇಕು. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆತಂಕದಿಂದ ಇದ್ದ ಸಾಹಿತಿಗಳು ಈಗ ಅದರಿಂದ ಮುಕ್ತರಾಗಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಿ.ಎಸ್.ವಿ ಫೌಂಡೇಶನ್ ಸದಸ್ಯ ವಿಜಯ ಕುಮಾರ್, ಶ್ರೀಶೈಲಾ ನಾಗರಾಳ, ಡಾ. ಚೆನ್ನಸ್ವಾಮಿ ಸೋಸಲೆ, ಉಪನ್ಯಾಸಕ ಸೂರ್ಯಕಾಂತ ಸುಜ್ಯಾತ, ಹಾಜರಿದ್ದರು.

ಡಾ. ಸುನೀತಾ ಮೂಲಿಗೆ ಕಾರ್ಯಕ್ರಮ ನಿರೂಪಿಸಿದರು. ಡಾ. ಎಂ.ಬಿ. ಕಟ್ಟಿ ಸ್ವಾಗತಿಸಿದರು.

ಪ್ರಜಾವಾಣಿ

ಸೋಮವಾರ ● ಜೂನ್ 12, 2023

ಹಂ.ಪ. ನಾಗರಾಜಯ್ಯಗೆ 'ಚಿದಾನಂದ ಪ್ರಶಸ್ತಿ' ಪ್ರದಾನ

'ಕನ್ನಡ ಕೃತಿಗಳು ಭಾಷಾಂತರವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮಾತೃ ಭಾಷೆ ಜಾಗತಿಕ ಮಟ್ಟದಲ್ಲಿ ಬೆಳೆಯಲು ಕನ್ನಡದ ಪ್ರಮುಖ ಕೃತಿಗಳು ಇಂಗ್ಲಿಷ್, ಜರ್ಮನ್ ಸೇರಿ ವಿವಿಧ ಭಾಷೆಗಳಿಗೆ ಭಾಷಾಂತರಗೊಳ್ಳಬೇಕು' ಎಂದು ಸಂಶೋಧಕ ಹಂ.ಪ. ನಾಗರಾಜಯ್ಯ ತಿಳಿಸಿದರು.

ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಚಿದಾನಂದ ಪ್ರಶಸ್ತಿ' ಸ್ವೀಕರಿಸಿದರು. ₹ 10 ಸಾವಿರ ನಗದು ಇರುವ ಈ ಪ್ರಶಸ್ತಿಯನ್ನು ಸಂಶೋಧಕ ಎಂ. ಚಿದಾನಂದಮೂರ್ತಿ ಹೆಸರಿನಲ್ಲಿ ನೀಡಲಾಗುತ್ತಿದೆ.

'ಸಾಗರ, ಬೆಟ್ಟಗಳನ್ನು ದಾಟಿ ಕನ್ನಡದ ಕಂಪು ಪಸರಿಸಲು ಕನ್ನಡಿಗರು ಬೇರೆ ಬೇರೆ ಭಾಷೆಗಳಲ್ಲಿ ಪ್ರಾವಿಣ್ಯ ಸಂಪಾದಿಸುವುದು ಮುಖ್ಯ. ಇಂದು ಕರ್ನಾಟಕದಲ್ಲಿರುವಷ್ಟೆ ವಿದೇಶದಲ್ಲಿಯೂ ಕನ್ನಡ ಸಶಕ್ತವಾಗಿದೆ. ಅಲ್ಲಿಗೆ ನಮ್ಮ ಸಾಹಿತ್ಯ ಕೊಂಡೊಯ್ಯಲು ನಾವು ಬೇರೆ ಭಾಷೆಗಳ ಮೇಲೆ ಹಿಡಿತ ಸಾಧಿಸುವುದು ಅಗತ್ಯ. ಈ ನಿಟ್ಟಿನಲ್ಲಿ ನಾನು ಆಂಗ್ಲ ಮಾಧ್ಯಮ ಶಿಕ್ಷಣವನ್ನು ಬೆಂಬಲಿಸುತ್ತೇನೆ. ಆದರೆ, ಆಂಗ್ಲ ಭಾಷೆಯ ಜೊತೆಗೆ ಕನ್ನಡವನ್ನು ಕಾಪಾಡಿಕೊಂಡು ಹೋಗಬೇಕು' ಎಂದು ಹೇಳಿದರು.



ಹಂ.ಪ. ನಾಗರಾಜಯ್ಯ ಅವರಿಗೆ 'ಚಿದಾನಂದ ಪ್ರಶಸ್ತಿ'ಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. ಸುಂಕಂ ಗೋವರ್ಧನ, ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಅಧ್ಯಕ್ಷ ಸಿ.ಯು. ಮಂಜುನಾಥ್ ಹಾಗೂ ಪ್ರೊ.ಎನ್.ಎಸ್. ಸತೀಶ್ ಇದ್ದಾರೆ

'ಚಿದಾನಂದ ಮೂರ್ತಿ ಅವರ ಹೆಸರಿನ ಪ್ರಶಸ್ತಿ ಪಡೆಯುತ್ತಿರುವುದು ನನ್ನಲ್ಲಿ ಪುಳಕವನ್ನುಂಟು ಮಾಡಿದೆ. ಅವರು ಕನ್ನಡ ನಾಡಿನ ಮೇರು ವ್ಯಕ್ತಿಯಾಗಿದ್ದು, ಹಲವು ಪ್ರತಿಭೆಗಳನ್ನು ಒಳಗೊಂಡಿರುವ ಸಂಕ್ಷಿಪ್ತ ಬ್ರಹ್ಮಾಂಡ' ಎಂದರು.

ಅಭಿನಂದನಾ ಭಾಷಣ ಮಾಡಿದ ಪ್ರಾಧ್ಯಾಪಕ ಸುಂಕಂ ಗೋವರ್ಧನ, 'ಕನ್ನಡದಲ್ಲಿ ಜೈನ ಧರ್ಮದ ಆಳ ಅಗಲವನ್ನು ಹಂ.ಪ. ನಾಗರಾಜಯ್ಯ ಅವರಷ್ಟು ವಿಸ್ತಾರವಾಗಿ ಅರಿತವರು ಮತ್ತು ಬರೆದವರು ಬೇರೆ ಯಾರೂ ಇಲ್ಲ' ಎಂದು ಪ್ರಶಂಸಿಸಿದರು.

ಶಿಕ್ಷಣ ಪುರವಣಿ
ಓದಿರಿ

ಉದಯವಾಣಿ

ಸೋಮವಾರ, ಜೂನ್ 12, 2023

ಪಂಪನ ಶಾಸನ ಇರುವ ಸ್ಥಳಗಳನ್ನು ಸರ್ಕಾರ ಅಭಿವೃದ್ಧಿಪಡಿಸಲಿ: ಹಂಪ ನಾಗರಾಜಯ್ಯ

ಕನ್ನಡ ಸಾಹಿತ್ಯ ಹಬ್ಬಲು ಆಂಗ್ಲ ಭಾಷೆ ಪೂರಕ

ಬೆಂಗಳೂರು: ಕನ್ನಡ ಜಾಗತಿಕ ಮಟ್ಟದಲ್ಲಿ ಬೆಳೆಯಲು ಅದು ಇಂಗ್ಲೀಷ್, ಫ್ರೆಂಚ್, ಜರ್ಮನ್ ಭಾಷೆಗಳಿಗೆ ಭಾಷಾಂತರಗೊಳ್ಳಬೇಕು. ಈ ನಿಟ್ಟಿನಲ್ಲಿ ನಾನು ಆಂಗ್ಲ ಮಾಧ್ಯಮ ಶಿಕ್ಷಣವನ್ನು ಬೆಂಬಲಿಸುತ್ತೇನೆ. ಆದರೆ, ಆಂಗ್ಲ ಭಾಷೆಯ ಜೊತೆಗೆ ಕನ್ನಡವನ್ನು ಕಾಪಾಡಿಕೊಂಡು ಹೋಗಬೇಕು ಎಂದು ಖ್ಯಾತ ವಿದ್ವಾಂಸ, ಸಾಹಿತಿ ಡಾ. ಹಂ. ಪ. ನಾಗರಾಜಯ್ಯ ಹೇಳಿದರು.



ಅವರು ಶೇಷಾದ್ರಿಪುರಂ ಕಾಲೇಜಿನ ಕಾನ್ಫರೆನ್ಸ್ ಹಾಲ್‌ನಲ್ಲಿ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಮತ್ತು ಶೇಷಾದ್ರಿಪುರಂ ಸಂಜೆ ಕಾಲೇಜಿನ ಗೋಧೂಳಿ ಕನ್ನಡ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿದಾನಂದ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಇಂಗ್ಲಿಷ್‌ನಷ್ಟೆ ಪ್ರಾಬಲ್ಯವನ್ನು ಫ್ರೆಂಚ್ ಮತ್ತು ಜರ್ಮನ್ ಭಾಷೆಗಳು ಹೊಂದಿವೆ. ನಮ್ಮ ಸಾಹಿತ್ಯ ಆ ಭಾಷೆಗಳಿಗೂ ಹೋಗಬೇಕು. ಸಾಗರ, ಬೆಟ್ಟಗಳನ್ನು ದಾಟಿ ಕನ್ನಡದ ಕಂಪು ಪಸರಿಸಲು ಕನ್ನಡಿಗರು ಬೇರೆ ಬೇರೆ ಭಾಷೆಗಳಲ್ಲಿ ಪ್ರಾವಿಣ್ಯ ಸಂಪಾದಿಸುವುದು ಮುಖ್ಯ. ಇಂದು ಕರ್ನಾಟಕದಲ್ಲಿರುವಷ್ಟೆ ವಿದೇಶದಲ್ಲಿಯೂ ಕನ್ನಡ ಸಶಕ್ತವಾಗಿದೆ. ಅಲ್ಲಿಗೆ ನಮ್ಮ ಸಾಹಿತ್ಯವನ್ನು ಕೊಂಡೊಯ್ಯಲು ನಾವು ಬೇರೆ ಭಾಷೆಗಳ ಮೇಲೆ ಹಿಡಿತ ಸಾಧಿಸುವುದು ಅಗತ್ಯ ಎಂದು ಅವರು ಅಭಿಪ್ರಾಯ ಪಟ್ಟರು.

ಚಿದಾನಂದ ಮೂರ್ತಿ ಅವರ ಹೆಸರಿನ ಪ್ರಶಸ್ತಿ ಪಡೆಯುತ್ತಿರುವುದು ನನ್ನಲ್ಲಿ ಪುಳಕವನ್ನುಂಟು ಮಾಡಿದೆ. ಅವರು ಕನ್ನಡ ನಾಡಿನ ಮೇರು ವ್ಯಕ್ತಿ. ಹಲವು ಪ್ರತಿಭೆಗಳನ್ನು ಒಳಗೊಂಡಿದ್ದ ಸಂಕ್ಷಿಪ್ತ ಬ್ರಹ್ಮಾಂಡ. ಅವರು ನನಗೆ ತುಮಕೂರಿನಲ್ಲಿ 1953ರಲ್ಲಿ ಇಂಟರ್ ಮಿಡಿಯೆಟ್‌ನಲ್ಲಿ ಒಂದು ತಿಂಗಳು ಪಾಠ ಮಾಡಿದ್ದರು. ಆಗ ಅವರು ಒಂದೋ ತಮ್ಮ ವಸತಿ ನಿಲಯದ ಕೊಠಡಿ ಅಥವಾ ಗ್ರಂಥಾಲಯ ದಲ್ಲಿ ಮಾತ್ರ ಸಮಯ ಕಳೆಯುತ್ತಿದ್ದರು. ಈ ರೀತಿ ಗ್ರಂಥಾಲಯದಲ್ಲೇ ಸದಾ ಅಧ್ಯಯನ ನಿರತರಾಗಿದ್ದ ಚಿದಾನಂದ ಮೂರ್ತಿ ಆ ಬಳಿಕ ಹೋರಾಟದ ಬಯಲಿಗೆ ಇಳಿದದ್ದು ರೋಚಕ ಸಂಗತಿ ಎಂದು ಹಂಪನಾ ವ್ಯಾಖ್ಯಾನಿಸಿದರು. ಹಾಗೆಯೇ ತಮ್ಮ ಮತ್ತು ಚಿದಾನಂದ ಮೂರ್ತಿ ಅವರ ಒಡನಾಟವನ್ನು ಸ್ಮರಿಸಿಕೊಂಡರು.

ಅಭಿನಂದನಾ ಭಾಷಣ ಮಾಡಿದ ಡಾ. ಸುಂಕಂ ಗೋವರ್ಧನ್, ಕನ್ನಡದಲ್ಲಿ ಜೈನ ಧರ್ಮದ ಆಳ ಅಗಲವನ್ನು ಹಂಪನಾ ಅವರಷ್ಟು ವಿಸ್ತಾರವಾಗಿ ಅರಿತವರು ಮತ್ತು ಬರೆದವರು ಬೇರೆ ಯಾರೂ ಇಲ್ಲ ಎಂದು ಪ್ರಶಂಶಿಸಿದರು.

ಹಂಪ ನಾಗರಾಜಯ್ಯ ಅವರು ಶಬ್ದಕೋಶ ರಚನೆ, ಸಂಶೋಧನೆ, ಅಧ್ಯಯನ, ಸಂಪಾದನೆ, ಸೃಜನಶೀಲ ಸಾಹಿತ್ಯ, ಶಾಸನಗಳ ಅಧ್ಯಯನ, ಲೇಖನ ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಅವರ ಮೇಲೆ ಹತ್ತು ಹಲವು ಅಭಿನಂದನಾ ಕೃತಿಗಳು ಪ್ರಕಟಗೊಂಡಿವೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಪ್ರದಾನ ಸಮಿತಿಯ ಅಧ್ಯಕ್ಷ ಡಾ. ಸಿ. ಯು. ಮಂಜುನಾಥ್, ಗೋಧೂಳಿ ಕನ್ನಡ ಸಂಘದ ಸಂಚಾಲಕ ಡಾ. ಸತ್ಯಮಂಗಲ ಮಹಾದೇವ, ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್. ಎಸ್. ಸತೀಶ್ ಇತರರು ಇದ್ದರು.

ಕುರ್ಕಿಯಾಲವನ್ನು ಮೊದಲು ಅಭಿವೃದ್ಧಿಪಡಿಸಿ

ಪಂಪ ಕನ್ನಡದ ಆದಿ ಕವಿ. ಆವನ ತಮ್ಮ ಜಿನವಲ್ಲಭ ತೆಲುಗಿನ ನೈಜ ಆದಿ ಕವಿ. ಆದರೆ ತೆಲುಗರು ಜಿನವಲ್ಲಭನ ಬಳಿಕದ ನಾಣಯ್ಯರನ್ನು ತಮ್ಮ ಆದಿಕವಿ ಎಂದು ಹೇಳಿಕೊಳ್ಳುತ್ತಾರೆ. ಅಣ್ಣತಮ್ಮಂದಿರು ಎರಡು ಭಾಷೆಯ ಆದಿಕವಿಗಳಾಗಿರುವ ವಿಶಿಷ್ಟ ವಿದ್ಯಮಾನವಿದು. ಆದರೆ ಪಂಪ ಮತ್ತು ಜಿನವಲ್ಲಭ ಅವರಿಗೆ ಸಂಬಂಧಪಟ್ಟ ಜಾಗಗಳು ಪಾಳು ಬಿದ್ದಿವೆ. ಕರ್ನಾಟಕ ಮತ್ತು ತೆಲುಗು ಸರ್ಕಾರಗಳು ಇದರ ಈ ಸ್ಥಳಗಳ ಅಭಿವೃದ್ದಿಗೆ ಶ್ರಮಿಸಬೇಕು ಎಂದರು. ಪಂಪ ಶಾಸನ ಇರುವ ಕುರ್ಕಿಯಾಲವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಬೇಕು. ರಾಜ್ಯ, ತೆಲುಗು ಸರ್ಕಾರಗಳು ಪ್ರತಿ ವರ್ಷ ಎರಡ್ಮೂರು ಬಸ್ಸುಗಳಲ್ಲಿ ಸಾಹಿತಿಗಳನ್ನು ಅಲ್ಲಿಗೆ ಕೊಂಡೊಯ್ಯುದು ಸಾಹಿತ್ಯ, ಸಂಶೋಧನಾ ಚಟುವಟಿಕೆಗೆ ಒತ್ತು ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಲವ್ ಆಟ್ ಮನಿ ಸೈಟ್!

ನಾನು ಮತ್ತು ಕಮಲಾ ಹಂಪನಾ ಆರು ವರ್ಷ ಒಟ್ಟಿಗೆ ಓದಿದವರು. ನಮ್ಮದು ಲವ್ ಆಟ್ ಫಸ್ಟ್ ಸೈಟ್ ಅಲ್ಲ, ಲವ್ ಆಟ್ ಮನಿ ಸೈಟ್. ಇಷ್ಟು ಸಮಯ ಪರಸ್ಪರ ನೋಡಿಕೊಂಡಿದ್ದು ಇನ್ನು ಬೇರೊಬ್ಬರನ್ನು ನೋಡಿ ಮದುವೆ ಆಗುವುದು ಏನಕ್ಕೆ ಎಂದುಕೊಂಡು ಮದುವೆ ಮಾಡಿಕೊಂಡೆವು ಎಂದು ಹಂಪ ನಾಗರಾಜಯ್ಯ ಹಾಸ್ಯ ಚಟಾಕಿ ಹಾರಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ 12 ಜೂನ್ 2023
12 JUNE 2023

ಕನ್ನಡ ಭಾಷೆ ಬೆಳವಣಿಗೆಗೆ ಇಂಗ್ಲಿಷ್ ಮಾಧ್ಯಮ ಅಗತ್ಯ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜಾಗತಿಕ ಮಟ್ಟದಲ್ಲಿ ಕನ್ನಡ ಭಾಷೆ ಪಸರಿಸುವ ನಿಟ್ಟಿನಲ್ಲಿ, ಕನ್ನಡದ ಜತೆಗೆ ಇಂಗ್ಲಿಷ್ ಮಾಧ್ಯಮ ಶಿಕ್ಷಣವನ್ನು ಬೆಂಬಲಿಸುವುದಾಗಿ ಹಿರಿಯ ವಿದ್ವಾಂಸ ಡಾ.ಹಂ.ಪ. ನಾಗರಾಜಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಮತ್ತು ಶೇಷಾದ್ರಿಪುರಂ ಸಂಜೆ ಕಾಲೇಜಿನ ಗೋಧೂಳಿ ಕನ್ನಡ ಸಂಘ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಚಿದಾನಂದ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು. ಫ್ರೆಂಚ್ ಮತ್ತು ಜರ್ಮನ್ ಭಾಷೆಗಳು ಇಂಗ್ಲಿಷ್‌ನಷ್ಟೇ ಪ್ರಾಬಲ್ಯ ಹೊಂದಿವೆ. ಆದ್ದರಿಂದ ಸಾಗರ, ಬೆಟ್ಟಗಳನ್ನು ದಾಟಿ ಕನ್ನಡದ ಕಂಪು ಪಸರಿಸಲು ಕನ್ನಡಿಗರು ಬೇರೆ ಭಾಷೆಗಳಲ್ಲಿಯೂ ಪ್ರಾವಿಣ್ಯತೆಯೊಂದಿಗೆ ಹಿಡಿತ ಸಾಧಿಸಬೇಕು. ನಮ್ಮ ಸಾಹಿತ್ಯವನ್ನು ಬೇರೆ ಭಾಷೆಗಳಿಗೂ ಭಾಷಾಂತರಿಸುವ ಅಗತ್ಯವಿದೆ ಎಂದು ಹೇಳಿದರು.

ಕುರ್ಕಿಯಾಲ ಅಭಿವೃದ್ಧಿಪಡಿಸಿ: ಪಂಪ ಕನ್ನಡದ ಆದಿ ಕವಿ. ಅವನ ತಮ್ಮ ಜಿನವಲ್ಲಭ ತೆಲುಗಿನ ನೈಜ ಆದಿ ಕವಿ. ಆದರೆ ತೆಲುಗರು ಜಿನವಲ್ಲಭನ ಬಳಿಕದ ನಾಣಯ್ಯರನ್ನು ತಮ್ಮ ಆದಿಕವಿ ಎಂದು ಹೇಳಿಕೊಳ್ಳುತ್ತಾರೆ. ನನ್ನ ಪ್ರಕಾರ, ಅಣ್ಣ-ತಮ್ಮಂದಿರು ಎರಡು ಭಾಷೆಯ ಆದಿಕವಿಗಳಾಗಿರುವ ವಿಶಿಷ್ಟ ವಿದ್ಯಮಾನವಿದು. ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಪಂಪ ಮತ್ತು ಜಿನವಲ್ಲಭ ಅವರಿಗೆ ಸಂಬಂಧಪಟ್ಟ ಜಾಗಗಳು ಪಾಳು ಬಿದ್ದಿವೆ. ಎರಡೂ ರಾಜ್ಯ ಸರ್ಕಾರಗಳು ಈ ಸ್ಥಳಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹಂಪನಾ ಸಲಹೆ ನೀಡಿದರು. ಪಂಪ ಶಾಸನ ಇರುವ ಕುರ್ಕಿಯಾಲವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು. ಅಲ್ಲಿ ಸಾಹಿತ್ಯ, ಸಂಶೋಧನಾ ಚಟುವಟಿಕೆಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಪ್ರಶಸ್ತಿ ಪ್ರದಾನ ಸಮಿತಿಯ ಅಧ್ಯಕ್ಷ ಡಾ. ಸಿ. ಯು. ಮಂಜುನಾಥ್, ಗೋಧೂಳಿ ಕನ್ನಡ ಸಂಘದ ಸಂಚಾಲಕ ಡಾ. ಸತ್ಯಮಂಗಲ ಮಹಾದೇವ, ಪ್ರಾಂಶುಪಾಲ ಪ್ರೊ. ಎನ್. ಎಸ್. ಸತೀಶ್, ಯುವ ಸಂಶೋಧಕ ಡಾ. ಸುಂಕಂ ಗೋವರ್ಧನ್ ಇದ್ದರು.

ಲವ್ ಆಟ್ ಮೆನಿ ಸೈಟ್!

ನಾನು ಮತ್ತು ಕಮಲಾ 6 ವರ್ಷ ಒಟ್ಟಿಗೆ ಓದಿದವರು. ನಮ್ಮದು ಲವ್ ಅಟ್ ಫಸ್ಟ್ ಸೈಟ್ ಅಲ್ಲ. ಲವ್ ಆಟ್ ಮೆನಿ ಸೈಟ್! ಅಷ್ಟು ವರ್ಷ ಪರಸ್ಪರ ನೋಡಿದ ಮೇಲೆ ಮತ್ತೊಬ್ಬರನ್ನು ನೋಡಿ ಮದುವೆ ಆಗುವುದು ಏನಕ್ಕೆ ಎಂದುಕೊಂಡು ಮದುವೆಯಾದೆವು ಎಂದು ಹಂಪ ನಾಗರಾಜಯ್ಯ ಹೇಳಿದರು.

ವಿಜಯವಾಣಿ ಚಿತ್ರ



ಶೇಷಾದ್ರಿಪುರಂ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ.ಹಂ.ಪ. ನಾಗರಾಜಯ್ಯ ಅವರಿಗೆ 'ಚಿದಾನಂದ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವೂಡೇ ಪಿ. ಕೃಷ್ಣ, ಸಿ.ಯು. ಮಂಜುನಾಥ್, ಸತ್ಯಮಂಗಲ ಮಹಾದೇವ, ಎನ್. ಎಸ್. ಸತೀಶ್ ಇದ್ದರು.

ಸಂಜೆ ಸಮಾಚಾರ್
www.sanjesamachar.com
12 Jun 2023

ಚಿದಾನಂದ ಪ್ರಶಸ್ತಿ ಪ್ರದಾನ ಸಮಾರಂಭ



ಬೆಂಗಳೂರು : ಶೇಷಾದ್ರಿಪುರಂ ಶಿಕ್ಷಣದತ್ತಿ ಸಭಾಂಗಣದಲ್ಲಿ ಚಿದಾನಂದ ಪ್ರಶಸ್ತಿ ಸಮಿತಿ ಹಾಗೂ ಶೇಷಾದ್ರಿಪುರಂ ಸಂಜೆ ಕಾಲೇಜಿನ ಗೋಧೂಳಿ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ. ಚಿದಾನಂದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ. ಕಾರ್ಯಕ್ರಮವನ್ನು ಡಾ.ಎಂ.ಚಿದಾನಂದ ಮೂರ್ತಿರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ. ಕೃಷ್ಣ ಅವರು ಮಾತನಾಡಿ. ಯುವಕರು ಹಾಗೂ ಪ್ರಾಧ್ಯಾಪಕರುಗಳು ಸಂಶೋಧನಾ ಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು. 2023 ನೇ ಸಾಲಿನ ಚಿದಾನಂದ ಪ್ರಶಸ್ತಿಯನ್ನು ನಾಡಿನ ಹೆಸರಾಂತ ವಿದ್ವಾಂಸರಾದ ನಾಡೋಜ ಹಂಪ ನಾಗರಾಜಯ್ಯ ನವರಿಗೆ ಪ್ರಧಾನ ಮಾಡಿ ಮಾತನಾಡುತ್ತಾ ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಚಿದಾನಂದ ಮೂರ್ತಿಗಳ ಕೊಡುಗೆಯನ್ನು ಮತ್ತು ಅವರಜೊತೆಗಿನ ಒಡನಾಟವನ್ನು ಸ್ಮರಿಸಿದರು. ಪ್ರಶಸ್ತಿ ಸ್ವೀಕರಿಸಿದ ನಾಡೋಜ ಡಾ . ಹಂಪನಾಗರಾಜಯ್ಯ ಅವರು ಮಾತನಾಡಿ ಬದುಕಿಗೆ ಮತ್ತು ಸಾಹಿತ್ಯರಚನೆಗೆ ಸ್ಫೂರ್ತಿ ತುಂಬಿದ ವಿದ್ಯಾಗುರುಗಳಲ್ಲಿ ಒಬ್ಬರಾದ ಡಾ.ಎಂ. ಚಿದಾನಂದ ಮೂರ್ತಿಯವರ ಹೆಸರಿನಲ್ಲಿ ಪ್ರಶಸ್ತಿ ಪಡೆದದ್ದು ಇಂದು ಅವಿಸ್ಮರಣೀಯ ದಿನ ಮತ್ತು ಅವಿಸ್ಮರಣೀಯ ಕ್ಷಣ ಎಂದರು ಜೊತೆಗೆ ಪಂಪನ ತಮ್ಮನಾದ ಜಿನವಲ್ಲಭನು ಕೆತ್ತಿಸಿದ ಕುರ್ಕ್ಯಾಲಂ ಶಾಸನವನ್ನು ಕರ್ನಾಟಕ ಸರ್ಕಾರವು ಸಂರಕ್ಷಿಸಬೇಕು ಮತ್ತು ಆಂಧ್ರ ಹಾಗೂ ಕರ್ನಾಟಕ ಸರ್ಕಾರಗಳು ಸೇರಿ ಕುರ್ಕ್ಯಾಲಂ ಶಾಸನವಿರುವ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಮತ್ತು ಅಧ್ಯಯನ ಮಾಡುವವರಿಗೆ ವಿಶಿಷ್ಟ ಸ್ಥಳವನ್ನಾಗಿ ರೂಪಿಸಬೇಕು ಎಂದು ಸಲಹೆ ನೀಡಿದರು ಚಿದಾನಂದ ಪ್ರಶಸ್ತಿ ಸಮಿತಿಯ ಅಧ್ಯಕ್ಷರಾದ ಸಿ.ಯು ಮಂಜುನಾಥ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು . ಯುವ ಸಂಶೋಧಕ ಹಾಗೂ ಸಾಹಿತಿ ಸುಂಕಂ ಗೋವರ್ಧನ ಅವರು ಹಂ.ಪ.ನಾ. ಅವರ ಕುರಿತು ಅಭಿನಂದನಾ ನುಡಿಗಳನ್ನು ಅರ್ಪಿಸಿದರು . ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್. ಎಸ್.ಸತೀಶ್ , ಗೋಧೂಳಿ ಕನ್ನಡ ಸಂಘದ ಸಂಚಾಲಕರಾದ ಡಾ.ಸತ್ಯಮಂಗಲ ಮಹಾದೇವ, ನಿರೂಪಕರಾದ ಶ್ರೀನಿವಾಸಮೂರ್ತಿ.ಎಸ್.ಎಲ್ ಹಾಗೂ ಚಿದಾನಂದ ಮೂರ್ತಿಗಳ ಧರ್ಮಪತ್ನಿ ವಿಶಾಲಕ್ಷಮ್ಮ ಹಾಗೂ ಪುತ್ರ ವಿನಯ ಕುಮಾರ್ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು.



ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಸಾಹಿತಿ ಡಿ.ಎಸ್. ವೀರಯ್ಯ ಅವರನ್ನು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ ಸನ್ಮಾನಿಸಿದರು.

ಡಾ. ಅಂಬೇಡ್ಕರ್ ರಾಷ್ಟ್ರೀಯ ಚಿಕಿತ್ಸಕ – ಡಿ.ಎಸ್. ವೀರಯ್ಯ

ಸಂ.ಕ. ಸಮಾಚಾರ ಕಲಬುರಗಿ: ಅಂಬೇಡ್ಕರ್ ವ್ಯಕ್ತಿಯಲ್ಲ, ಶಕ್ತಿ, ರಾಷ್ಟ್ರೀಯ ಚಿಕಿತ್ಸಕ. ಸಾವಿರಾರು ಜಾತಿ, ಮತ, ಧರ್ಮ, ವಿಭಿನ್ನ ಭಾಷೆ, ಪ್ರಾಂತ್ಯಗಳಿಂದ ಛಿದ್ರಗೊಂಡಿದ್ದ ನಮ್ಮ ದೇಶಕ್ಕೆ ಭಾರತ ಎಂಬ ಪರಿಕಲ್ಪನೆ ಕೊಟ್ಟವರು ಅಂಬೇಡ್ಕರ್ ಎಂದು ಸಾಹಿತಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಡಿ.ಎಸ್.ವಿ. ಫೌಂಡೇಶನ್ ಶನಿವಾರ ಆಯೋಜಿಸಿದ್ದ 'ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ' ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ನಂತರ ರಾಜ್ಯದಲ್ಲಿ ದೊಡ್ಡ ಹೋರಾಟಗಾರರಾಗಿ ಗುರುತಿಸಿಕೊಂಡ ಹಿರಿಯ ನಾಯಕ ಬಸವಲಿಂಗಪ್ಪ ಅವರ ಬಗೆಗಿನ ಒಲವು ನಾನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಕಾರಣ. ಅಂಬೇಡ್ಕರ್ ಅವರ ಬರಹಗಳು ಚಲನಾಶೀಲ ಸಾಹಿತ್ಯವಾಗಿ ಉಳಿದುಕೊಂಡಿದ್ದು, ರಾಷ್ಟ್ರೀಯತೆ ಬಿತ್ತುವ ಸಾಹಿತಿ ಆಗಿದ್ದಾರೆ ಎಂದು ಹೇಳಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮಾತನಾಡಿ, ಡಿ.ಎಸ್. ವೀರಯ್ಯ ಅವರು ಉದಾತ್ತ ಮನೋಭಾವ, ಉನ್ನತ ಚಿಂತನೆ ಉಳ್ಳವರು ಎಂದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ ಮಾತನಾಡಿ, ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಪ್ರಚಲಿತಕ್ಕೆ ಬಂದ ಡಿ.ಎಸ್. ವೀರಯ್ಯ ಅವರು ಒಬ್ಬ ಪ್ರಾಧ್ಯಾಪಕರು ಬರೆದು ಪ್ರಕಟಿಸಿದಷ್ಟು ಸಾಹಿತ್ಯ ರಚಿಸಿದ್ದಾರೆ. ಅವರ ಸಾಹಿತ್ಯ ಜನಮುಖಿ ಬರಹಗಳಾಗಿವೆ ಎಂದು ಹೇಳಿದರು. ಡಿ.ಎಸ್.ವಿ ಫೌಂಡೇಶನ್ ಸದಸ್ಯ ವಿಜಯಕುಮಾರ್, ಶ್ರೀಶೈಲ ನಾಗರಾಳ, ಡಾ. ಚಿನ್ನಸ್ವಾಮಿ ಸೋಸಲೆ, ಉಪನ್ಯಾಸಕ ಸೂರ್ಯಕಾಂತ ಸುಜ್ಯಾತ ಹಾಜರಿದ್ದರು. ಡಾ. ಸುನೀತಾ ಮೂಲಿಗೆ ಕಾರ್ಯಕ್ರಮ ನಿರೂಪಿಸಿದರು. ಡಾ. ಎಂ.ಬಿ. ಕಟ್ಟಿ ಸ್ವಾಗತಿಸಿದರು.

ಪ್ರಜಾವಾಣಿ

Jun 11, 2023

ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನದಲ್ಲಿ ಡಾ. ವೂಡೇ ಪಿ. ಕೃಷ್ಣ ಅಭಿಮತ

‘ಇತರರ ಒಳಿತು ಬಯಸುವ ವೀರಯ್ಯ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸೂರಿನ ವ್ಯವಸ್ಥೆ ಕಲ್ಪಿಸಲು ಆಗ್ರಹಿಸಿ ಭಿಕ್ಷುಕರನ್ನು ಸಚಿವರ ಮುಂದೆ ನಿಲ್ಲಿಸಿದ್ದ ವೀರಯ್ಯ
- ಮಲ ಹೊರುವ ಪದ್ಧತಿ ನಿಷೇಧಿಸಿದ್ದ ಬಸವಲಿಂಗಪ್ಪ
- ಶಾಶ್ವತವಾಗಿ ಉಳಿಯುವುದು ಬರವಣಿಗೆ ಮಾತ್ರ

ಕಲಬುರಗಿ: ‘ರಾಜಕಾರಣಿಯಾಗಿದ್ದರೂ ಸಾಹಿತ್ಯದ ಬಗ್ಗೆ ಒಲವುಳ್ಳ ಡಿ.ಎಸ್. ವೀರಯ್ಯ ಅವರು ಸದಾ ಇತರರ ಒಳಿತನ್ನು ಬಯಸಿದರು. ಉನ್ನತ ಆಲೋಚನೆಗಳನ್ನು ಹೊಂದಿದ್ದರಿಂದ ವ್ಯಕ್ತಿತ್ವವೂ ಉನ್ನತವಾಗಿದೆ’ ಎಂದು ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಶ್ಲಾಘಿಸಿದರು.

ಇಲ್ಲಿನ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಡಿಎಸ್‌ವಿ ಫೌಂಡೇಶನ್ ಸಹಯೋಗದಲ್ಲಿ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ ರಾಜ್ಯಮಟ್ಟದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ವೀರಯ್ಯ ಅವರಿಗೆ ಸಾಹಿತಿ, ಸಮಾಜ, ರಾಜಕೀಯ ಹಾಗೂ ರಾಷ್ಟ್ರೀಯ ಎಂಬ ನಾಲ್ಕು ಮುಖಗಳಿವೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಮನುಕುಲಕ್ಕೆ ಒಳಿತಾಗುವ ನಿಟ್ಟಿನಲ್ಲಿ, ಅಸ್ಪೃಶ್ಯತೆಯ ನಿವಾರಣೆಯ ಉದ್ದೇಶದಿಂದ ಸಂವಿಧಾನವನ್ನು ರಚಿಸಿದರು. ಬರೀ ಕಾನೂನಿನ ಮೂಲಕ ಸುಧಾರಣೆ ತಂದರೆ ಸಾಲದು. ಬದಲಾಗಿ, ಜನಗಳ ಮನಸ್ಸಿನಲ್ಲಿಯೂ ಸುಧಾರಣೆ ತರಬೇಕು ಎಂದು ನಂಬಿದ್ದರು. ಆ ಕೆಲಸವನ್ನು ವೀರಯ್ಯ ಅವರು ಮಾಡುತ್ತಿದ್ದಾರೆ’ ಎಂದರು.

‘ಮಾತನಾಡಿದ್ದು ಗಾಳಿಯಲ್ಲಿ ಹೋಗುತ್ತದೆ. ಆದರೆ, ಬರೆದಿದ್ದು ಮಾತ್ರ ಉಳಿಯುತ್ತದೆ ಎಂದು ನಂಬಿರುವ ವೀರಯ್ಯ ಅವರು ಪತ್ರಿಕೆಯೊಂದನ್ನು ಹೊರತಂದು ಪತ್ರಕರ್ತರಾಗಿಯೂ ಕಾರ್ಯನಿರ್ವಹಿಸಿದರು. ಅದಕ್ಕಾಗಿಯೇ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ವೀರಯ್ಯ ಅವರನ್ನು ನಿತ್ಯ ಸಾಹಿತಿ ಎಂದು ಕರೆದಿದ್ದು ಸರಿಯಾಗಿಯೇ ಇದೆ’ ಎಂದು ವಿಶ್ಲೇಷಿಸಿದರು.

ಡಿ.ಎಸ್. ವೀರಯ್ಯ ಮಾತನಾಡಿ, ‘ದಶಕಗಳ ಹಿಂದೆ ಅಮಾನವೀಯವಾಗಿದ್ದ ಮಲ ಹೊರುವ ಪದ್ಧತಿಯನ್ನು ನಿಲ್ಲಿಸಬೇಕು ಎಂದು ಬಿ.ಬಸವಲಿಂಗಪ್ಪ ಅವರು ಕರೆ ನೀಡಿದ್ದರು. ಅವರ ಕರೆಗೆ ಓಗೊಟ್ಟು ನಾನೂ ಚಳವಳಿಯಲ್ಲಿ ಧುಮುಕಿದೆ. ನಮ್ಮಂತೆಯೇ ಮನುಷ್ಯರಾಗಿರುವ ಭಿಕ್ಷುಕರಿಗೆ ಸೂಕ್ತ ಸೂರಿನ ವ್ಯವಸ್ಥೆಯೇ ಇರಲಿಲ್ಲ. ಹೀಗಾಗಿ, ಈ ಬಗ್ಗೆ ಗಮನ ಸೆಳೆಯಲು ಬೆಂಗಳೂರಿನಲ್ಲಿರುವ ಭಿಕ್ಷುಕರನ್ನು ಕರೆದುಕೊಂಡು ವಿಧಾನಸೌಧಕ್ಕೆ ಹೋದೆ. ಅವರಿಗೆ ಮಲಗಿಕೊಳ್ಳಲು ಸೂಕ್ತ ಜಾಗ ಇಲ್ಲ. ವಿಧಾನಸೌಧದ ಮೇಲೆ ಭಿಕ್ಷುಕರಿಗೂ ಅಧಿಕಾರವಿದೆ. ಹೀಗಾಗಿ, ಇಲ್ಲಿಯೇ ಮಲಗಿಕೊಳ್ಳಲು ಅವಕಾಶ ಕೊಡಿ ಎಂದು ಮುಖ್ಯಮಂತ್ರಿಗಳು, ಸಚಿವರಿಗೆ ಮನವಿ ಮಾಡಿದೆ. ಇದಕ್ಕೆ ಸ್ಪಂದಿಸಿ ಭಿಕ್ಷುಕರ ಪರಿಹಾರ ಕೇಂದ್ರಕ್ಕೆ ಭೂಮಿ ಮಂಜೂರು ಮಾಡಿದರು’ ಎಂದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ ಮಾತನಾಡಿ, ‘ವೀರಯ್ಯ ಅವರು ವಿಶ್ವವಿದ್ಯಾಲಯವೊಂದರ ಪ್ರಾಧ್ಯಾಪಕರು ಬರೆದಷ್ಟು ಸಾಹಿತ್ಯ ರಚನೆ ಮಾಡಿದ್ದಾರೆ’ ಎಂದು ಅವರು ಹೇಳಿದರು.

ದೇವನೂರು ಮಹಾದೇವ ಅವರಷ್ಟೇ ಎತ್ತರದ ಸಾಹಿತಿಯಾಗಿದ್ದಾರೆ. ಅವರ ಸಾಹಿತ್ಯ ಜನಮುಖಿಯಾಗಿದೆ. ಅಕ್ಷರವಂತರಾದ ನಾವು ಸಮಾಜದಲ್ಲಿನ ಕಸವನ್ನು ತೆಗೆಯುವ ಕೆಲಸ ಮಾಡಬೇಕು.



ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ, ಡಾ.ವೂಡೇ ಪಿ.ಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ, ಡಿ.ವಿಜಯಕುಮಾರ ಇದ್ದರು

ವೀರಯ್ಯ ಹೇಳಿದ ಕತ್ತೆ ಓಡಿಹೋದ ಪ್ರಸಂಗ!

ಪರಿಶಿಷ್ಟ ಸಮುದಾಯದ ಅಧಿಕಾರಿಗಳಿಗೆ ಹಿಂಬಡ್ತಿ ಆದೇಶ ನೀಡಲಾದ ಸಂದರ್ಭದಲ್ಲಿ ನಡೆದ ಘಟನೆಯನ್ನು ಡಿ.ಎಸ್. ವೀರಯ್ಯ ಮೆಲುಕು ಹಾಕಿದರು.

‘ಈ ಆದೇಶ ಹೊರಬಿದ್ದ ಬಳಿಕ ನಮ್ಮ ಸಮುದಾಯದ 36 ಶಾಸಕರು ಸದನದಲ್ಲಿದ್ದರೂ ಧ್ವನಿ ಎತ್ತಲಿಲ್ಲ. ಇದರಿಂದ ಬೇಸತ್ತು 36 ಕತ್ತೆಗಳನ್ನು ತರಿಸಿ ವಿಧಾನಸೌಧಕ್ಕೆ ಮೆರವಣಿಗೆ ಮಾಡಲು ನಿರ್ಧರಿಸಿದೆ. ಕತ್ತೆಗಳಿಗೆ ಬಿಳಿಬಟ್ಟೆ ಧರಿಸಿ ಅವರ ಹೆಸರು ಬರೆಸಿದೆ. ಆ ಸಂದರ್ಭದಲ್ಲಿ ತಮಟೆಗೆ ಬೆಂಕಿ ಕಾಯಿಸಿ ಬಡಿಯಲು ಶುರು ಮಾಡಿದಾಗ ಕತ್ತೆಗಳು ಓಡಿ ಹೋದವು. ಅಗಸನ ಹತ್ತಿರ ಕತ್ತೆಗಳನ್ನು ಕೇಳಿ ತಂದಿದ್ದೆ. ಈಗ ಏನು ಮಾಡುವುದು ಎಂಬ ಚಿಂತೆ ಶುರುವಾಯಿತು. ಅಷ್ಟರಲ್ಲಿಯೇ ಪ್ರತಿಭಟನೆ ಸ್ಥಳಕ್ಕೆ ಬಂದ ಅಗಸ ಕತ್ತೆ ಎಲ್ಲಿ ಎಂದು ಕೇಳಿದ. ಎಲ್ಲಿಯೋ ಓಡಿ ಹೋಗಿವೆ. ಹೊಸದಾಗಿ ಕತ್ತೆಗಳ ಖರೀದಿಗೆ ಹಣ ಕೊಡುವುದಾಗಿ ಹೇಳಿದೆ. ಮರುದಿನ ಮತ್ತೆ ಬಂದ ಅಗಸ 36 ಕತ್ತೆಗಳ ಪೈಕಿ 35 ಮರಳಿ ದೋಬಿಘಾಟ್‌ಗೆ ಬಂದಿವೆ ಎಂದನು. ಒಂದು ಕತ್ತೆ ಸಿಗಲಿಲ್ಲ. ಅದರ ಹಣವನ್ನು ಆತನಿಗೆ ಕೊಟ್ಟೆ’ ಎಂದು ಸ್ಮರಿಸಿದರು.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆತಂಕದಿಂದ ಇದ್ದ ಸಾಹಿತಿಗಳು ಈಗ ಅದರಿಂದ ಮುಕ್ತರಾಗಿದ್ದೇವೆ’ ಎಂದು ಅವರು ಹೇಳಿದರು.

ಡಿಎಸ್‌ವಿ ಫೌಂಡೇಶನ್ ಸದಸ್ಯ ವಿಜಯ ಕುಮಾರ್, ಶ್ರೀಶೈಲ ನಾಗರಾಳ, ಡಾ. ಚೆನ್ನಸ್ವಾಮಿ ಸೋಸಲೆ, ಉಪನ್ಯಾಸಕ ಸೂರ್ಯಕಾಂತ ಸುಜ್ಯಾತ ಅವರು ಹಾಜರಿದ್ದರು.

ಡಾ. ಸುನೀತಾ ಮೂಲಿಗೆ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ. ಎಂ.ಬಿ. ಕಟ್ಟಿ ಅವರು ಕಾರ್ಯಕ್ರಮದಲ್ಲಿ ಸ್ವಾಗತಿಸಿದರು.


ನಿಸರ್ಗ ಸಾರಥ್ಯ...
ದಿ ಡೈಲಿ ನ್ಯೂಸ್
Jun 11, 2023

ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ

ಗುಲ್ಬರ್ಗ ವಿವಿಯಲ್ಲಿ ನಡೆದ ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ವೂಡೇ ಪಿ. ಕೃಷ್ಣ ಅಭಿಮತ

• ದಿ ಡೈಲಿ ನ್ಯೂಸ್ ಕಲಬುರಗಿ

ಉತ್ತಮ ಚಿಂತನೆ ಹಾಗೂ ಎತ್ತರದ ಆಲೋಚನೆಯಿಂದ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯುತ್ತೇವೆ. ಅದೇ ರೀತಿಯಿಂದ ಡಿ.ಎಸ್. ವೀರಯ್ಯ ಅವರ ವ್ಯಕ್ತಿತ್ವಕ್ಕೆ ನಾಲ್ಕು ಮುಖಗಳಿದ್ದು ಅವುಗಳನ್ನು ಸಾಹಿತ್ಯ, ಸಮಾಜ, ರಾಜಕೀಯ, ರಾಷ್ಟ್ರೀಯ ಮುಖಗಳೆಂದು ಗುರುತಿಸಬಹುದು ಎಂದು ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟರು. ಗುಲ್ಬರ್ಗ ವಿವಿ ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿವಿ ಹಾಗೂ ಡಿಎಸ್‌ವಿ ಫೌಂಡೇಶನ್ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಡಿ.ಎಸ್. ವೀರಯ್ಯ ಸಾಹಿತ್ಯಾವಲೋಕನ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.



ನಮಗೆ ಶಿಕ್ಷಣ ಇದ್ದರೆ ಗೌರವದ ಬದುಕು, ಜೀವನ ಸಾಗಿಸಲು ಆದರ್ಶ ಬೇಕು. ಸಮಾಜದಲ್ಲಿ ಇಂದು ಜನರ ನಡುವೆ ಬಹಳ ಕಂದಕ ಏರ್ಪಟ್ಟಿದೆ. ಅಸಮಾನತೆ ಹೆಚ್ಚಾಗುತ್ತಿದೆ. ಈ ಕುರಿತು ಅರಿವು ಮೂಡಿಸಲು ಇಂತಹ ಸಾಹಿತ್ಯ ಬರವಣಿಗೆಯ ಅಗತ್ಯವಿದೆ. ಚಲನಶೀಲ, ಬದುಕು ಕಟ್ಟುವ, ಸಮಾಜ ಒಗ್ಗೂಡಿಸುವ, ಸಾಮಾಜಿಕ ಕಳಕಳಿಯ ಬರವಣಿಗೆಯ ಅಗತ್ಯವಿದೆ ಎಂದು ಹೇಳಿದರು. ಅಂಬೇಡ್ಕರ್ ವ್ಯಕ್ತಿಯಲ್ಲ, ಶಕ್ತಿ: ರಾಷ್ಟ್ರೀಯ ಚಿಕಿತ್ಸಕ. ಸಾವಿರಾರು ಜಾತಿ, ಮತ, ಧರ್ಮ, ವಿಭಿನ್ನ ಭಾಷೆ, ಪ್ರಾಂತಗಳಿಂದ ಛಿದ್ರಗೊಂಡಿದ್ದ ದೇಶಕ್ಕೆ ಭಾರತ ಎಂಬ ಪರಿಕಲ್ಪನೆ ಕೊಟ್ಟವರು ಅಂಬೇಡ್ಕರ್ ಎಂದು ಸಾಹಿತಿ ಡಿ.ಎಸ್.ವೀರಯ್ಯ ಹೇಳಿದ್ದರು ಎಂದು ಸ್ಮರಿಸಿದರು. ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ.ಪೋತೆ ಮಾತನಾಡಿ, ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಪ್ರಚಲಿತಕ್ಕೆ ಬಂದ ಡಿ.ಎಸ್. ವೀರಯ್ಯ ಅವರ ಸಾಹಿತ್ಯ ಜನಮುಖಿ ಬರಹಗಳಾಗಿವೆ. ಸತ್ಯವನ್ನು ನಾವು ನಿತ್ಯ ಹೇಳಬೇಕು. ಹಾಗಾಗಿ ಹೆಚ್ಚೆಚ್ಚು ಜನ ಬರೆಯಬೇಕು. ಅಕ್ಷರವಂತರಾದ ನಾವು ಸಮಾಜದಲ್ಲಿನ ಕಸವನ್ನು ತೆಗೆಯುವ ಕೆಲಸ ಮಾಡಬೇಕು. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆತಂಕದಿಂದ ಇದ್ದ ಸಾಹಿತಿಗಳು ಈಗ ಅದರಿಂದ ಮುಕ್ತವಾಗಿದ್ದೇವೆ ಎಂದು ಹೇಳಿದರು. ಡಿ.ಎಸ್.ವಿ ಫೌಂಡೇಶನ್ ಸದಸ್ಯ ವಿಜಯಕುಮಾರ, ಡಾ.ಸುನೀತಾ ಮೂಲಿಗೆ, ಡಾ.ಎಂ.ಬಿ.ಕಟ್ಟಿ ಇನ್ನಿತರರಿದ್ದರು. ನಂತರ ನಡೆದ ಗೋಷ್ಠಿಗಳಲ್ಲಿ ಡಾ. ಶ್ರೀಶೈಲ ನಾಗರಾಳ, ಡಾ. ಚೆನ್ನಸ್ವಾಮಿ ಸೋಸಲೆ, ಡಾ. ಸೂರ್ಯಕಾಂತ ಸುಜಾತಾ, ಡಾ. ಅರುಣಕುಮಾರ ಜೋಳದ ಕೂಡ್ಲಗಿ, ಡಾ. ಮುದೇನೂರ ನಿಂಗಪ್ಪ ಪ್ರಬಂಧ ಮಂಡಿಸಿದರು.

ಉಳಿಯುವುದು ಬರಹ ಮಾತ್ರ!

ಆಡಿದ ಮಾತು ಗಾಳಿಯಲ್ಲಿ ಹೋಗುತ್ತವೆ. ಆದರೆ ನಾವು ಮಾಡಿದ ಕೆಲಸಗಳು ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ಪದವಿಗಳು, ಅಧಿಕಾರ ಶಾಶ್ವತ ಅಲ್ಲ. ನಾವು ರಚಿಸಿದ ಬರವಣಿಗೆ ಮಾತ್ರ ನಮ್ಮ ಬದುಕಿನ ನಂತರವೂ ಉಳಿಯುತ್ತದೆ. ಹಾಗಾಗಿ ನಾವು ಬರವಣಿಗೆಯಲ್ಲಿ ತೊಡಗಿಕೊಳ್ಳಬೇಕು. ದಮನಿತರ ದನಿಯಾಗಿ ಕೆಲಸ ಮಾಡಬೇಕು ಎಂದು ವೂಡೇ ಪಿ.ಕೃಷ್ಣ ಹೇಳಿದರು.

Jun 11, 2023



ಚಿದಾನಂದ ಪ್ರಶಸ್ತಿ ಪ್ರಧಾನ ಸಮಿತಿ, ಗೋಧೂಳಿ ಕನ್ನಡ ಸಂಘ ಹಾಗೂ ಶೇಷಾದ್ರಿಪುರಂ ಸಂಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಾಡೋಜ ಡಾ.ಹಂಪ ನಾಗರಾಜಯ್ಯ ಅವರಿಗೆ 'ಚಿದಾನಂದ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ.ಕೃಷ್ಣ, ಯುವ ಸಂಶೋಧಕ ಡಾ.ಸುಂಕಂ ಗೋವರ್ಧನ್, ವಿಶ್ರಾಂತ ಪ್ರಾಧ್ಯಾಪಕ ಡಾ.ಸಿ.ಏ.ಮಂಜುನಾಥ ಮತ್ತಿತರರಿದ್ದರು.

ಪ್ರಜಾವಾಣಿ
ಶನಿವಾರ ● ಜೂನ್ 10, 2023

‘ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ’ ಆವೃತ್ತಿಯನ್ನು ವಿಶ್ವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಶುಕ್ರವಾರ ಬಿಡುಗಡೆ ಮಾಡಿದರು.

ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಹೊಸಪೇಟೆ ಮತ್ತು ಕಲಬುರಗಿಯ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಜೂನ್ 12ರಿಂದ ಅಧಿಕೃತವಾಗಿ ವಿತರಣೆ ಪ್ರಾರಂಭವಾಗಲಿದೆ.

ಸೋಮವಾರದಿಂದ ಶುಕ್ರವಾರದವರೆಗೆ ವಾರದಲ್ಲಿ ಐದು ದಿನಗಳು ‘ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ’ ಪ್ರಕಟವಾಗಲಿದೆ. ಪ್ರಚಲಿತ ವಿದ್ಯಮಾನಗಳಾದ ಆರ್ಥಿಕತೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ನಾಗರಿಕ ವ್ಯವಹಾರಗಳು ಮತ್ತು ಪರಿಸರದಂತಹ ವಿವಿಧ ಕ್ಷೇತ್ರಗಳಿಗೆ ಪ್ರಾಮುಖ್ಯ ನೀಡಲಾಗಿದೆ. ಆಕರ್ಷಕ ಗ್ರಾಫಿಕ್ಸ್ ಮೂಲಕ ವಿನ್ಯಾಸಗಳಿರುತ್ತವೆ. ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಫಝಲ್ಸ್, ಎಂಸಿಕ್ಯೂಗಳಿರಲಿವೆ.



‘ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ’ ಆವೃತ್ತಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ಲೆಸ್ಲಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಟಿಪಿಎಂಎಲ್ ನಿರ್ದೇಶಕ ಚೈತನ್ಯ ನೆಟ್ಟಕಲ್ಲಪ್ಪ, ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ, ಟಿಪಿಎಂಎಲ್ ಸಿಇಒ ಸೀತಾರಾಮನ್ ಶಂಕರ್ ಇದ್ದರು.

ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದ ಸಾಧಕರ ಬಗ್ಗೆ, ವಿದ್ಯಮಾನಗಳ ಬಗ್ಗೆ ಮಾಹಿತಿ, ಸ್ಟ್ಯಾಂಡ್ ಅಲೋನ್ ಚಾರ್ಟ್‌ಗಳು, ಸಾಂದರ್ಭಿಕ ಚಿತ್ರಗಳನ್ನು ಮಾಸ್ಟರ್‌ಮೈಂಡ್ ಒಳಗೊಂಡಿರಲಿದೆ.


ಬಹುಮಾನ ವಿತರಣೆ: ಡಿಎಚ್/ಪಿವಿ ಮಾಸ್ಟರ್ ಮೈಂಡ್ ಚಂದಾದಾರಿಕೆಯ ಲಕ್ಕಿ ಡ್ರಾ ವಿಜೇತರಿಗೆ ಶುಕ್ರವಾರ ಬಹುಮಾನ ವಿತರಿಸಲಾಯಿತು.

ಚಿನ್ಮಯಿ ರಾಜ್ ಎಂ.ಆರ್. ಅವರು ಬಂಪರ್ ಬಹುಮಾನ ಎಲೆಕ್ಟ್ರಿಕಲ್ ಬೈಕ್ ಪಡೆದರು. ಮೊಬೈಲ್ ಫೋನ್, ಟ್ಯಾಬ್ಲೆಟ್‌ಗಳು, ಸ್ಮಾರ್ಟ್ ವಾಚ್‌ಗಳನ್ನು ಹಲವರು ಪಡೆದರು.

ಟಿಪಿಎಂಎಲ್ ನಿರ್ದೇಶಕ ಚೈತನ್ಯ ನೆಟ್ಟಕಲ್ಲಪ್ಪ, ಸಿಇಒ ಸೀತಾರಾಮನ್ ಶಂಕರ್ ಇದ್ದರು.

ಸಂಜೆವಾಣಿ

ಶನಿವಾರ ಜೂನ್ 10, 2023



ಕಲಬುರಗಿ: ಗುವಿವಿ ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿಂದು ಹಮ್ಮಿಕೊಂಡಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಲೇಖಕ ಡಿ.ಎಸ್.ವೀರಯ್ಯ ಸಾಹಿತ್ಯಾವಲೋಕನ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಚ್.ಟಿ.ಪೋತೆ, ಲೇಖಕ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ, ವಿಜಯಕುಮಾರ, ಡಾ.ಸುನೀತಾ ಇದ್ದರು.

ಕನ್ನಡಪ್ರಭ ಶುಕ್ರವಾರ 9.6.2023

'ಮೈಲಾರ ಮಹದೇವಪ್ಪ ತತ್ವಾದರ್ಶ ಅನುಸರಿಸಿ'



ಡಾ। ಎ.ಮುರಿಗೆಪ್ಪ ವಿರಚಿತ 'ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹದೇವ' ಪುಸ್ತಕವನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಬಿಡುಗಡೆ ಮಾಡಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದ ಸ್ವಾತಂತ್ರ್ಯ ಮತ್ತು ಸಮೃದ್ಧಿಗಾಗಿ ಅತ್ಯುನ್ನತ ತ್ಯಾಗ ಮಾಡಿದ ಮೈಲಾರ ಮಹದೇವಪ್ಪ ಸೇರಿದಂತೆ ಮಹಾನ್ ಪುರುಷರ ತತ್ವಾದರ್ಶಗಳನ್ನು ಅನುಸರಿಸಲು ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಸಲಹೆ ನೀಡಿದರು.

ಗುರುವಾರ ನಗರದ ಗಾಂಧಿಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಹುತಾತ್ಮ ಮೈಲಾರ ಮಹದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಆಯೋಜಿಸಿದ್ದ ಮೈಲಾರ ಮಹದೇವ ಅವರ 112ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ। ಎ.ಮುರಿಗೆಪ್ಪ ಅವರು ಬರೆದಿರುವ ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹದೇವ ಪುಸ್ತಕವನ್ನು ರಾಜ್ಯಪಾಲರು ಬಿಡುಗಡೆ ಮಾಡಿದರು. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವ ಎಚ್.ಕೆ.ಪಾಟೀಲ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ। ವೂಡೆ ಪಿ.ಕೃಷ್ಣ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ। ಮನು ಬಳಿಗಾರ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
ಜೂನ್ 09 ಶುಕ್ರವಾರ 2023



ಗಾಂಧಿ ಭವನದಲ್ಲಿ ನಡೆದ ಹುತಾತ್ಮ ಮೈಲಾರ ಮಹದೇವ ಅವರ 112ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ಕೃತಿ ಬಿಡುಗಡೆ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸಚಿವ ಎಚ್.ಕೆ.ಪಾಟೀಲ್, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೊಡೇ ಪಿ.ಕೃಷ್ಣ, ನಿಕಟ ಪೂರ್ವ ಕಸಾಪ ಅಧ್ಯಕ್ಷ ಡಾ.ಮನುಬಳಿಗಾರ್ ಮತ್ತಿತರರಿದ್ದರು.

ಉದಯವಾಣಿ ಶುಕ್ರವಾರ, ಜೂನ್ 9, 2023

ಸಾಯುವ ಸಂದರ್ಭದಲ್ಲೂ ಅಹಿಂಸಾತ್ಮಕ ಹೋರಾಟ ನಡೆಸಿದ್ದ ಮೈಲಾರ ಮಹಾದೇವ

ಮೈಲಾರ ಮಹಾದೇವರ ಜನ್ಮದಿನಾಚರಣೆಯಲ್ಲಿ ರಾಜ್ಯಪಾಲರು ಸ್ಮರಣೆ

ಬೆಂಗಳೂರು: ಸಾಯುವ ಸಂದರ್ಭ ಬಂದಾಗಲೂ ಮೈಲಾರ ಮಹಾದೇವ ಅವರು ಅಹಿಂಸಾತ್ಮಕ ಹೋರಾಟ ನಡೆಸುವ ಮೂಲಕ ತಮ್ಮ ತತ್ವ ಪ್ರತಿಪಾದಿಸಿದ್ದರು ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋಟ್ ಸ್ಮರಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಹುತಾತ್ಮ ಮೈಲಾರ ಮಹದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ ಗುರುವಾರ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ 'ಮೈಲಾರ ಮಹಾದೇವ ಅವರ 112ನೇ ಜನ್ಮ ದಿನ' ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಕರ ವಸೂಲಿ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ ಪೊಲೀಸರು ಮೈಲಾರ ಮಹಾದೇವ ಅವರಿಗೆ ಗುಂಡು ಹಾರಿಸಿದ್ದರು. ಇದರಿಂದ ಆಕ್ರೋಶಗೊಂಡ ಸ್ವಾತಂತ್ರ್ಯ ಹೋರಾಟಗಾರರು ಪೊಲೀಸರ ಬಂದೂಕು ಕಸಿದು ಹಲ್ಲೆ ಮಾಡಲು ಯತ್ನಿಸಿದ್ದರು. ಆದರೆ, ತಾವು ಸಾಯುವ ಸಂದರ್ಭದಲ್ಲಿಯೂ ಪೊಲೀಸರಿಗೆ ಹಿಂಸೆ ಮಾಡಬೇಡಿ ಎಂದು ಹೇಳುವ ಮೂಲಕ ತಮ್ಮ ಅಹಿಂಸಾತ್ಮಕ ತತ್ವ ಪ್ರತಿಪಾದಿಸಿ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದ್ದಾರೆ ಎಮದು ಹೇಳಿದರು.



'ಮೈಲಾರ ಮಹಾದೇವ ಅವರ 112ನೇ ಜನ್ಮ ದಿನ' ಕಾರ್ಯಕ್ರಮ ನಡೆಯಿತು.

ಸಾಹಿತಿ ಮನು ಬಳಿಗಾರ ಮಾತನಾಡಿ, ಮಹಾದೇವ ಅವರು 1943ರಲ್ಲಿ ಹುತಾತ್ಮರಾಗುವವರೆಗೆ ಚಳವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತಮ್ಮ 17ನೇ ವರ್ಷಕ್ಕೆ ಸಬರಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿ ಜತೆಗೆ ಒಡನಾಟ ಹೊಂದಿದ್ದರು ಎಂದು ಸ್ಮರಿಸಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಕಾಂಗ್ರೆಸ್ ಮುಖಂಡ ಜಗದೀಶ್ ಶೆಟ್ಟರ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಶಾಸಕ ಯು.ಬಿ. ಬಣಕಾರ್, ಸಾಹಿತಿ ಎ.ಮುರಿಗೆಪ್ಪ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಶುಕ್ರವಾರ ● ಜೂನ್ 9, 2023


ಹುತಾತ್ಮ ಮೈಲಾರ ಮಹಾದೇವ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಬರಮತಿಯಿಂದ ದಂಡಿವರೆಗೆ 327 ಕಿ.ಮೀ ದೂರ ನಡೆದ ದಂಡಿ ಪಾದಯಾತ್ರೆಯಲ್ಲಿ ಪೂರ್ಣವಾಗಿ ಭಾಗವಹಿಸಿದ ಏಕೈಕ ಕನ್ನಡಿಗ ಮೈಲಾರ ಮಹಾದೇವ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸ್ಮರಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಹುತಾತ್ಮ ಮೈಲಾರ ಮಹದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನಿಂದ ಗುರುವಾರ ನಡೆದ ಮೈಲಾರ ಮಹಾದೇವ ಅವರ 112ನೇ ಜನ್ಮ ದಿನವನ್ನು ಉದ್ಘಾಟಿಸಿ ಮಾತನಾಡಿದರು.

‘ರೈತರಿಂದ ಬ್ರಿಟಿಷರು ಕರ ವಸೂಲಿ ಮಾಡಿದ್ದನ್ನು ರೈತರಿಗೆ ವಾಪಸ್ ಕೊಡಿಸುವ ಸಂದರ್ಭದಲ್ಲಿ ಪೊಲೀಸರು ಮೈಲಾರ ಮಹಾದೇವರ ಎದೆಗೆ ಗುಂಡು ಹಾರಿಸಿದ್ದರು. ಆಗ ಸ್ವಾತಂತ್ರ್ಯ ಹೋರಾಟಗಾರರು ಪೊಲೀಸರ ಬಂದೂಕು ಕಿತ್ತುಕೊಂಡು ಅವರಿಗೆ ಹಲ್ಲೆ ಮಾಡಲು ಮುಂದಾಗಿದ್ದರು. ಸಾಯುವ ಕಾಲದಲ್ಲಿಯೂ ಮೈಲಾರ ಅದನ್ನು ವಿರೋಧಿಸಿದರು. ಪೊಲೀಸರಿಗೆ ಹಿಂಸೆ ಮಾಡಬೇಡಿ. ನಮ್ಮ ಹೋರಾಟ ಅಹಿಂಸಾತ್ಮಕವಾಗಿಯೇ ನಡೆಯಬೇಕು ಎಂದು ತಾನು ನಂಬಿದ್ದ, ಅಳವಡಿಸಿಕೊಂಡಿದ್ದ ತತ್ವವನ್ನೇ ಪ್ರತಿಪಾದಿಸಿದ್ದ ಮಹಾನ್ ದೇಶಭಕ್ತ. ಅವರ ನೆನಪಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉತ್ತಮ ಕಾರ್ಯಕ್ರಮ ಹಮ್ಮಿಕೊಳ್ಳಬೇಕು’ ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ಮನು ಬಳಿಗಾರ, ಯು.ಬಿ.ಬಣಕಾರ್, ಜಗದೀಶ ಶೆಟ್ಟರ್, ಎಚ್.ಕೆ.ಪಾಟೀಲ, ವೂಡೇ ಪಿ.ಕೃಷ್ಣ, ಎ.ಮುರಿಗೆಪ್ಪ, ಎಚ್.ಎಸ್.ನರೇಂದ್ರ ಇದ್ದರು —ಪ್ರಜಾವಾಣಿ ಚಿತ್ರ

‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿ ಬಗ್ಗೆ ಮಾತನಾಡಿದ ಮನು ಬಳಿಗಾರ, ‘14ನೇ ವರ್ಷಕ್ಕೆ ಶಾಲೆ ತೊರೆದು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಮಹಾದೇವ ಅವರು 17ನೇ ವರ್ಷಕ್ಕೆ ಸಬರಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿ ಅನುಯಾಯಿ ಆಗಿ ಕೆಲಸ ಮಾಡಿದರು. ಅವರ ಪತ್ನಿ ಸಿದ್ದಮ್ಮ ಕೂಡಾ ಮಹಾದೇವ ಜೊತೆಗೆ ಹೋರಾಟದ ಸಂಗಾತಿಯಾಗಿದ್ದರು. ಅಲ್ಲಿಂದ 1943ರಲ್ಲಿ ಹುತಾತ್ಮರಾಗುವವರೆಗೆ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ಭಗತ್‌ಸಿಂಗ್, ರಾಜಗುರು, ಸುಖದೇವ್‌ರಂತೆ ಸಣ್ಣ ಪ್ರಾಯದಲ್ಲಿಯೇ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದರು’ ಎಂದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಕಾಂಗ್ರೆಸ್ ಮುಖಂಡ ಜಗದೀಶ್ ಶೆಟ್ಟರ್, ‘ಅಹಿಂಸೆ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ’ ಕೃತಿಕಾರ ಎ.ಮುರಿಗೆಪ್ಪ, ಶಾಸಕ ಯು.ಬಿ.ಬಣಕಾರ್, ಕೆಪಿಎಸ್‌ಸಿ ಸದಸ್ಯ ಎಚ್.ಎಸ್. ನರೇಂದ್ರ ಮತ್ತಿತರರಿದ್ದರು.

ఈనాడు
epaper.eenadu.net
09/06/2023



మైలార మహదేవ్‌కు ఘన నివాళి

కర్ణాటక గాంధీ స్మారక నిధి ఆధ్వర్యంలో మైలార మహదేవ్ జయంతిని గాంధీభవన్‌లో గురువారం ఘనంగా నిర్వహించారు. ఈ సందర్భంగా ఆయన జీవిత చరిత్రపై ప్రచురించిన ప్రత్యేక పుస్తకాన్ని గవర్నర్ థావర్ చంద్ గహ్లోత్, మంత్రి హెచ్.కె.పాటిల్, మాజీ ముఖ్యమంత్రి జగదీశ్ షెట్టర్, ఎమ్మెల్యే యు.బి.బాణకర్, కసాప మాజీ అధ్యక్షుడు మను బళిగార్, డా.ఎ.మునిగప్పను ఆవిష్కరిస్తున్న దృశ్యాన్ని చిత్రంలో చూడవచ్చు. -బెంగళూరు(మల్లేశ్వరం), న్యూస్‌టుడే

ಗುರುವಾರ
08 ಜೂನ್ 202



ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಆಯೋಜಿಸಿದ್ದ ಹುತಾತ್ಮ ಮೈಲಾರ ಮಹಾದೇವ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಮೈಲಾರ ಮಹಾದೇವ ಅವರ ಕುರಿತಾದ ಕೃತಿಯನ್ನು ಬಿಡುಗಡೆ ಮಾಡಿದರು. ಮಾಜಿ ಮುಖ್ಯಮಂತ್ರಿ ಜಗದೀಶ್‌ಶೆಟ್ಟರ್, ಸಚಿವ ಎಚ್.ಕೆ.ಪಾಟೀಲ್, ಕಸಾಪ ಮಾಜಿ ಅಧ್ಯಕ್ಷ ಮನುಬಳಿಗಾರ್, ನಾಡೋಜ ಡಾ.ವೂಡೇ ಪಿ.ಕೃಷ್ಣ ಮತ್ತಿತರರು ಹಾಜರಿದ್ದರು.

ಪ್ರಜಾವಾಣಿ ಮಂಗಳವಾರ • ಜೂನ್ 6, 2023



ನಗರದಲ್ಲಿ ಸೋಮವಾರ ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಮತ್ತು 'ಜ್ಞಾನಸೂತ್ರ' ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಶರ್ಮಾ ಅವರು ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ ಪ್ರಾಧ್ಯಾಪಕಿ ಡಾ.ಕೆ.ಶಾರದಾ ಅವರಿಗೆ 'ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ಯನ್ನು ಪ್ರದಾನ ಮಾಡಿದರು. ಲೇಖಕಿ ಶೈಲಜಾ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ್, ಕರ್ನಾಟಕ ಗಾಂಧಿಸ್ಮಾರಕ ನಿಧಿ ಅಧ್ಯಕ್ಷ ವೊಡೇ ಪಿ. ಕೃಷ್ಣ, ಪ್ರೊ.ಮಲ್ಲೇಪುರಂ, ಗುಲ್ಬರ್ಗ ವಿಶ್ವವಿದ್ಯಾಲದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ ಹಾಜರಿದ್ದರು. ಪ್ರಜಾವಾಣಿ ಚಿತ್ರ

ಕನ್ನಡಪ್ರಭ

ಭಾನುವಾರ 28.5.2023

ಸಂಸ್ಮರಣಾ ಕಾರ್ಯಕ್ರಮ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ ದೊರೆಸ್ವಾಮಿ ಜೀವನ, ಚಿಂತನೆ ಪ್ರಸ್ತುತ

ಅಪಾಯದಲ್ಲಿ ಪ್ರಜಾಪ್ರಭುತ್ವ: ನ್ಯಾ.ಗೋಪಾಲಗೌಡ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಪ್ರಜಾಪ್ರಭುತ್ವದ ಚಹರೆ ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ಸ್ವಾತಂತ್ರ್ಯ ಹೋರಾಟಗಾರ, ಡಾ| ಎಚ್.ಎಸ್.ದೊರೆಸ್ವಾಮಿ ಅವರ ಜೀವನ, ಚಿಂತನೆಗಳು ಹೆಚ್ಚು ಪ್ರಸ್ತುತವಾಗುತ್ತಿದೆ ಎಂದು ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಡಾ| ಎಚ್.ಎಸ್.ದೊರೆಸ್ವಾಮಿ ವೇದಿಕೆಯಿಂದ ಮಹಾತ್ಮ ಗಾಂಧಿ ರಸ್ತೆಯ ಗಾಂಧಿ ಪ್ರತಿಮೆ ಬಳಿ ನಡೆದ 'ಡಾ| ಎಚ್.ಎಸ್.ದೊರೆಸ್ವಾಮಿ ಅವರ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತಸಂದರ್ಭದಲ್ಲಿಪ್ರಜಾಪ್ರಭುತ್ವ ತನ್ನ ರೂಪವನ್ನೇ ಕಳೆದುಕೊಳ್ಳುವ ಅಪಾಯದಲ್ಲಿದೆ. ಗಾಂಧೀಜಿಅವರತತ್ವಗಳು, ದೊರೆಸ್ವಾಮಿ ಅವರ ಹೋರಾಟದ ಹಠ, ಅವರಸಂದೇಶಗಳು ನಮಗೆ ಮಾರ್ಗದರ್ಶಿ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಚಿಂತಕಿ, ಸಾಹಿತಿ ಡಾ| ವಿಜಯಾ ಮಾತನಾಡಿ, ಎಚ್.ಎಸ್.ದೊರೆಸ್ವಾಮಿ ಅವರು ಯಾವುದೇ ಹೋರಾಟ ಕೈಗೊಳ್ಳುವಾಗಲೂ ಆಳವಾದ ಅಧ್ಯಯನ ಮಾಡುತ್ತಿದ್ದರು. ತಜ್ಞರಿಂದ ಅಭಿಪ್ರಾಯ ಪಡೆಯುತ್ತಿದ್ದರು. ವಿಚಾರಕ್ಕೆ ಬದ್ಧರಾಗಿದ್ದ ಅವರು ಯಾವಾಗಲೂ ಯಾರ ಕುರಿತಾಗಿಯೂ ವೈಯಕ್ತಿಕ ವಿರೋಧ ಮಾಡುತ್ತಿರಲಿಲ್ಲ ಎಂದು ಹೇಳಿದರು.



ಮಹಾತ್ಮ ಗಾಂಧಿ ರಸ್ತೆಯ ಗಾಂಧಿ ಪ್ರತಿಮೆ ಬಳಿ 'ಡಾ| ಎಚ್.ಎಸ್.ದೊರೆಸ್ವಾಮಿ ಅವರ ಸಂಸ್ಕರಣೆ' ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಡಾ| ವೂಡೇ ಪಿ.ಕೃಷ್ಣ, ಚಿಂತಕಿ ಡಾ| ವಿಜಯಾ ಇತರರಿದ್ದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ನಾಡೋಜ ಡಾ| ವೂಡೇ ಪಿ.ಕೃಷ್ಣ ಮಾತನಾಡಿ, ದೊರೆಸ್ವಾಮಿ ಅವರ ಬದುಕು, ಹೋರಾಟ ನಮ್ಮ ಮುಂದಿನ ಜನಾಂಗಕ್ಕೆ ಮುಟ್ಟಬೇಕು. ಶುದ್ಧ ಗಾಂಧೀ ತತ್ವದ ಮೇಲೆ ಬದುಕನ್ನು ನಡೆಸಿದ ಅವರು ಸ್ವಯಂ ಪ್ರೇರಿತ ಬಡತನ ಸ್ವೀಕರಿಸಿ ಸಮಾಜದ ಸೇವೆ ಮಾಡಿದವರು. ಕಡೆ ಉಸಿರಿನವರೆಗೂ ಇತರರ ಬಾಳು ಹಸನಾಗಿಸಲು ಶ್ರಮಿಸಿದರು ಎಂದರು.

- ತನ್ನ ರೂಪವನ್ನೇ ಕಳೆದುಕೊಳ್ಳುವ ಅಪಾಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ
- ಇಂತಹ ವೇಳೆ ಮಹಾತ್ಮ ಗಾಂಧಿಜೀ ಅವರ ತತ್ವಗಳು, ದೊರೆಸ್ವಾಮಿ ಅವರ ಹೋರಾಟದ ಹಠ, ಸಂದೇಶಗಳು ನಮಗೆ ಮಾರ್ಗದರ್ಶಿ
- ಹೋರಾಟಕ್ಕೂ ಮುಂಚೆ ಅಧ್ಯಯನ ಮಾಡುತ್ತಿದ್ದ ಎಚ್ಚೆಸ್

ಮಾಜಿಮೇಯರ್ ಮೈಕಲ್ ಫರ್ನಾಂಡಿಸ್, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಇಂದಿರಾ ಕೃಷ್ಣಪ್ಪ, ಡಾ| ವಸುಂಧರಾ ಭೂಪತಿ, ಹಿರಿಯ ಪತ್ರಕರ್ತ ನಾಗೇಶ್ ಹೆಗಡೆ, ಮಾವಳ್ಳಿ ಶಂಕರ್ ಇದ್ದರು.

ಈ ಸಂಜೆ

May 26, 2023



ಗಾಂಧಿ ಸ್ಮಾರಕ ನಿಧಿ, ಶಾಂತಿ ಪ್ರತಿಷ್ಠಾನ, ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗಳ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಡಾ.ಎಚ್.ಎಸ್.ದೊರೆಸ್ವಾಮಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಅವರು ದೊರೆಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ನಾಡೋಜ ಡಾ.ವೂಡೆ ಪಿ.ಕೃಷ್ಣ, ಮೈಕೆಲ್ ಫರ್ನಾಂಡೀಸ್, ಡಾ.ವಿಜಯ ಮತಿತರರು ಉಪಸಿತರಿದರು.

ಉಜ್ಜನಪ್ಪನವರ ಕೃತಿ ಕಾನೂರು ಹೆಗ್ಗಡತಿ ಕಾದಂಬರಿ ರೀತಿ ಮೂಡಿ ಬಂದಿದೆ...
ಚಂದ್ರವಳ್ಳಿ ನ್ಯೂಸ್, ಚಿತ್ರದುರ್ಗ:

ಗೌನಹಳ್ಳಿಯಂತಹ ಕುಗ್ರಾಮ ಕಾಲಾಂತರದಲ್ಲಿ ಎಲ್ಲಾ ಜಾತಿ ಧರ್ಮದವರನ್ನು ಒಳಗೊಳ್ಳುತ್ತ ಶಾಂತಿ ಸೌಹಾರ್ದತೆಯ ಸರ್ವಜನಾಂಗದ ಶಾಂತಿಯ ತೋಟ ಆಯಿತು ಎಂಬ ಚಿತ್ರಣ ಬಹಳ ಸುಂದರವಾಗಿ ಜಿ.ಎಸ್. ಉಜ್ಜನಪ್ಪ ಅವರ 'ಹಬ್ಬಿದಾ ಮೇಲೆ ಮಧ್ಯದೊಳಗೆ' ಕೃತಿಯಲ್ಲಿ ಚಿತ್ರಿಸಿದ್ದಾರೆ ಎಂದು ಶಿಕ್ಷಣ ತಜ್ಞ, ನಾಡೋಜ, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಹೇಳಿದರು.

ಚಿತ್ರದುರ್ಗ ನಗರದ ರೋಟರಿ ಬಾಲಭವನದಲ್ಲಿ ಬೆಂಗಳೂರು ಸಿವಿಜಿ ಪಬ್ಲಿಕೇಷನ್ಸ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಜಿ. ಎಸ್ ಉಜ್ಜನಪ್ಪ ಅವರ ಹಬ್ಬಿದಾ ಮಲೆ ಮಧ್ಯದೊಳಗೆ (ಕಾದಂಬರಿ) ಹಾಗೂ ಖ್ಯಾತ ಕವಿ ಚಂದ್ರಶೇಖರ ತಾಳ್ಯ ಅವರ (ಕವನ ಸಂಕಲನ) ಪುಸ್ತಕಗಳ ಬಿಡುಗಡೆ ಮಾಡಿ ಮಾತನಾಡಿದರು.
ಕುಂಚಿಗರು ಶೈವ ಪರಂಪರೆಯ ಪ್ರಭಾವಕ್ಕೆ ಒಳಗಾಗಿ ಕುಂಚಿಟಿಗ ಲಿಂಗಾಯತರಾದುದು ಹಾಗೂ ಒಟ್ಟಾರೆ ವಿವಿಧ ಪ್ರಭಾವಗಳಿಗೆ ಒಳಗಾದ ಗ್ರಾಮಗಳು ವಿಘಟನೆಗೊಂಡವು ಎಂಬ ವಾಸ್ತವ ಸಂಗತಿ ಕೂಡ ಇಲ್ಲಿ ಅನಾವರಣಗೊಂಡಿದೆ ಎಂದು ತಿಳಿಸಿದರು.
ಅವರು ೩ ಕೃತಿಗಳ ಬಗ್ಗೆ ಅವರ ನೋಟವನ್ನು ಹಂಚಿಕೊಳ್ಳುತ್ತಾ ಉಜ್ಜನಪ್ಪನವರ 60 ವರ್ಷಗಳ ೨ಂತರ ಆರಂಭವಾದ ಹಾಗೂ ಈ 20 ವರ್ಷಗಳಿಂದ ಮುಂದುವರೆಯುತ್ತಿರುವ ಸಾಹಿತ್ಯದ ಸೇವೆಯು ಆದರ್ಶನೀಯ ಹಾಗೂ ಪ್ರಶಂಸನೀಯ ಎಂದು ಹೇಳಿದರು.

ಅಗ್ರಹಾರ ಕೃಷ್ಣಮೂರ್ತಿ ಉರಿಯ ಗಿರಿಯನೇರಿ ಕೃತಿ ಕುರಿತು ಮಾತನಾಡಿ, ನವ್ಯ ಕಾವ್ಯದ ಇತಿಹಾಸ ಹುಟ್ಟು ಶೈಲಿಯನ್ನು ಹಂಚಿಕೊಳ್ಳುತ್ತಾ ಚಂದ್ರಶೇಖರ ತಾಳ್ಯ ಅವರ ಕವಿಗಾರಿಕೆಯನ್ನು ಪ್ರಶಂಸಿದರು.



22/5/23

ಪುಸ್ತದಲ್ಲಿನ ಕೊನೆಯ ಹಾಡು ಹಾಗು ಒಂದಾನೊಂದು ಕಾಲದಲ್ಲಿ ಕವಿತೆಗಳನ್ನು ಓದಿ ಹೇಳಿದರು. ತಾಳ್ಯ ಅವರ ಕಾವ್ಯಗಳು ಸರಳ ಹಾಗೂ ಓದುಗರಿಗೆ ಬೇಕಾಗುವ ಸಂದಿಗ್ಧತೆಯನ್ನು ಹೊಂದಿವೆ ಎಂದು ಹೇಳಿದರು.
ಮುಂದುವರೆದು ಮಾತನಾಡಿದ ಅಗ್ರಹಾರ ಕೃಷ್ಣಮೂರ್ತಿ, ಸಾಂಸ್ಕೃತಿಕ ಸಾಹಿತ್ಯಕ್ಕೆ ತೊಡಗಿಸಿಕೊಳ್ಳುವ ಕಾರ್ಯ ಕಷ್ಟದ್ದು. ಧ್ಯಾನ ಏಕಾಗ್ರತೆ ರೂಪದಲ್ಲಿ ತಾಳ್ಯ ಕೆಲಸ ಮಾಡಿದ್ದಾರೆ. ಪ್ರವಾಹದ ರೂಪದಲ್ಲಿ ನವೋದಯ ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದ ತಾಳ್ಯ ಅವರು ಕಾವ್ಯ ರಚನಗೆ ಬೇಕಾದ ಶಿಸ್ತು ಭಾಷೆಯ ಪ್ರೌಢಿಮೆ ಅವರಲ್ಲಿದೆ. ಕಾವ್ಯದ ಶೈಲಿಯ ಬದಲಾವಣೆ ಮುಖ್ಯ. ಆದರೆ ಅಪಾಯ ಕೂಡಾ ಇದೆ. ಜ್ಞಾನ ಸಂಪತ್ತು ಬಹಳ ಮುಖ್ಯ. ಹೊಸ ಸೃಜನಶೀಲತೆಗೆ ಬಳಸಿಕೊಂಡು ಉತ್ಕೃಷ್ಟ ಕಾವ್ಯ ಬರೆಯಬಹುದು. ನವ್ಯ ಸಾಹಿತ್ಯ ರಚನೆಕಾರರ ಪೈಕಿ ಇವರು ತಾಳ್ಯ ಒಬ್ಬರು. ಕಾವ್ಯಕ್ಕೆ ಸಂದಿಗ್ಧತೆ ಬಹಳ ಮುಖ್ಯ. ಕಾವ್ಯದ ಲಕ್ಷಣಗಳೇ ಕೃತಿಯ ಜೀವಾಳ. ಕನ್ನಡದ ಬಹಳ ಮುಖ್ಯ ಕವಿಗಳಲ್ಲಿ ತಾಳ್ಯ ಒಬ್ಬರು.
ತತ್ವಶಾಸ್ತ್ರಜ್ಞರಾದ ಕವಿ ತಾಳ್ಯ ಅವರು ಆದರ್ಶಗಳಿಗೆ ಬಹಳ ಮೌಲ್ಯ ನೀಡಿದ್ದಾರೆ. ದಾರ್ಶನಿಕ ಕವಿಯಾಗಿರುವ ಕವಿಗಳು ತಮ್ಮ ಹೊಣೆಗಾರಿಕೆ ನಿರ್ವಹಿಸಿದ್ದಾರೆ ಎಂದು ತಿಳಿಸಿದರು.

1.

ಜಾನಪದ ವಿದ್ವಾಂಸರಾದ ಮೀರಾಸಾಬಿಹಳ್ಳಿ ಶಿವಣ್ಣ ಆಶಯ ನುಡಿಗಳನ್ನಾಡಿ, ಗುಡ್ಡ ಬೆಟ್ಟಗಳ ಮಧ್ಯೆ ಉದಸಿರುವ ಗೌನಹಳ್ಳಿಯಲ್ಲಿ ಹುಟ್ಟಿದ ಜಿ.ಎಸ್.ಉಜ್ಜನಪ್ಪನವರಿಗೆ ಉತ್ತಮ ಆಂಗ್ಲ ಭಾಷೆಯ ಹಿಡಿತ ಇದೆ. ಯತ್ತಪ್ಪ ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದ್ದಾರೆ. ಹೃದಯ ಸ್ಪರ್ಶಿಸಿಯಾದ ಬರವಣಿಗೆ ಇದೆ. 18 ಕೃತಿಗಳನ್ನು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಹಬ್ಬಿದಾ ಮಲೆ ಮಧ್ಯದೊಳಗೆ ಮುನ್ನೂರ ನಲವತ್ತೊಂದು ಪುಟಗಳ ಕೃತಿ. ಇದು ಗ್ರಾಮ ಸಂಸ್ಕೃತಿ ಸಂಕಥನ. ಈ ಸಂಕಥನವನ್ನು ನಿಖರವಾಗಿ ನಿರೂಪಿಸುವಾಗ ಯಾವುದೇ ಕಸರತ್ತು ನಡೆಸಿಲ್ಲ. ತುಂಬಾ ಲವಲವಿಕೆಯಿಂದ ಲೀಲಾಜಾಲವಾಗಿ ಮಸ್ತಕದಲ್ಲಿ ಇದ್ದುದನ್ನು ಪುಸ್ತಕಕ್ಕೆ ಇಳಿಸಿದ್ದೀರಿ. ಎದೆಯ ಗೂಡಿನಲ್ಲಿ ಅವಿತಿದ್ದ ಅಲಿಖಿತ ಗೌನಹಳ್ಳಿಯ ಚರಿತ್ರೆ ಸಹಜ ಹೆರಿಗೆಯಂತೆ ಸಲೀಸಾಗಿ ಬರೆಯಲ್ಪಟ್ಟಿದೆ. ಈ ಕೃತಿ ಸೇರಿದಂತೆ ಉಜ್ಜನಪ್ಪನವರ ಇತರೆ ಕೃತಿಗಳನ್ನು ಓದುತ್ತಿದ್ದರೆ ಅವರೊಳಗೊಬ್ಬ ಬಯಲುಸೀಮೆಯ ಕುವೆಂಪು ಅಡಗಿರಬಹುದೆ? ಎನಿಸುತ್ತದೆ. ಬರಹ, ಬರಹದ ಹೂರಣ, ಬರಹದ ತೋರಣ ಎಲ್ಲವೂ ವಿದ್ವತ್ತಿನಿಂದ ಕೂಡಿದೆ.

ಸುದೀರ್ಘ ಬದುಕಿನಲ್ಲಿ ಕಂಡ ಕೇಳಿದ ಅನುಭವಿಸಿದ ಅನುಭಾವಿಸಿದ ಕಳೆದ ನೂರಿನ್ನೂರು ವರ್ಷಗಳ ಗೌನಹಳ್ಳಿಯ ಬದುಕನ್ನು ಸೊಗಸಾದ ಭಾಷೆಯಲ್ಲಿ ನಿರೂಪಣೆ ಮಾಡಿದ್ದಾರೆ ಎಂದು ತಿಳಿಸಿದರು.

ಕಾಲಕಾಲಕ್ಕೆ ಆಗುವ ಸಾಮಾಜಿಕ ಮತ್ತು ಧಾರ್ಮಿಕ ಪ್ರಕ್ರಿಯೆ, ಸ್ಥಿತ್ಯಂತರ, ಬದಲಾವಣೆಯನ್ನು ತಡೆಯಲಾಗದು. ಒಟ್ಟಾರೆ ಉಜ್ಜನಪ್ಪನವರ ಕೃತಿ ಮಲೆನಾಡಿನ ಕಾನೂರು ಹೆಗ್ಗಡತಿ ಕಾದಂಬರಿಯ ರೀತಿಯಲ್ಲಿ ಬಯಲುಸೀಮೆಯ ಕಾದಂಬರಿಯಂತೆ ಓದುಗರನ್ನು ಸೆಳೆದು ಅಪ್ಪಿಕೊಳ್ಳುತ್ತದೆ. ಅಸಾದ್ ಅವರ ರೇಖಾಚಿತ್ರಗಳು ಸಹ ಕೃತಿಗೆ ಪೂರಕವಾಗಿ ಮೂಡಿಬಂದಿವೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಮಾಜಿ ಸಂಸದ ಎಚ್.ಹನುಮಂತಪ್ಪನವರ ಅಧ್ಯಕ್ಷತೆಯಲ್ಲಿ ಕೃತಿಗಳು ಬಿಡುಗಡೆಯಾದವು.

ಕಾರ್ಯಕ್ರಮವು ಬಿ.ಎಂ.ಶ್ರೀ ಯವರ ಕರುಣಾಳು ಬಾ ಬೆಳಕೆ ಎಂಬ ಹಾಡಿನಿಂದ ಪ್ರಾರಂಭಗೊಂಡಿತು.

ಮೀರಾಸಾಬೆಹಳ್ಳಿ ಶಿವಣ್ಣ ಅವರು ಪ್ರಾಸ್ತಾವಿಕ ನುಡಿಗಳ ಮೂಲಕ ಎಲ್ಲ ಪ್ರಸ್ತುತ ಗಣ್ಯರ ಹಾಗು ಸಾಹಿತಿಗಳ ಪರಿಚಯ ಮಾಡಿಸಿದರು ಹಾಗೆ ಉಜ್ಜನಪ್ಪನವರ ಪ್ರಾರಂಭದ ಸಾಹಿತ್ಯದ ಹಾದಿಯನ್ನು ಹಂಚಿಕೊಳ್ಳುತ್ತಾ ಅವರೊಂದಿಗೆ ಒತ್ತಾಸೆಯಾಗಿ ಜೊತೆಗೆ ನಿಂತದ್ದನ್ನು ಹೇಳಿದರು.

ಡಾ. ಲೋಕೇಶ್ ಅಗಸನಕಟ್ಟೆ ಅವರು ಜಿ.ಎಸ್.ಉಜ್ಜನಪ್ಪನವರ ಕಾದಂಬರಿ ಕುರಿತು ಮಾತನಾಡಿ ಉಜ್ಜನಪ್ಪವರ ಕೃತಿ ಗಾಮ ಮತ್ತು ಭಾರತದ ಜೀವನವನ್ನು ಪರಿಚಯಿಸುವ ಪುಸ್ತಕವಾಗಿದೆ ಹಾಗೂ ಕಥೆಯಲ್ಲಿನ ಜೀವನ ಶೈಲಿ, ಉಪಯೋಗಿಸಿರುವ ಭಾಷೆಯು ವಿಶಿಷ್ಟವಾಗಿದೆ. ಈ ಕೃತಿಯು ಕಾದಂಬರಿಗಿಂತ ಮಹಾಕಥೆಯಾಗಿ ಸೂಕ್ಷ್ಮವಾದ ವಿವರಗಳನ್ನು ಒಳಗೊಂಡಿದೆ. ಕಾದಂಬರಿಯಲ್ಲಿನ ಗೌನಹಳ್ಳಿಯು ಯುಟೋಪಿಯವಾಗಿದೆ ಎಂದು ಹೇಳಿದರು. ಈ ಕೃತಿಯ ಕೊನೆಯಲ್ಲಿ ನೀಡಿರುವ ಟಿಪ್ಪಣಿ ಮತ್ತು ತಾಮ್ರದ ಪತ್ರಗಳು ತುಂಬಾ ಸಹಕಾರಿಯಾಗಿವೆ ಎಂದು ಹೇಳಿದರು. ಕೃತಿಕಾರರಾದ ಜಿ.ಎಸ್.ಉಜ್ಜನಪ್ಪ, ಚಂದ್ರಶೇಖರ್ ತಾಳ್ಯ, ಸಿವಿಜಿ ಚಂದ್ರು, ಬಿ.ಎ.ಲಿಂಗಾರೆಡ್ಡಿ, ಜಿ.ಎಂ.ಜಯಕುಮಾರ್, ಕೆ.ಎಂ.ಶಿವಸ್ವಾಮಿ, ದಿನೇಶ್ ಗೌಡಗೆರೆ ಮತ್ತಿತರರು ಇದ್ದರು.



ಕನ್ನಡಪ್ರಭ

ಮಂಗಳವಾರ 23.5.2023

ಚಂದ್ರಶೇಖರ ತಾಳ್ಯ ಕಾವ್ಯದಲ್ಲಿ ಸಂದಿಗ್ಧತೆ ಅನಾವರಣ

ಉರಿಯಗಿರಿಯನೇರಿ ಕೃತಿ ಬಿಡುಗಡೆಯಲ್ಲಿ ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ ಅಭಿಮತ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಚಂದ್ರಶೇಖರ ತಾಳ್ಯ ಅವರು ಸದಾ ಧ್ಯಾನಸ್ಥ ಸ್ಥಿತಿಯಲ್ಲಿ ಕಾವ್ಯ ಕಟ್ಟುತ್ತಿದ್ದು, ಸಂದಿಗ್ಧತೆಗಳ ಅನಾವರಣ ಮಾಡುತ್ತಿದ್ದಾರೆಂದು ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸಿವಿಜಿ ಪಬ್ಲಿಕೇಷನ್, ಕಾರ್ಯನಿರತರ ಪತ್ರಕರ್ತರ ಸಂಘ ಹಾಗೂ ಕಸಾಪ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಚಂದ್ರಶೇಖರ ತಾಳ್ಯ ಅವರ ಉರಿಯಗಿರಿಯನೇರಿ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಕಾವ್ಯ ಕಟುವಲ್ಲಿನ ಅವರ ಏಕಾಗ್ರತೆ ಅನನ್ಯವಾದುದೆಂದರು.

ನವ್ಯಕಾವ್ಯ ತನ್ನ ಉತ್ತುಂಗ ಸ್ಥಿತಿ ಮುಟ್ಟಿ ನಂತರ ಇಳಿಮುಖವತ್ತ ಸಾಗಿದಾಗ ನವೋದಯ ಕಾವ್ಯ ಪರಂಪರೆ ಪ್ರವಾಹದ ರೀತಿ ಹರಿಯಿತು. ಕುವೆಂಪು, ಪುತಿನ ಸೇರಿದಂತೆ ಕಾವ್ಯ ರಚನೆಯಲ್ಲಿ ಅನೇಕರು ಹೊರಹೊಮ್ಮಿದರು. ಕಾವ್ಯಕ್ಕೆ ಛಂದಸ್ಸು, ಪ್ರಾಚೀನ ಜ್ಞಾನ ಅಗತ್ಯ ಇಲ್ಲ ಎಂಬುದನ್ನು ಅಡಿಗರ ಕಾವ್ಯಗಳ ನಂತರ ಪ್ರಚಲಿತವಾಯಿತು. ಅವರಿಗೆ ಛಂದಸ್ಸು, ಪ್ರಾಚೀನ ಜ್ಞಾನ ಎಲ್ಲವೂ ಅರಿವಿದ್ದರಿಂದ ಕಾವ್ಯದ ಹೊಸ ಮಾದರಿಯನ್ನು ಬೆಳಕಿಗೆ ತಂದರು. ಆ ಸಂದರ್ಭದಲ್ಲಿ ಚಂದ್ರಶೇಖರ್ ತಾಳ್ಯ ಅವರು ಜ್ಞಾನದ ರೀತಿಯಲ್ಲಿ ಬರೆದಿದ್ದಾರೆ. ಅವರ ಬರವಣಿಗೆ ಅನೇಕ ಸಂದಿಗ್ಧತೆಗಳನ್ನ ಒಳಗೊಂಡ ರೀತಿಯ ಶೈಲಿಯದ್ದಾಗಿದೆ. ಭಾಷೆ, ಅರ್ಥ, ಸಂಕೀರ್ಣತೆ ಹೀಗೆ ಸಂದಿಗತೆಗಳ ಬರವಣಿಗೆಯನ್ನು ನೋಡುತ್ತೇವೆ.

ಕಾವ್ಯಕ್ಕೆ ಸಂದಿಗ್ಧತೆ ಬಹಳ ಮುಖ್ಯ. ಓದುಗನಿಗೆ ಸರಳವಾಗಿ ಕಾವ್ಯ ಅರ್ಥ ಬಿಟ್ಟುಕೊಡುವುದಿಲ್ಲ. ಸಂದಿಗ್ಧತೆಯ ನಂತರದಲ್ಲಿ ಕನ್ನಡದ ಕವಿಗಳ ಕವಿತೆಗಳು ಸಪ್ತತೆ ಕಡೆ ಬಂದವು. ತಾಳ್ಯ, ಎಚ್‌ಎಸ್‌ವಿ ಸೇರಿದಂತೆ ಅನೇಕರು ಆ ರೀತಿಯ ಕವಿತೆಗಳನ್ನು ರಚಿಸಿದ್ದಾರೆ. ತಾಳ್ಯ ಅವರು ತರ್ಕಶಾಸ್ತ್ರದ ಅಧ್ಯಾಪಕರಾಗಿ ಕವಿಯಾಗಿ ಜವಾಬ್ದಾರಿಗಳನ್ನು ಅರಿತು ನಿಸರ್ಗವನ್ನು ಅಡಗಿಸಿ ಕೊಂಡ ಕವಿತೆಗಳನ್ನು ರಚಿಸಿದ್ದಾರೆ. ಸಮಾಜದ ಜವಾಬ್ದಾರಿಯನ್ನು ಆಶಾವಾದವನ್ನು ಕವಿಯಾಗಿ ನೀಡುತ್ತಾ ಸೃಜನಶೀಲತೆ, ಶೋಧನೆಯ ಬಗೆಗಳು ಅವರ ಕಾವ್ಯದಲ್ಲಿ ಕಾಣಬಹುದಾಗಿದೆ ಎಂದು ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ಜೆ.ಎಸ್.ಉಜ್ಜಿನಪ್ಪ ಅವರ ಹಬ್ಬಿದಾ ಮಲೆ ಮಧ್ಯದೊಳಗೆ ಮಹಾ ಕಾದಂಬರಿ ಕುರಿತು ಮಾತನಾಡಿದ ವಿಮರ್ಶಕ ಡಾ.ಲೋಕೇಶ ಅಗಸನಕಟ್ಟೆ, ಭಾರತದ ಚರಿತ್ರೆಯಲ್ಲಿ ದಾಖಲಾಗುವಂತಹ ಸರ್ವರ ಸಹಬಾಳ್ವೆ ಮತ್ತು ಸಹಿಷ್ಣತೆ ಈ ಕೃತಿಯಲ್ಲಿ ಹೊರಹೊಮ್ಮಿದೆ. ಇದೀ ಕಾದಂಬರಿಯಲ್ಲಿ ಬಿಡಿಬಿಡಿಯಾದ ಸ್ಪಷ್ಟತೆಗಳನ್ನು ಬಿಡಿಸುತ್ತಾ ಹೋಗುತ್ತಾರೆ. ಅವರು ಬಳಸಿರುವ ಭಾಷೆ ಅತ್ಯಂತ ಭಿನ್ನವಾಗಿದೆ. ಭಿನ್ನ ಪದಗಳಿಗೆ ಅರ್ಥ ಅವರೇ ತಿಳಿಸಿದ್ದಾರೆ ಎಂದರು.

ಕೃತಿಯಲ್ಲಿ ವಿಭಿನ್ನ ಅಂಶಗಳನ್ನು ವ್ಯಕ್ತಪಡಿಸಿರುವುದು ಗಮನಿಸಬಹುದಾಗಿದೆ. ಗಾಡಿಯನ್ನು ಹಳ್ಳಿಗೆ ತರುವ ಕಥಾನಕವನ್ನು ಸ್ವಾರಸ್ಯಕರವಾಗಿ ವಿವರಿಸಿದ್ದು ಕಾಣಬಹುದು. ಗುಡ್ಡಗಳ ಮಧ್ಯೆ ಇರುವಂತಹ ಒಂದು ಚಿಕ್ಕ ಹಳ್ಳಿಯ ಪರಿಚಯವನ್ನು ಈ ಕೃತಿಯಲ್ಲಿ ತುಂಬ ವಿಭಿನ್ನವಾಗಿ ವಿವರಿಸಿದ್ದಾರೆ. ಬರವಣಿಗೆ ಮಾಗಿದ ಸಂದರ್ಭದಲ್ಲಿ ರಚಿಸಿರುವ ವಿಶೇಷವಾದ ಅಂಶಗಳನ್ನು ಕೃತಿಯಲ್ಲಿ ನೀಡಿದ್ದಾರೆ ಎಂದು ಹೇಳಿದರು.

ಪ್ರಕಾಶಕ ಸಿವಿಜಿ ಚಂದ್ರು, ಜಾನಪದ ವಿದ್ವಾಂಸ ಡಾ.ಮೀರಾಸಾಬಿಹಳ್ಳಿ ಶಿವಣ್ಣ, ನಾಡೋಜ ಡಾ.ಕೃಷ್ಣ ಮಾಜಿ ಸಂಸದ ಎಚ್.ಹನುಮಂತಪ್ಪ, ಬೈರಮಂಗಲ ರಾಮೇಗೌಡ, ಕಸಾಪ ಅಧ್ಯಕ್ಷ ಶಿವಸ್ವಾಮಿ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್‌ಗೌಡಗೆರೆ ಮತ್ತು ಕೃತಿಕಾರರಾದ ಚಂದ್ರಶೇಖರ ತಾಳ್ಯ, ಜೆ.ಎಸ್ ಉಜ್ಜಿನಪ್ಪ ಉಪಸ್ಥಿತರಿದ್ದರು.



ಚಿತ್ರದುರ್ಗದ ರೋಟರಿ ಬಾಲಭವನದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಕವಿ ಚಂದ್ರಶೇಖರ ತಾಳ್ಯ ಹಾಗೂ ಜೆ.ಎಸ್.ಉಜ್ಜಿನಪ್ಪ ಅವರ ಎರಡು ಕೃತಿಗಳ ಬಿಡುಗಡೆ ಮಾಡಲಾಯಿತು.

ವಿಶ್ವವಾಣಿ

23.05.2023 ಮಂಗಳವಾರ



ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ ಅವರ ನೆರಳ ನಿಧಾನ ಕೃತಿಯನ್ನು ನಾಡೋಜ ಪ್ರೊಡೇ ಪಿ. ಕೃಷ್ಣ ಅವರು ಲೋಕಾರ್ಪಣೆ ಮಾಡಿದರು. ಕವಿಗಳಾದ ಸತ್ಯಮಂಗಲ ಮಹದೇವ, ಕೃತಿಕಾರ ದ್ವಾರನಕುಂಟೆ ಪಾತಣ್ಣ, ಶೇಷಾದ್ರಿಪುರ ಸಂಜೆ ಕಾಲೇಜಿನ ಪ್ರಾಂಶುಪಾಲ ಸತೀಶ್ ಉಪಸ್ಥಿತರಿದ್ದರು.

ಪ್ರಜಾವಾಣಿ
22 May 2023

'ಪ್ರಬುದ್ಧತೆಯಿಂದ ಕೃತಿಯ ವಸ್ತುವಿಗೆ ನ್ಯಾಯ'

ಚಿತ್ರದುರ್ಗ: ಬರಹಗಾರರಲ್ಲಿ ಪ್ರಬುದ್ಧತೆ ಬಂದಾಗ ಮಾತ್ರ ಕೃತಿಯ ವಸ್ತುವಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ ಎಂದು ವಿಮರ್ಶಕ ಲೋಕೇಶ್ ಅಗಸನಕಟ್ಟೆ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ರೋಟರಿ ಬಾಲಭವನದಲ್ಲಿ ಭಾನುವಾರ ಸಿವಿಜಿ ಪಬ್ಲಿಕೇಷನ್ಸ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಜಿ.ಎಸ್. ಉಜ್ಜಿನಪ್ಪ ಅವರ 'ಹದ್ದಿನ [illegible]' ಬಯಲು [illegible] ಕಾದಂಬರಿ ಹಾಗೂ ಚಂದ್ರಶೇಖರ್ ತಾಳ್ಯ ಅವರ '[illegible]' [illegible] ಕವಿತೆಗಳು, '[illegible]' ಸಾಹಿತ್ಯಿಕ ವೈಚಾರಿಕ ಲೇಖನ ಪುಸ್ತಕ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಗುಡ್ಡಗಳ ನಡುವೆ ಇರುವಂತಹ ಚಿಕ್ಕ ಹಳ್ಳಿಯ ಪರಿಚಯವನ್ನು ಲೇಖಕ ಉಜ್ಜಿನಪ್ಪ ತಮ್ಮ ಕೃತಿಯಲ್ಲಿ ತುಂಬ ವಿಭಿನ್ನವಾಗಿ ವಿವರಿಸಿದ್ದಾರೆ. ಅನೇಕ ವಿಶೇಷ ಅಂಶಗಳನ್ನು ನೀಡಿದ್ದಾರೆ' ಎಂದು ಹೇಳಿದರು.

ಚಿಂತಕ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, 'ನವೋದಯ ಕಾವ್ಯಪರಂಪರೆಯಲ್ಲಿ ಪ್ರವಾಹದ ರೀತಿಯಲ್ಲಿ ಕವಿಗಳು ಬರೆಯುತ್ತಾ ಬಂದರು. ಚಂದ್ರಶೇಖರ್ ತಾಳ್ಯ ಸಹ ಧ್ಯಾನ, ಏಕಾಗ್ರತೆಯಿಂದ ಕವಿತೆಗಳನ್ನು ರಚಿಸಿದ್ದಾರೆ. ಓದುಗನಿಗೆ ಸರಳವಾಗಿ ಕಾವ್ಯ ತನ್ನ ಒಳಾರ್ಥ ಬಿಟ್ಟುಕೊಡುವುದಿಲ್ಲ' ಎಂದರು.



ಚಿತ್ರದುರ್ಗ ನಗರದ ರೋಟರಿ ಬಾಲಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೋಕೇಶ್ ಅಗಸನಕಟ್ಟೆ ಕೃತಿ ಲೋಕಾರ್ಪಣೆಗೊಳಿಸಿದರು.

ಎಸ್.ನಿಜಲಿಂಗಪ್ಪ ಸ್ಮಾರಕ ಸಮಿತಿ ಕಾರ್ಯದರ್ಶಿ ಎಚ್. ಹನುಮಂತಪ್ಪ, ಶಿಕ್ಷಣ ತಜ್ಞ ನಾಡೋಜ ಡಾ.ವೂಡೇ ಪಿ.ಕೃಷ್ಣ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ, ಲೇಖಕರಾದ ಜಿ.ಎಸ್.ಉಜ್ಜಿನಪ್ಪ, ಚಂದ್ರಶೇಖರ್ ತಾಳ್ಯ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್ ಗೌಡಗೆರೆ, ಪ್ರಕಾಶಕ ಸಿವಿಜಿ ಚಂದ್ರು, ಎಸ್‌ಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎ.ಲಿಂಗಾರೆಡ್ಡಿ, ವಿಮರ್ಶಕ ಬೈರಮಂಗಲ ರಾಮೇಗೌಡ ಅವರೂ ಈ ಸಂದರ್ಭದಲ್ಲಿ ಇದ್ದರು.

ಬೆಂಗಳೂರು
ಉದಯವಾಣಿ
ಸೋಮವಾರ, ಮೇ 8, 2023



ಸ್ವಾತಂತ್ರ್ಯ ಸೇನಾನಿ ಡಾ. ನಾ.ಸು. ಹರ್ಡೀಕರ್ ಅವರ 134ನೇ ಜನ್ಮ ದಿನೋತ್ಸವ ಪ್ರಯುಕ್ತ ಭಾನುವಾರ ನಗರದ ಕುಮಾರಕೃಪಾ ರಸ್ತೆಯಲ್ಲಿರುವ ಹರ್ಡೀಕರ್ ಪ್ರತಿಮೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ ಮಾಲಾರ್ಪಣೆ ಮಾಡಿದರು. ಭಾರತ ಸೇವಾದಳದ ಹಿರಿಯ ಕಾರ್ಯಕರ್ತ ಡಿ. ಮಣೆಯ್ಯ, ಆರ್.ರಂಗಣ್ಣ ನಾರಾಯಣ ಕೆ. ನಾಡೋಜ, ಏಕಾಂಬರೇಶ ಹಾಗೂ ಸೇವಾದಳದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ 06 ಸೋಮವಾರ, 8 ಮೇ 2023
ಬೆಂಗಳೂರು



ಸ್ವಾತಂತ್ರ್ಯ ಸೇನಾನಿ ಡಾ.ನಾ.ಸು. ಹರ್ಡೀಕರ್ ಅವರ 134ನೇ ಜನ್ಮ ದಿನೋತ್ಸವದ ಅಂಗವಾಗಿ ಕುಮಾರಕೃಪಾ ರಸ್ತೆಯಲ್ಲಿರುವ ಹರ್ಡೀಕರ್ ಪ್ರತಿಮೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ಭಾನುವಾರ ಮಾಲಾರ್ಪಣೆ ಮಾಡಿದರು. ಈ ವೇಳೆ ಭಾರತ ಸೇವಾದಳದ ಹಿರಿಯ ಕಾರ್ಯಕರ್ತ ಡಿ. ಮಣಿಯಯ್ಯ, ಆರ್. ರಂಗಣ್ಣ, ನಾರಾಯಣ ಕೆ. ಡಿಸೋಜಾ, ಏಕಾಂಬರೇಶ್ ಉಪಸ್ಥಿತರಿದ್ದರು.

ಪ್ರಜಾ ಪ್ರಗತಿ
May 8, 2023



ಸ್ವಾತಂತ್ರ್ಯ ಹೋರಾಟಗಾರ ಡಾ. ನಾ.ಸು. ಹರ್ಡೇಕರ್ ಅವರ 134ನೇ ಜನ್ಮದಿನದ ನಿಮಿತ್ತ ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಹರ್ಡಿಕರ್ ಪ್ರತಿಮೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರು ಮಾಲಾರ್ಪಣೆ ಮಾಡಿದರು. ಭಾರತ ಸೇವಾ ದಳದ ಹಿರಿಯ ಕಾರ್ಯಕರ್ತರಾದ ಡಿ. ಮಣಿಯಯ್ಯ, ಆರ್. ರಂಗಣ್ಣ, ನಾರಾಯಣ ಕೆ. ಡಿಸೋಜ, ಏಕಾಂಬರೇಶ ಹಾಗೂ ಸೇವಾದಳದ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಕನ್ನಡಪ್ರಭ ಬುಧವಾರ 3.5.2023

ಮಕ್ಕಳನ್ನು ಸಮಾಜದ ಆಸ್ತಿಯಾಗಿಸಿ: ಡಾ.ವೂಡೆ

ಕುಂಚಿಟಿಗ ಮಠದಲ್ಲಿ ಸಂಸ್ಕಾರ ಶಿಬಿರ ಸಮಾರೋಪ

• **ಕನ್ನಡಪ್ರಭ ವಾರ್ತೆ** ಕೊರಟಗೆರೆ

ಶಿಕ್ಷಣದಿಂದ ಬಲಿಷ್ಠ ದೇಶ ನಿರ್ಮಾಣವಾಗುವುದಿಲ್ಲ, ದೇಶ ಬಲಿಷ್ಠವಾಗಿ ನಿರ್ಮಾಣವಾಗಲು ಸಂಸ್ಕಾರದಿಂದ ಮಾತ್ರ ಸಾಧ್ಯ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೆ ಪಿ.ಕೃಷ್ಣ ತಿಳಿಸಿದರು.

ತಾಲೂಕಿನ ಎಲೆರಾಂಪುರ ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ 2ನೇ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದಲ್ಲಿ ಸಮಾರೋಪದಲ್ಲಿ ಮಾತನಾಡಿ, ಮಕ್ಕಳನ್ನು ನಾವು ಚಾರಿತ್ರ್ಯವಂತರಾಗಿ, ಶೀಲವಂತರಾಗಿ ರೂಪಿಸುವುದರ ಮೂಲಕ ಸದೃಢ ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಬೇಕು. ಎಂದರು.

ಮಕ್ಕಳು ಬೇಸಿಗೆ ರಜೆಯಲ್ಲಿ ಕೇವಲ ಟಿ.ವಿ ಮೊಬೈಲ್‌ಗಳ ದಾಸರಾಗುತ್ತಿದ್ದ ಈ ಸಮಯವನ್ನು ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ಸಂಸ್ಕಾರಯುತ ನಮ್ಮ ಸಂಸ್ಕೃತಿಯನ್ನು ಸಾರುವಂತಹ ವಚನ, ದೇಸೀಯ ಕಲೆಗಳು, ನೃತ್ಯಗಳು, ನೀತಿ ಕತೆಗಳು ಶ್ಲೋಕ ಮತ್ತು ಹಾಡುಗಳನ್ನು ಕಲಿಸುವುದರ ಮೂಲಕ ಮಕ್ಕಳಲ್ಲಿ ನವಚೈತನ್ಯವನ್ನು ರೂಪಿಸಿದ್ದು ಒಳ್ಳೆಯ ನಡೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ಲ, ಆಯುರ್ವೇದ ತಜ್ಞೆ ಡಾ. ಕೆ. ಸ್ನೇಹ, ವಿಶ್ರಾಂತ ಸಂಸ್ಕೃತ ಪ್ರಾಂಶುಪಾಲ ಡಾ. ವೆಂಕಟೇಶಪ್ಪ, ಮಕ್ಕಳ ತಜ್ಞ ಡಾ. ನವೀನ್ ದೇವರಾಜಯ್ಯ, ನಿವೃತ್ತ ಪ್ರಾಚಾರ್ಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಸಿಂಡಿಕೇಟ್ ಸದಸ್ಯ ಡಾ. ಸಿ ನಂಜುಂಡಯ್ಯ, ಸರ್ಕಲ್ ಇನ್‌ಸ್ಪೆಕ್ಟರ್ ಮುತ್ತುರಾಜ್, ಡಿ.ಸಿ ಶ್ರೀನಿವಾಸ್ ಮಾತನಾಡಿದರು.

ಈ ವೇಳೆ ಸಂಚಾಲಕ ಡಾ.ಟಿ.ಎಸ್ ಕುಮಾರಸ್ವಾಮಿ, ಶಿಬಿರ ದ ನೇತೃತ್ವ ವಹಿಸಿದ್ದ ಡಾ. ರವೀಂದ್ರ, ಪ್ರೊ.ಬೋಗಣ್ಣ, ಶಿಕ್ಷಕ ಗಿರೀಶ್, ರಘು ಲಿಂಗರಾಜು ಇದ್ದರು.

ಕನ್ನಡಪ್ರಭ ಬುಧವಾರ 3.5.2023



ಕೊರಟಗೆರೆ ತಾಲೂಕಿನ ಕುಂಚಿಟಿಗ ಮಹಾಸಂಸ್ಥಾನದ ಮಠದಲ್ಲಿ ನಡೆದ ಸಂಸ್ಕಾರ ಶಿಬಿರದಲ್ಲಿ ಡಾ. ಹನುಮಂತನಾಥ ಸ್ವಾಮೀಜಿ ಅವರಿಗೆ ಭಕ್ತರಿಂದ ಬೆಳ್ಳಿ ಕಿರೀಟ ಧಾರಣೆ ಮಾಡುವ ಮೂಲಕ ಕುಂಚಿಟಿಗರ ಜಗದ್ಗುರು ಎಂದು ಘೋಷಣೆ ಮಾಡಿ ಪುಷ್ಪನಮನ ಸಲ್ಲಿಸಲಾಯಿತು.

ಪ್ರಜಾ ಪ್ರಗತಿ

May 3, 2023

ಸಂಸ್ಕಾರದಿಂದ ಮಾತ್ರ ರಾಷ್ಟ್ರ ಬಲಿಷ್ಠತೆ ಸಾಧ್ಯ

ಶಿಬಿರದ ಸಮಾರೋಪ ಸಮಾರಂಭದಲ್ಲಿ ಡಾ. ವೂಡೆ ಪಿ. ಕೃಷ್ಣ ಅಭಿಮತ

■ ಪ್ರಜಾಪ್ರಗತಿ.ಕಾಂ



ಸಂಸ್ಕಾರ ಶಿಬಿರದಲ್ಲಿ ಡಾ. ಹನುಮಂತನಾಥ ಸ್ವಾಮೀಜಿ ಅವರಿಗೆ ಭಕ್ತರಿಂದ ಬೆಳ್ಳಿ ಕಿರೀಟ ಧಾರಣೆ ಮಾಡುವ ಮೂಲಕ ಕುಂಚಿಟಿಗರ ಜಗದ್ಗುರು ಎಂದು ಘೋಷಣೆ ಮಾಡುವುದರ ಮೂಲಕ ಪುಷ್ಪನಮನ ಸಲ್ಲಿಸಲಾಯಿತು.

ಕೊರಟಗೆರೆ : ಶಿಕ್ಷಣದಿಂದ ಬಲಿಷ್ಠ ದೇಶ ನಿರ್ಮಾಣವಾಗುವುದಿಲ್ಲ, ದೇಶ ಬಲಿಷ್ಠವಾಗಿ ನಿರ್ಮಾಣವಾಗಲು ಸಂಸ್ಕಾರದಿಂದ ಮಾತ್ರ ಸಾಧ್ಯ ಎಂದು ಶೇಷಾದ್ರಿ ಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೆ ಪಿ. ಕೃಷ್ಣ ತಿಳಿಸಿದರು. ಅವರು ತಾಲ್ಲೂಕಿನ ಎಲೆರಾಂಪುರ ಕುಂಚಿಟಿಗ ಮಹಾ ಸಂಸ್ಥಾನ ಮಠದಲ್ಲಿ ಸೋಮವಾರ 2 ನೆ ಸಂಸ್ಕಾರ ಶಿಬಿರದ ಸಮಾರೋಪ ಭಾಷಣ ಮಾಡಿದರು.

ಮಕ್ಕಳನ್ನು ನಾವು ಚಾರಿತ್ರ್ಯವಂತರಾಗಿ, ಶೀಲವಂತರಾಗಿ ರೂಪಿಸುವುದರ ಮೂಲಕ ಸದೃಢ ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಬೇಕು. ಇಂದು ಶಾಲಾ ಕಾಲೇಜಿನಲ್ಲಿ ಕೇವಲ ಅಕ್ಷರ ಜ್ಞಾನವನ್ನಷ್ಟೆ ನೀಡುತ್ತಿದ್ದು, ನೈತಿಕ ಶಿಕ್ಷಣಕ್ಕೆ ಆದ್ಯತೆಯನ್ನು ನೀಡದಿರುವುದರ ಕಾರಣವೇ ಆತಂಕವಾದ ಹೆಚ್ಚುತ್ತಿದೆ ಎಂದು ವಿಷಾದಿಸಿದರು. ಮಕ್ಕಳು ಬೇಸಿಗೆ ರಜೆಯಲ್ಲಿ ಕೇವಲ ಟಿ.ವಿ ಮೊಬೈಲ್‌ಗಳ ದಾಸರಾಗುತ್ತಿದ್ದ ಈ ಸಮಯವನ್ನು ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ಸಂಸ್ಕಾರಯುತ ನಮ್ಮ ಸಂಸ್ಕೃತಿಯನ್ನು ಸಾರುವಂತಹ ವಚನ, ದೇಸೀಯ ಕಲೆಗಳು, ನೃತ್ಯಗಳು, ನೀತಿ ಕತೆಗಳು, ಶ್ಲೋಕ ಮತ್ತು ಹಾಡುಗಳನ್ನು ಕಲಿಸುವುದರ ಮೂಲಕ ಮಕ್ಕಳಲ್ಲಿ ನವಚೈತನ್ಯವನ್ನು ರೂಪಿಸಿದ್ದು, ಹಿಂದೆ ಕೇವಲ ಆದಿಚುಂಚನಗಿರಿ ಮಠದಲ್ಲಿ ಮಾತ್ರ ನಡೆಯುತ್ತಿದ್ದ ಸಂಸ್ಕಾರ ಶಿಬಿರ ಈಗ ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿಯೂ ಆರಂಭವಾಗಿರುವುದು ಅತ್ಯುತ್ತಮ ಬೆಳವಣಿಗೆ ಎಂದರು.

ತುಮಕೂರು ವಿಶ್ವವಿದ್ಯಾನಿಲಯ ಕುಲಸಚಿವೆ ನಹಿದಾ ಜಂ ಜಂ, ಇಂದು ನಾವು ಕಲಿಯುತ್ತಿರುವ ಶಿಕ್ಷಣದಲ್ಲಿ ಸಂಸ್ಕಾರ ಇಲ್ಲ, ಸಂಸ್ಕಾರ ಇರುವುದು ಕೇವಲ ಮಠಗಳಲ್ಲಿ ಮಾತ್ರ. ಎಲ್ಲವೂ ವ್ಯಾಪಾರೀಕರಣವಾಗಿದೆ. ಆದರೆ ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ 10 ದಿನಗಳ ಕಾಲ ನಡೆದಂತಹ ಸಂಸ್ಕಾರ ಶಿಬಿರದಲ್ಲಿ ಮಕ್ಕಳನ್ನು ಅತ್ಯುತ್ತಮ ರೀತಿಯಲ್ಲಿ ಸಂಸ್ಕಾರವಂತರನ್ನಾಗಿ ಮಾಡಿ ಮನೆಗೆ ಕಳುಹಿಸಲಾಗುತ್ತಿದೆ. ನಾವು ಹೇಳುವುದನ್ನೆಲ್ಲಾ ಮಕ್ಕಳು ಕಲಿಯುವುದಿಲ್ಲ, ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ. ಪೋಷಕರು ಉತ್ತಮ ರೀತಿಯಲ್ಲಿ ಮಕ್ಕಳನ್ನು ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಸು ಹಾನಗಲ್ಲ, ಆಯುರ್ವೇದ ತಜ್ಞೆ ಡಾ. ಕೆ. ಸ್ನೇಹ, ಸಂಸ್ಕೃತ ಪ್ರಾಂಶುಪಾಲ ಡಾ. ವೆಂಕಟೇಶಪ್ಪ, ಮಕ್ಕಳ ತಜ್ಞ ಡಾ. ನವೀನ್ ದೇವರಾಜಯ್ಯ, ನಿವೃತ್ತ ಪ್ರಾಚಾರ್ಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಸಿಂಡಿಕೇಟ್ ಸದಸ್ಯ ಡಾ. ಸಿ ನಂಜುಂಡಯ್ಯ, ಸರ್ಕಲ್ ಇನ್ಸ್‌ಪೆಕ್ಟರ್ ಮುತ್ತುರಾಜ್, ಡಿ.ಸಿ ಶ್ರೀನಿವಾಸ್ ಮಾತನಾಡಿದರು.

ವೇದಿಕೆಯಲ್ಲಿ ಸಂಸ್ಕಾರ ಶಿಬಿರದ ಸಂಚಾಲಕ ಡಾ. ಟಿ.ಎಸ್ ಕುಮಾರಸ್ವಾಮಿ, ಶಿಬಿರದ ನೇತೃತ್ವ ವಹಿಸಿದ್ದ ಡಾ. ರವೀಂದ್ರ, ಪ್ರೊ. ಭೋಗಣ್ಣ, ಶಿಕ್ಷಕರಾದ ಗಿರೀಶ್, ರಘು ಲಿಂಗರಾಜು ಸೇರಿದಂತೆ ಇತರರು ಇದ್ದರು.

ಕೇವಲ ಹಣ ಸಂಪಾದನೆಯನ್ನೇ ಮುಖ್ಯ ವೃತ್ತಿಯನ್ನಾಗಿಟ್ಟುಕೊಂಡು ಎಲ್ಲರು ಒತ್ತಡದ ಬದುಕಿನಲ್ಲಿ ಓಡುತ್ತಿದ್ದೀರಿ. ನಿಮ್ಮ ಮಕ್ಕಳನ್ನು ಸಮಾಜಕ್ಕೆ ಉತ್ತಮ ವ್ಯಕ್ತಿಯನ್ನಾಗಿ ರೂಪಿಸಲು ಯಾರೂ ಚಿಂತಿಸುತ್ತಿಲ್ಲ, ಮಕ್ಕಳಿಗೆ ಕೇವಲ ಹಣ ನೀಡಿದರೆ ಎಲ್ಲವೂ ನೀಡಿದಂತೆ ಎನ್ನುವ ತಪ್ಪು ಕಲ್ಪನೆಯಲ್ಲಿ ಪೋಷಕರಿದ್ದು, ಇದರಿಂದ ಹೊರ ಬರಬೇಕು. ಮಕ್ಕಳಿಗೆ ಸಂಸ್ಕಾರ, ಪ್ರೀತಿ, ಪ್ರೇಮ ಸಂಬಂಧಗಳ ಮೌಲ್ಯಗಳನ್ನು ತಿಳಿಸದೇ ಹೋದಲ್ಲಿ ಎಲ್ಲವೂ ವ್ಯರ್ಥವಾಗಲಿದ್ದು, ಎಲ್ಲರೂ ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಡಾ.ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗ ಮಹಾಸಂಸ್ಥಾನ ಮಠ, ಎಲೆರಾಂಪುರ

ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ನಾಡೋಜ ಡಾ.ವೂಡೆ ಪಿ. ಕೃಷ್ಣ ಅವರಿಗೆ ಪೀಠಾಧ್ಯಕ್ಷ ಡಾ.ಹನುಮಂತನಾಥಸ್ವಾಮೀಜಿ ನೇತೃತ್ವದಲ್ಲಿ ಅಭಿನಂದಿಸಲಾಯಿತು.

ಪ್ರಜಾಮನ

ಶಿಕ್ಷಣದಿಂದ ಬಲಿಷ್ಟ ದೇಶ ನಿರ್ಮಾಣ

ಕೊರಟಗೆರೆ: ಶಿಕ್ಷಣದಿಂದ ಬಲಿಷ್ಟ ದೇಶ ನಿರ್ಮಾಣವಾಗುವುದಿಲ್ಲ ದೇಶ ಬಲಿಷ್ಟವಾಗಿ ..ರ್ಮಾಣವಾಗಲು ಸಂಸ್ಕಾರದಿಂದ ಮಾತ್ರ ಸಾಧ್ಯ ಎಂದು ಶೇಷಾದ್ರಿ ಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೆ ಪಿ. ಕೃಷ್ಣ ತಿಳಿಸಿದರು.



ತಾಲೂಕಿನ ಎಲೆರಾಂಪುರ ಕುಂಚಿಟಿಗ ಮಹಾಂಸ್ಥಾನ ಮಠದಲ್ಲಿ 2 ನೇ ಸಂಸ್ಕಾರ ಶಿಭಿರದಲ್ಲಿ ಸೋಮವಾರ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣವನ್ನು ಮಾಡಿದರು.

ಮಕ್ಕಳನ್ನು ನಾವು ಚಾರಿತ್ರ್ಯವಂತರಾಗಿ, ಶೀಲವಂತರಾಗಿ ರೂಪಿಸುವುದರ ಮೂಲಕ ಸದೃಡ ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಬೇಕು, ಇಂದು ಶಾಲಾ ಕಾಲೇಜಿನಲ್ಲಿ ಕೇವಲ ಅಕ್ಷರ ಜ್ಞಾನವನಷ್ಟೇ ನೀಡುತ್ತಿದ್ದು ನೈತಿಕ ಶಿಕ್ಷಣಕ್ಕೆ ಆದ್ಯತೆಯನ್ನು ನೀಡದಿರುವುದರ ಕಾರಣವೇ ಆತಂಕವಾದ ಹೆಚ್ಚುತ್ತಿದೆ ಎಂದು ವಿಷಾದಿಸಿದರು. ಮಕ್ಕಳು ಬೇಸಿಗೆ ರಜೆಯಲ್ಲಿ ಕೇವಲ ಟಿ.ವಿ ಮೊಬೈಲ್ ಗಳ ದಾಸರಾಗುತ್ತಿದ್ದ ಈ ಸಮಯವನ್ನು ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ಸಂಸ್ಕಾರಯುತ ನಮ್ಮ ಸಂಸ್ಕೃತಿಯನ್ನು ಸಾರುವಂತಹ ವಚನ, ದೇಸೀಯ ಕಲೆಗಳು, ನೃತ್ಯಗಳು, ನೀತಿ ಕತೆಗಳು ಶ್ಲೋಕ ಮತ್ತು ಹಾಡುಗಳನ್ನು ಕಲಿಸುವುದರ ಮೂಲಕ ಮಕ್ಕಳಲ್ಲಿ ನವಚೈತನ್ಯವನ್ನು ರೂಪಿಸಿದ್ದು ಹಿಂದೆ ಕೇವಲ ಆದಿಚುಂಚನಗಿರಿ ಮಠದಲ್ಲಿ ಮಾತ್ರ ನಡೆಯುತ್ತಿದ್ದ ಸಂಸ್ಕಾರ ಶಿಭಿರ ಈಗ ಕುಂಚಿಟಿ ಮಹಾಸಂಸ್ಥಾನ ಮಠದಲ್ಲಿಯೂ ಆರಂಭವಾಗಿರುವುದು ಅತ್ಯುತ್ತಮ ಬೆಳವಣಿಗೆ ಎಂದರು.

ಇಂದು ನಾವು ಕಲಿಯುತ್ತಿರುವ ಶಿಕ್ಷಣದಲ್ಲಿ ಸಂಸ್ಕಾರ ಇಲ್ಲ? ಸಂಸ್ಕಾರ ಇರುವುದು ಕೇವಲ ಮಠಗಳಲ್ಲಿ ಮಾತ್ರ ಎಲ್ಲವೂ ವ್ಯಾಪಾರೀಕರಣವಾಗಿದೆ ಆದರೆ ಕುಂಚಿಟಿಗ ಮಹಾಂಸ್ಥಾನ ಮಠದಲ್ಲಿ 10 ದಿನಗಳ ಕಾಲ ನಡೆದಂತಹ ಸಂಸ್ಕಾರ ಶಿಭಿರದಲ್ಲಿ ಮಕ್ಕಳನ್ನು ಅತ್ಯುತ್ತಮ ರೀತಿಯಲ್ಲಿ ಸಂಸ್ಕಾರವಂತರನ್ನಾಗಿ ಮಾಡಿ ಮನೆಗೆ ಕಳುಹಿಸಲಾಗುತ್ತಿದೆ ನಾವು ಹೇಳುವುದನ್ನೆಲ್ಲಾ ಮಕ್ಕಳು ಕಲಿಯುವುದಿಲ್ಲ ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ ಪೋಷಕರು ಉತ್ತಮ ರೀತಿಯಲ್ಲಿ ಮಕ್ಕಳನ್ನು ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಬೇಕು ಎಂದು ತುಮಕೂರು ವಿಶ್ವವಿದ್ಯಾನಿಲಯ ಕುಲಸಚಿವೆ ಸಹಿದಾ ಜಂ ಜಂ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಸು ಹಾನಗಲ್ಲ,ಆಯುರ್ವೇದ ತಜ್ಞೆ ಡಾ. ಕೆ. ಸ್ನೇಹ, ವಿಶ್ರಾಂತ ಸಂಸ್ಕೃತ ಪ್ರಾಂಶುಪಾಲ ಡಾ. ವೆಂಕಟೇಶಪ್ಪ, ಮಕ್ಕಳ ತಜ್ಞ ಡಾ. ನವೀನ್ ದೇವರಾಜಯ್ಯ, ನಿವೃತ್ತ ಪ್ರಾಚಾರ್ಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಸಿಂಡಿಕೇಟ್ ಸದಸ್ಯ ಡಾ. ಸಿ ನಂಜುಂಡಯ್ಯ, ಸರ್ಕಲ್ ಇನ್ಸ್ ಪೆಕ್ಟರ್ ಮುತ್ತುರಾಜ್, ಡಿ.ಸಿ ಶ್ರೀನಿವಾಸ್ ಮಾತನಾಡಿದರು.

ವೇದಿಕೆಯಲ್ಲಿ ಸಂಸ್ಕಾರ ಶಿಭಿರದ ಸಂಚಾಲಕ ಡಾ. ಟಿ.ಎಸ್ ಕುಮಾರಸ್ವಾಮಿ, ಶಿಭಿರದ ನೇತೃತ್ವ ವಹಿಸಿದ್ದ ಡಾ. ರವೀಂದ್ರ, ಪ್ರೊ. ಬೋರಣ್ಣ, ಶಿಕ್ಷಕರಾದ ಗಿರೀಶ್, ರಘು ಲಿಂಗರಾಜು ಸೇರಿದಂತೆ ಇತರರು ಇದ್ದರು.

ಕನ್ನಡಪ್ರಭ ಬುಧವಾರ 3.5.2023



ಎಲೆರಾಂಪುರ ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ನಾಡೋಜ ಡಾ.ವೂಡೆ ಪಿ. ಕೃಷ್ಣ ಅವರಿಗೆ ಪೀಠಾಧ್ಯಕ್ಷ ಡಾ.ಹನುಮಂತನಾಥ ಸ್ವಾಮೀಜಿ ನೇತೃತ್ವದಲ್ಲಿ ಅಭಿನಂಧಿಸಲಾಯಿತು.

ಪ್ರಜಾವಾಣಿ
ಗುರುವಾರ • ಏಪ್ರಿಲ್ 27, 2023

ಸಾಹಿತಿ ಹಂ.ಪ. ನಾಗರಾಜಯ್ಯ ಅಭಿಪ್ರಾಯ

'ಹಣವಲ್ಲ, ವಿದ್ವತ್ ನಂಬಿ ಜೀವಿಸಿದೆವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಹಣ ನಂಬಿ ಬದುಕಿದವರಲ್ಲ. ಬದಲಾಗಿ, ವಿದ್ವತ್ ನಂಬಿ ಜೀವಿಸಿದೆವು' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನ ಕನ್ನಡ ಸಂಘ ಮತ್ತು ಕನ್ನಡ ವಿಭಾಗ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಗೌರವಾಭಿನಂದನೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ, ಮಾತನಾಡಿದರು.

'ನಾವು ನೀರಿಗಿಂತಲೂ ವಿದ್ವತ್‌ಗೆ ಪ್ರಾಮುಖ್ಯತೆ ನೀಡುತ್ತೇವೆ. ಮಳೆ ಬಂದರೆ ನೀರು ಮತ್ತೆ ಬರುತ್ತದೆ. ಆದರೆ, ಒಮ್ಮೆ ನಮ್ಮ ಜನಮಾನಸದಿಂದ ವಿದ್ವತ್ ಮರೆಯಾದರೆ ಮತ್ತೆ ಸೃಷ್ಟಿಸಿಕೊಳ್ಳಲು ನೂರಾರು ವರ್ಷಗಳು ಬೇಕಾಗುತ್ತವೆ' ಎಂದು ಹೇಳಿದರು.

ಗೌರವಾಭಿನಂದನೆ ಸ್ವೀಕರಿಸಿದ ಸಾಹಿತಿ ಅ.ರಾ.ಮಿತ್ರ, 'ವ್ಯಕ್ತಿಯ ಹಿರಿತನ ವಯಸ್ಸಿನಿಂದ ನಿರ್ಧಾರವಾಗಬಾರದು. ಬದಲಾಗಿ, ಆತನ ಮನಸ್ಸಿನಿಂದ ತೀರ್ಮಾನವಾಗಬೇಕು. ಹೃದಯದಿಂದ ಹೃದಯಕ್ಕೆ ನಡೆಸುವ ಸಂವಾದ ಸಾಮರ್ಥ್ಯ ಆತನ ಹಿರಿತನದ ಅಳತೆಗೋಲಾಗಿರುತ್ತದೆ. ಉತ್ತಮ ರೀತಿಯಲ್ಲಿ ಸಂವಹನ ನಡೆಸುತ್ತ ನಮ್ಮ ಸುತ್ತಲಿನ ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು' ಎಂದು ತಿಳಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಇದ್ದರು.




ಕಾರ್ಯಕ್ರಮದಲ್ಲಿ ಹಂ.ಪ.ನಾಗರಾಜಯ್ಯ ಹಾಗೂ ಅ.ರಾ. ಮಿತ್ರ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಸನ್ಮಾನಿಸಿದರು. ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ, ವೂಡೇ ಪಿ.ಕೃಷ್ಣ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಇದ್ದಾರೆ

ವಿಜಯವಾಣಿ

Apr 26, 2023

ಶೇಷಾದ್ರಿಪುರಂ ಕಾಲೇಜಿಗೆ ಉತ್ತಮ ಫಲಿತಾಂಶ

ತುಮಕೂರು: ಶೇಷಾದ್ರಿಪುರಂ ಪಿಯು ಕಾಲೇಜು, ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿದ್ದು, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.



ಪಂಡಿತಾರಾಧ್ಯ



ವೂಡೇ ಪಿ.ಕೃಷ್ಣ

ಶಿಕ್ಷಣ ದತ್ತಿಯ 36 ಸಮೂಹ ಸಂಸ್ಥೆಗಳಾದ ತುಮಕೂರು, ಬೆಂಗಳೂರು, ಮೈಸೂರು, ಮಂಡ್ಯ ಸೇರಿ 8 ಪಿಯು ಕಾಲೇಜುಗಳಲ್ಲಿ ಒಟ್ಟು ವಿಜ್ಞಾನ ವಿಭಾಗದಿಂದ 13 ರ್‍ಯಾಂಕ್ ಹಾಗೂ ವಾಣಿಜ್ಯ ವಿಭಾಗದಿಂದ 45 ರ್‍ಯಾಂಕ್‌ಗಳು ಬಂದಿದೆ.

ಅತ್ಯುತ್ತಮ ಶ್ರೇಣಿಯಲ್ಲಿ 769 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 1581 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಂದ ಒಟ್ಟಾರೆ 3431 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, 3033 ವಿದ್ಯಾರ್ಥಿಗಳು ಉತ್ತೀರ್ಣರಾಗಿ, ಶೇ. 88.40 ಉತ್ತಮ ಫಲಿತಾಂಶ ಬಂದಿದೆ.

ವಾಣಿಜ್ಯ ವಿಭಾಗದ ಎಂ.ಜಾಹ್ನವಿ ಹಾಗೂ ಪಿ.ಸೌಮ್ಯಶ್ರೀ ಇಬ್ಬರೂ ತಲಾ 584 ಅಂಕಗಳಿಸುವ ಮೂಲಕ ರಾಜ್ಯಕ್ಕೆ 14ನೇ ರ್‍ಯಾಂಕ್ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಒಟ್ಟು 464 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 85 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 232 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಒಟ್ಟಾರೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ. 89.33, ವಾಣಿಜ್ಯ ವಿಭಾಗದಲ್ಲಿ ಶೇ.85.29 ಫಲಿತಾಂಶ ಬಂದಿದೆ. ಒಟ್ಟಾರೆ ಶೇಕಡವಾರು ಶೇ.88.15 ಉತ್ತಮ ಫಲಿತಾಂಶ ಬಂದಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

Apr 26, 2023

ಬಸವಣ್ಣನ ಕಾಯಕ ತತ್ವಕ್ಕೆ ಅಪಚಾರ: ಬಿ.ಎಸ್.ಪಾಟೀಲ್

ಬೆಂಗಳೂರು, ಎ.25: ಬಸವಣ್ಣನವರ ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನೆಮ್ಮದಿಯ ಬದುಕು ಸಾಗಿಸಬಹುದು. ಆದರೆ ಕೆಲವರು ದುರಾಸೆಗೆ ಬಿದ್ದು ಕಾಯಕ ತತ್ವದ ಕಲ್ಪನೆಗೆ ಅಪಚಾರ ಎಸಗುತ್ತಿದ್ದಾರೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಬೇಸರ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಬಸವ ವೇದಿಕೆಯಿಂದ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಬಸವ ಜಯಂತಿ' ಹಾಗೂ 'ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ಮಾತನಾಡಿದ ಅವರು, ಯಾವುದೇ ಕೆಲಸವನ್ನಾದರೂ ಪ್ರೀತಿಯಿಂದ ಪ್ರಾಮಾಣಿಕವಾಗಿ ಮಾಡಬೇಕು ಎಂದು ಬಸವಣ್ಣನವರು ಹೇಳಿದ್ದಾರೆ. ಆದರೆ ಕೆಲವರು ಸಾರ್ವಜನಿಕರ ಹಣವನ್ನು ತಿಂದು ತೇಗುತ್ತಿದ್ದು, ಕಾಯಕದ ಕಲ್ಪನೆಗೆ ಅಪಚಾರ ಮಾಡುತ್ತಿದ್ದಾರೆ. ಇಂತಹವರ ಮೇಲೆ ದಾಳಿ ನಡೆಸಿದರೆ ಭ್ರಷ್ಟಾಚಾರ ಹೊರಬರುತ್ತಲೇ ಇರುತ್ತದೆ. ಪರಿಸ್ಥಿತಿ ಹೀಗಿರುವುದರಿಂದ ಬಸವಣ್ಣನವರ ಕಾಯಕ ತತ್ವದ ಬಗ್ಗೆ ಪ್ರತಿನಿತ್ಯವೂ ಅರಿವು ಮೂಡಿಸಬೇಕಾದ ಸನ್ನಿವೇಶ ನಿರ್ಮಾಣವಾಗಿದೆ ಎಂದರು.

ಯಾವುದೇ ಕೆಲಸವಾಗಲಿ ಎಲ್ಲರೂ ಇಷ್ಟಪಟ್ಟು ಸಂತೋಷದಿಂದ ಮಾಡಬೇಕು. ಇದರಿಂದ ವೈಯಕ್ತಿಕ

'ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ'



ಅಭಿವೃದ್ಧಿಯಾಗುವುದರ ಜೊತೆಗೆ ದೇಶದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಕಾಯಕ ತತ್ವದ ಬಗ್ಗೆ ಹೇಳಿ 12 ನೇ ಶತಮಾನದಲ್ಲೇ ಬಸವಣ್ಣನವರು ಕಾಲವಾಗಿದ್ದರೂ ನಮಗೆಲ್ಲಾ ಮಾರ್ಗದರ್ಶನ ನೀಡಿದ್ದಾರೆ. ನಮ್ಮ ಕಾರ್ಯಗಳ ವ್ಯಾಪ್ತಿಯಲ್ಲಿ ಶ್ರೇಷ್ಠತೆ ಗಳಿಸುವುದು ನಮ್ಮ ಮೂಲಭೂತ ಕರ್ತವ್ಯ ಆಗಬೇಕು ಎಂದು ಬಿ.ಎಸ್. ಪಾಟೀಲ್ ತಿಳಿಸಿದರು.

ಬಸವಣ್ಣನವರು ಹೇಳಿದ ಸಮಾನತೆ ಭಾರತೀಯ ಸಂವಿಧಾನದ ತಿರುಳಾಗಿದೆ. ಉಳ್ಳವರು-ಇಲ್ಲದವರ ನಡುವೆ ಸಮಾನತೆ ನಿರ್ಮಾಣವಾಗಬೇಕು. ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು. ಮೂಢನಂಬಿಕೆಗಳಿಂದ ಹೊರಬಂದು

> ಬಸವ ತತ್ವ ಕಾಯಕವನ್ನು ಗುರುತಿಸುತ್ತದೆಯೇ ಹೊರತು ಜಾತಿಯನ್ನಲ್ಲ. 12ನೇ ಶತಮಾನದಲ್ಲೇ ಜಾತ್ಯತೀತ ತತ್ವವನ್ನು ಬಸವಣ್ಣ ಆಚರಿಸಿದ್ದರು. ಆದರೆ ಬಸವಣ್ಣನವರ ವಚನಗಳನ್ನು ವಿದೇಶಗಳಿಗಿರಲಿ, ರಾಷ್ಟ್ರಮಟ್ಟಕ್ಕೇ ಪರಿಪೂರ್ಣವಾಗಿ ತೆಗೆದುಕೊಂಡು ಹೋಗಲು ಸಾಧ್ಯವಾಗಿಲ್ಲ.
>
> ■ ನ್ಯಾ.ಸುಭಾಷ್ ಬಿ.ಅಡಿ,
> ರಾಜ್ಯ ಹಸಿರು ನ್ಯಾಯಾಧಿಕರಣ ಸಮಿತಿ ಅಧ್ಯಕ್ಷ

ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಚನಗಳ ಮೂಲಕ ನಮಗೆ ಬಸವಣ್ಣನವರು ಮಾರ್ಗದರ್ಶನ ನೀಡಿದ್ದಾರೆ. ಇದನ್ನು ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ. ವೇದಿಕೆಯಿಂದ ಉತ್ತಮ ವ್ಯಕ್ತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಬಿ.ಎಸ್.ಪಾಟೀಲ್ ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವ ಸಮಿತಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮಾತನಾಡಿ, ಸಮಿತಿಯು 1996ರಿಂದ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಅರ್ಹರನ್ನು ಆಯ್ಕೆ ಮಾಡಲಾಗುತ್ತಿದೆ. ಕಾಯಕ ತತ್ವ ಪರಿಪಾಲನೆ ಮಾಡುತ್ತಿರುವವರು ಹಾಗೂ ವಚನಗಳ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಾಧಕರನ್ನು ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ಚಾಮರಾಜನಗರದ ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್.ಜಯದೇವ ಅವರಿಗೆ 'ಬಸವಶ್ರೀ ಪ್ರಶಸ್ತಿ' ಹಾಗೂ ಸಾಹಿತಿಗಳಾದ ಡಾ.ಪ್ರದೀಪಕುಮಾರ ಹೆಬ್ರಿ, ಜಿ.ವಿ.ರೇಣುಕಾ ರಾಜಶೇಖರ್ ಅವರಿಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ವೇದಿಕೆ ಉಪಾಧ್ಯಕ್ಷ ಎಸ್. ಷಡಕ್ಷರಿ ಉಪಸ್ಥಿತರಿದ್ದರು.

'ಭ್ರಷ್ಟರಿಗೆ ಕಾಯಕ ತತ್ವದ ಅರಿವು ಮೂಡಿಸಬೇಕು'


▪ **ವಿಕ ಸುದ್ದಿಲೋಕ** ಬೆಂಗಳೂರು

ಭ್ರಷ್ಟರಿಗೆ ಬಸವಣ್ಣನವರ ಕಾಯಕ ತತ್ವದ ಬಗ್ಗೆ ಪ್ರತಿನಿತ್ಯವೂ ಅರಿವು ಮೂಡಿಸಬೇಕಾದ ಅಗತ್ಯ ವಿದೆ ಎಂದು ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬಸವ ವೇದಿಕೆಯಿಂದ ಕುಮಾರಕೃಪಾ ರಸ್ತೆಯ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಜಗಜ್ಯೋತಿ ಬಸವಣ್ಣನವರ ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಕೊಂಡರೆ ನೆಮ್ಮದಿಯ ಬದುಕು ಸಾಗಿಸಬಹುದು. ಆದರೆ, ಕೆಲವರು ದುರಾಸೆಗೆ ಬಿದ್ದು ಕಾಯಕ ತತ್ವದ ಕಲ್ಪನೆಗೆ ಅಪಚಾರ ಎಸಗುತ್ತಿದ್ದಾರೆ,'' ಎಂದು ಬೇಸರ ವ್ಯಕ್ತಪಡಿಸಿದರು.

''ಯಾವುದೇ ಕೆಲಸವಾಗಲಿ ಇಷ್ಟಪಟ್ಟು ಪ್ರಾಮಾಣಿಕವಾಗಿ ಮಾಡಬೇಕು. ಇದರಿಂದ ವೈಯಕ್ತಿಕ ಅಭಿವೃದ್ಧಿಯ ಜತೆಗೆ ದೇಶದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಬಸವಣ್ಣಹೇಳಿದ ಸಮಾನತೆ ನಮ್ಮ ಸಂವಿಧಾನದ ತಿರುಳಾಗಿದೆ. ಉಳ್ಳವರು-ಇಲ್ಲದವರ ನಡುವೆ ಸಮಾನತೆ ನಿರ್ಮಾಣವಾಗಬೇಕು. ಮಹಿಳೆ ಯರಿಗೆ ಸಮಾನ ಅವಕಾಶ ಸಿಗಬೇಕು. ಮೂಢ ನಂಬಿಕೆಗಳಿಂದ ಹೊರಬಂದು ವೈಜ್ಞಾನಿಕ ಮನೋ ಭಾವ ಬೆಳೆಸಿಕೊಳ್ಳಬೇಕೆಂದು ವಚನಗಳ ಮೂಲಕ ನಮಗೆ ಬಸವಣ್ಣನವರು ಮಾರ್ಗದರ್ಶನ ನೀಡಿದ್ದಾರೆ. ಇದನ್ನು ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ,'' ಎಂದು ಪ್ರತಿಪಾದಿಸಿದರು.



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಬಸವಶ್ರೀ, ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ವೇದಿಕೆ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಮಾತನಾಡಿ, ''1996 ರಿಂದ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು ಅರ್ಹರನ್ನು ಆಯ್ಕೆ ಮಾಡಲಾಗುತ್ತಿದೆ,'' ಎಂದರು.

ರಾಜ್ಯ ಹಸಿರು ನ್ಯಾಯಾಧೀಕರಣ ಸಮಿತಿ ಅಧ್ಯಕ್ಷ ನ್ಯಾ. ಸುಭಾಷ್ ಬಿ.ಆಡಿ ಮಾತನಾಡಿ, ''ಬಸವ ತತ್ವವು ಕಾಯಕವನ್ನು ಗುರುತಿಸುತ್ತದೆಯೇ ಹೊರತು ಜಾತಿಯನ್ನಲ್ಲ. 12ನೇ ಶತಮಾನದಲ್ಲೇ ಜಾತ್ಯತೀತ ತತ್ವವನ್ನು ಬಸವಣ್ಣ ಅನುಸರಿಸಿದ್ದರು. ಆದರೆ, ಅವರ ವಚನಗಳನ್ನು ವಿದೇಶಗಳಿಗಿರಲಿ, ರಾಷ್ಟ್ರಮಟ್ಟಕ್ಕೇ ಪರಿಪೂರ್ಣವಾಗಿ ತೆಗೆದುಕೊಂಡು ಹೋಗಲು ಸಾಧ್ಯವಾಗಿಲ್ಲ,'' ಎಂದರು.

ಸಮಾರಂಭದಲ್ಲಿ ಚಾಮರಾಜನಗರದ ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್. ಜಯದೇವ ಅವರಿಗೆ 'ಬಸವಶ್ರೀ' ಪ್ರಶಸ್ತಿ ಹಾಗೂ ಸಾಹಿತಿಗಳಾದ ಡಾ. ಪ್ರದೀಪಕುಮಾರ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ವೇದಿಕೆ ಉಪಾಧ್ಯಕ್ಷ ಎಸ್. ಷಡಕ್ಷರಿ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ಬುಧವಾರ, 26 ಏಪ್ರಿಲ್ 2023, ಬೆಂಗಳೂರು



ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅ.ರಾ. ಮಿತ್ರ ಹಾಗೂ ಹಂಪ ನಾಗರಾಜಯ್ಯ ಅವರನ್ನು ಸನ್ಮಾನಿಸಲಾಯಿತು. ಬಿಎಂಶ್ರೀ ಪ್ರತಿಷ್ಠಾನ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಡಾ. ವೂಡೆ ಪಿ. ಕೃಷ್ಣ, ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಷಿ ಇದ್ದರು.

ಸಂಯುಕ್ತ ಕರ್ನಾಟಕ

ಬುಧವಾರ, 26, ಏಪ್ರಿಲ್, 2023

ಬೆಂಗಳೂರು | BANGALURU



ಶೇಷಾದ್ರಿಪುರ ಕಾಲೇಜಿನ ಕನ್ನಡ ಸಂಘ ಆಯೋಜಿಸಲಾಗಿದ್ದ ಗೌರವಾಭಿನಂದನಾ ಕಾರ್ಯಕ್ರಮದಲ್ಲಿ ವಿಮರ್ಶಕ ಅ.ರಾ.ಮಿತ್ರ ಹಾಗೂ ಸಂಶೋಧಕ ಡಾ. ಹಂಪ ನಾಗರಾಜಯ್ಯ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ಡಾ ಮಹೇಶ್ ಜೋಶಿ, ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಬೆಂಗಳೂರು

ಸಂಯುಕ್ತ ಕರ್ನಾಟಕ

ಬುಧವಾರ 26 ಏಪ್ರಿಲ್ 2023
ಬೆಂಗಳೂರು | BENGALURU

ಮಹಿಳೆಯರ ಸಮಾನತೆಗಾಗಿ ಹೋರಾಟ | ಅನುಭವ ಮಂಟಪ ರಚನೆ | ವಿದೇಶಿಯರಿಂದ ವಚನಾ ಸಾಹಿತ್ಯ ಅಧ್ಯಯನ

ಬಸವಣ್ಣ ತತ್ವಗಳ ಮೇಲೆ ಸಂವಿಧಾನ ರಚನೆ

ಸಂ.ಕ.ಸಮಾಚಾರ, ಬೆಂಗಳೂರು

12ನೇ ಶತಮಾನದಲ್ಲಿ ವಚನಾ ಕ್ರಾಂತಿ ಮಾಡಿದ ಬಸವಣ್ಣನವರ ತತ್ವಗಳ ಆಧಾರದ ಮೇಲೆ ಭಾರತೀಯ ಸಂವಿಧಾನ ರಚನೆಯಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ತಿಳಿಸಿದರು. ಗಾಂಧಿಭವನದಲ್ಲಿ ಬಸವ ಸಮಿತಿ ಏರ್ಪಡಿಸಿದ್ದ ಬಸವ ಜಯಂತಿ ಹಾಗೂ 'ಬಸವಶ್ರೀ' ಮತ್ತು 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನದಲ್ಲಿರುವ ಸಮಾನತೆ, ಭ್ರಾತೃತ್ವ, ಮಾನವನಿಗೆ ಗೌರವ ಸೇರಿದಂತೆ ಇನ್ನಿತರ ವಿಷಯಗಳನ್ನು ಬಸವಣ್ಣನವರು ತಮ್ಮ ಕಾಲದಲ್ಲಿಯೇ ಅನುಭವ ಮಂಟಪ ರಚಿಸಿ ಎಲ್ಲ ಜಾತಿಗಳು ಒಂದಾಗುವಂತೆ ಮಾಡಿದರು ಎಂದರು.

ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಬಸವಣ್ಣನವರು ಚಿಂತನೆ ವ್ಯಕ್ತಪಡಿಸಿದ್ದಲ್ಲದೆ, ಮಹಿಳೆಯರಿಗೆ ಸಮಾನತೆ ನೀಡುವಂತೆ ಹೋರಾಟ ನಡೆಸಿದ್ದರು. ಮೌಢ್ಯವನ್ನು ಹೋಗಲಾಡಿಸಬೇಕು ಮತ್ತು ಇರುವ ಕೆಲಸವನ್ನು ಯಶಸ್ವಿಯಾಗಿ ಮಾಡಬೇಕು ಎಂಬಂತಹ ಮೂಲ ಕರ್ತವ್ಯಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣಬಹುದು. ಪ್ರತಿಯೊಬ್ಬರು ತಮ್ಮ ರಂಗದಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಅದು ಸಾಮೂಹಿಕ ಅಭಿವೃದ್ಧಿಗೆ ನಂತರ ರಾಷ್ಟ್ರೀಯ ಅಭಿವೃದ್ಧಿಗೆ ನೆರವಾಗುತ್ತದೆ ಎಂದು ತಿಳಿಸಿದರು.

> ಭಾಷಣಕ್ಕಾಗಿ ಬಸವಣ್ಣನವರ ವಚನ ಓದಿದವನಲ್ಲ. ಅವರ ತತ್ವಗಳನ್ನು ಜೀವಂತವಾಗಿ ತನ್ನ ಜೀವನದಲ್ಲಿ ಅನುಸರಿಸುತ್ತಿದ್ದೇನೆ. ಕಾಯಕ ಮತ್ತು ದಾಸೋಹವನ್ನು ಪಾಲಿಸಿಕೊಂಡು ಹೋಗುತ್ತಿದ್ದೇನೆ. ಜಾತಿ ಯಾವುದೇ ಇರಲಿ ಪ್ರತಿಯೊಬ್ಬರಿಗೂ ದುಡಿಯುವ ಹಕ್ಕಿದೆ.
>
> • ಜಿ.ಎಸ್.ಜಯದೇವ,
> ದೀನಬಂಧು ಸಂಸ್ಥೆ ಸಂಸ್ಥಾಪಕ

ಬಸವ ವೇದಿಕೆ ಅಧ್ಯಕ್ಷ ಡಾ.ಸಿ.ಸೋಮಶೇಖರ ಮಾತನಾಡಿ, ಶರಣರು ಪ್ರತಿಪಾದಿಸುವುದು ಶ್ರಮ ಸಂಸ್ಕೃತಿ, ಸೋಮಾರಿಗಳಿಗೆ ಇಲ್ಲಿ ಸ್ಥಳವಿಲ್ಲ. ಬಸವಣ್ಣನವರನ್ನು ವಿಸ್ತಾರವಾಗಿ ತಿಳುಪಿಸುವಲ್ಲಿ ಸೋತಿದ್ದೇವೆ ಎಂದು ಹೇಳಿದರು.



ಗಾಂಧಿ ಭವನದಲ್ಲಿ ಬಸವ ಸಮಿತಿ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಶ್ರೀ ಪ್ರಶಸ್ತಿಯನ್ನು ಜಿ.ಎಸ್. ಜಯದೇವ ಅವರಿಗೆ ಹಾಗೂ ವಚನ ಸಾಹಿತ್ಯಶ್ರೀ ಪ್ರಶಸ್ತಿಯನ್ನು ಡಾ. ಪ್ರದೀಪ್‌ಕುಮಾರ್ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ ಪ್ರದಾನ ಮಾಡಲಾಯಿತು.

ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್. ಜಯದೇವ ಅವರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಚನ ಸಾಹಿತ್ಯಶ್ರೀ ಪ್ರಶಸ್ತಿಯನ್ನು ಹಿರಿಯ ಸಾಹಿತಿಗಳಾದ ಡಾ. ಪ್ರದೀಪ್ ಕುಮಾರ್ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ ನೀಡಿ ಗೌರವಿಸಲಾಯಿತು. ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಸಮಿತಿಯ ಉಪಾಧ್ಯಕ್ಷ ಷಡಕ್ಷರಿ ಉಪಸ್ಥಿತರಿದ್ದರು.

> ವಿದೇಶಿಗರಲ್ಲಿ ನಮ್ಮ ವಚನಾ ಸಾಹಿತ್ಯವನ್ನು ಓದುವುದು ಹೆಚ್ಚಾಗಿದ್ದು ನಮ್ಮ ಜನರು ಇನ್ನೂ ರೂಢಿಸಿಕೊಳ್ಳಬೇಕಿದೆ. ಬಸವಣ್ಣನವರು ಕಾಯಕ ಗುರುತಿಸಿದರೂ ಹೊರತು ಜಾತಿಯನ್ನು ಗುರುತಿಸಲಿಲ್ಲ. ವಚನಾ ಸಾಹಿತ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಭಾವನೆಗಳಲ್ಲಿ ಬದಲಾವಣೆ ಸಾಧ್ಯ!
>
> • ಸುಭಾಷ್.ಜಿ.ಆದಿ,
> ನಿವೃತ್ತ ಉಪ ಲೋಕಾಯುಕ್ತ

ನಂ. 1 ಕನ್ನಡ ದಿನಪತ್ರಿಕೆ

VIJAYAVANI _ BENGALURU
ಬುಧವಾರ 26 ಏಪ್ರಿಲ್ 2023
26 APRIL 2023

ಲೋಕಾ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅಭಿಮತ | ಬಸವ ಜಯಂತಿ ಆಚರಣೆ, ಮತ್ತು ಪ್ರಶಸ್ತಿ ಪ್ರದಾನ

ಉನ್ನತ ಹುದ್ದೆಯಲ್ಲಿರುವವರ ದುರಾಸೆಯಿಂದ ಸಮಾಜ ಹಾಳು

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸರ್ಕಾರದ ಉನ್ನತ ಹುದ್ದೆಯಲ್ಲಿರುವವರು ತಮ್ಮ ದುರಾಸೆಯಿಂದ ಸಮಾಜವನ್ನು ಹಾಳು ಮಾಡುತ್ತಿದ್ದಾರೆ. ಅಧಿಕಾರ ಬಳಸಿ ತಿಂದು-ತೇಗುತ್ತಿದ್ದು, ಲೋಕಾಯುಕ್ತ ದಾಳಿಯಲ್ಲಿ ಬಗೆದಷ್ಟೂ ಹಣ ಸಿಗುತ್ತಿದೆ. ಇಂತಹವರಿಗೆ ಬಸವ ಕಾಯಕ ತತ್ವದ ಅರಿವಾಗಬೇಕಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಹೇಳಿದ್ದಾರೆ.

ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಮಂಗಳವಾರ ಬಸವ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಬಸವಶ್ರೀ ಮತ್ತು ವಚನಶ್ರೀ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಪ್ರತಿ ರಂಗದಲ್ಲಿಯೂ ಸಮರ್ಪಣಾ ಭಾವ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸಿದಾಗ ತಲಾದಾಯದ ಜತೆಗೆ ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗಲಿದೆ. ನಮ್ಮ ಕಾರ್ಯವ್ಯಾಪ್ತಿಯಲ್ಲಿ ಶ್ರೇಷ್ಠತೆಯನ್ನು ಗಳಿಸುವುದು ಮೂಲಭೂತ ಕರ್ತವ್ಯವಾಗಿದೆ ಎಂದು ಹೇಳಿದರು.

ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಮತ್ತು ಸಾಮಾಜಿಕ ನ್ಯಾಯವನ್ನು 12ನೇ ಶತಮಾನದ ಅನುಭವ ಮಂಟಪದಲ್ಲಿಯೇ ಹೇಳಿದ್ದರು. ಸಮಾನತೆ, ವಾಕ್ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಘನತೆ ಆಧಾರದಲ್ಲಿಯೇ ಬೇರೆ ಬೇರೆ ದೇಶಗಳು ಕೂಡ ಸಂವಿಧಾನ ರಚಿಸಿಕೊಂಡಿವೆ ಎಂದರು.



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ಎಸ್.ಜಯದೇವ ಅವರಿಗೆ 'ಬಸವಶ್ರೀ', ಡಾ. ಪ್ರದೀಪ್‌ಕುಮಾರ್ ಹೆಬ್ರಿ ಮತ್ತು ಜಿ.ವಿ.ರೇಣುಕಾಗೆ 'ವಚನಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ನ್ಯಾ. ಬಿ.ಎಸ್. ಪಾಟೀಲ್, ನ್ಯಾ.ಸುಭಾಷ್ ಬಿ. ಅಡಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಡಾ. ವೂಡೇ ಪಿ. ಕೃಷ್ಣ, ಡಾ.ಸಿ.ಸೋಮಶೇಖರ್, ಷಡಕ್ಷರಿ ಮತ್ತಿತರರಿದ್ದರು.

ರಾಜ್ಯ ಹಸಿರು ನ್ಯಾಯಾಧಿಕರಣ ಸಮಿತಿ ಅಧ್ಯಕ್ಷ ನ್ಯಾ. ಸುಭಾಷ್ ಬಿ. ಅಡಿ ಮಾತನಾಡಿ, ಬಸವ ತತ್ವದ ಬಗ್ಗೆ ನಮಗಿಂತ ವಿದೇಶದಲ್ಲಿರುವವರೇ ಹೆಚ್ಚು ಪಾಲನೆ ಮಾಡುತ್ತಿದ್ದಾರೆ. ಎಲ್ಲರೂ ಬಸವಣ್ಣನ ತತ್ವಗಳ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು ಎಷ್ಟರ ಮಟ್ಟಿಗೆ ಪಾಲನೆ ಮಾಡುತ್ತಿದ್ದಾರೆ ಎಂಬುದು ಬಹಳ ಮುಖ್ಯ ಎಂದು ಮಾರ್ಮಿಕವಾಗಿ ನುಡಿದರು.

ಚಾಮರಾಜನಗರದ ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್. ಜಯದೇವ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ, ಅವನ ಬದುಕಿಗೆ ಮತ್ತು ಉದಾತ್ತ ಚಿಂತನೆಗೆ ಹಕ್ಕಿದೆ ಎಂದು ತೋರಿಸಿಕೊಟ್ಟವರು ಬಸವಣ್ಣ. ಅಂತಹ ಬಸವ ತತ್ವಗಳನ್ನು ಅನುಷ್ಠಾನ ಮಾಡದಿದ್ದರೆ, ಕೇವಲ ವಿವಿಗಳಲ್ಲಿ ಪಿಎಚ್.ಡಿ ಮತ್ತು ಬೌದ್ಧಿಕ ಚರ್ಚೆಗೆ ಸೀಮಿತವಾಗಲಿದೆಂದರು.

> ‘ಮೌಢ್ಯ, ಅಸ್ಪೃಶ್ಯತೆ ವಿರುದ್ಧ ಹೋರಾಟ ಮಾಡಿ ಅನುಭವ ಮಂಟಪ ಕಟ್ಟಿದ ಬಸವಣ್ಣನನ್ನು ಒಳ ಪಂಗಡ, ಸಂಕುಚಿತ ಮನೋಭಾವದಿಂದ ವಿಶ್ವಮಾನವರಾಗಲು ಬಿಟ್ಟಿಲ್ಲ.
>
> ಬಸವ ವೇದಿಕೆ ಅಧ್ಯಕ್ಷ

ಪ್ರಶಸ್ತಿ ಪ್ರದಾನ: ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್. ಜಯದೇವ ಅವರಿಗೆ 'ಬಸವಶ್ರೀ' ಹಾಗೂ ಸಾಹಿತಿಗಳಾದ ಡಾ. ಪ್ರದೀಪ್‌ಕುಮಾರ್ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ 'ವಚನಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಬಸವ ವೇದಿಕೆ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಮತ್ತು ಉಪಾಧ್ಯಕ್ಷ ಷಡಕ್ಷರಿ ಉಪಸ್ಥಿತರಿದ್ದರು.

ಬಸವಶ್ರೀ, ವಚನಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್

ಬಸವ ತತ್ವಗಳ ಆಧಾರದಲ್ಲಿ ಸಂವಿಧಾನ

ಬೆಂಗಳೂರು: ಬಸವ ತತ್ವಗಳ ಆಧಾರದಲ್ಲಿ ಭಾರತದ ಸಂವಿಧಾನ ರಚನೆ ಮಾಡಲಾಗಿದೆ. ಸಂವಿಧಾನದ ಪೀಠಿಕೆಯಲ್ಲಿರುವಂತೆ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯವನ್ನು 12ನೇ ಶತಮಾನದ ಅನುಭವ ಮಂಟಪದಲ್ಲಿಯೇ ಹೇಳಿದ್ದರು ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಹೇಳಿದ್ದಾರೆ.

ಗಾಂಧಿ ಭವನದಲ್ಲಿ ಬಸವ ವೇದಿಕೆ ಆಯೋಜಿಸಿದ್ದ ಬಸವ ಜಯಂತಿ, 'ಬಸವಶ್ರೀ ಮತ್ತು ವಚನಶ್ರೀ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಪ್ರತಿ ರಂಗದಲ್ಲಿಯೂ ಸಮರ್ಪಣಾ ಭಾವ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸಿದಾಗ ತಲಾದಾಯದ ಜತೆಗೆ ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗಲಿದೆ. ನಮ್ಮ ಕಾರ್ಯವ್ಯಾಪ್ತಿಯಲ್ಲಿ ಶ್ರೇಷ್ಠತೆಯನ್ನು ಗಳಿಸುವುದು ಮೂಲಭೂತ ಕರ್ತವ್ಯವಾಗಿದೆ. ನಮಗೆ ಸಂವಿಧಾನದ ಹಕ್ಕುಗಳ ಜತೆಗೆ ಕರ್ತವ್ಯಗಳೂ ಮುಖ್ಯ. ಅದರಲ್ಲಿನ ವೈಜ್ಞಾನಿಕ ಮನೋಭಾವ ಮತ್ತು ಮಾನವೀಯತೆಯನ್ನು ಕೂಡ ಬಸವಣ್ಣ ಹೇಳಿದ್ದರು. ಮೌಢ್ಯವನ್ನು ಒಡದೋಡಿಸಿ ಎಲ್ಲರೂ ಒಂದೇ ಎಂಬುದನ್ನು ಸಾರಿದ್ದರು ಎಂದರು.

ಚಾಮರಾಜನಗರದ ಧೀನಬಂಧು ಸಂಸ್ಥೆ ಸಂಸ್ಥಾಪಕ ಜೆ.ಎಸ್.ಜಯದೇವ ಅವರಿಗೆ ಬಸವಶ್ರೀ ಹಾಗೂ ಸಾಹಿತಿಗಳಾದ ಡಾ.ಪ್ರದೀಪ್ ಕುಮಾರ್ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ ವಚನಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬಸವ ವೇದಿಕೆ ಅಧ್ಯಕ್ಷರೂ ಆಗಿರುವ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಬಸವ ವೇದಿಕೆ ಉಪಾಧ್ಯಕ್ಷ ಷಡಕ್ಷರಿ ಇದ್ದರು.



ಜೆ.ಎಸ್. ಜಯದೇವ ಅವರಿಗೆ ಬಸವಶ್ರೀ ಹಾಗೂ ಡಾ. ಪ್ರದೀಪ್ ಕುಮಾರ್ ಹೆಬ್ರಿ ಮತ್ತು ಜಿ.ವಿ. ರೇಣುಕಾ ರಾಜಶೇಖರ್ ಅವರಿಗೆ ವಚನಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ನ್ಯಾ. ಬಿ.ಎಸ್.ಪಾಟೀಲ್, ನ್ಯಾ.ಸುಭಾಷ್ ಬಿ. ಅಡಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಬಸವ ವೇದಿಕೆ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಮತ್ತು ಉಪಾಧ್ಯಕ್ಷ ಷಡಕ್ಷರಿ ಮತ್ತಿತರರು ಇದ್ದರು.



ಸರಕಾರದ ಉನ್ನತ ಹುದ್ದೆಯಲ್ಲಿರುವವರು ತಮ್ಮ ದುರಾಸೆಯಿಂದ ಸಮಾಜವನ್ನು ಹಾಳು ಮಾಡುತ್ತಿದ್ದಾರೆ. ಅಧಿಕಾರ ಬಳಸಿ ತಿಂದು-ತೇಗುತ್ತಿದ್ದು, ಲೋಕಾಯುಕ್ತ ದಾಳಿಯಲ್ಲಿ ಬಗೆದಷ್ಟೂ ಹಣ ಸಿಗುತ್ತಿದೆ. ಇಂತಹವರಿಗೆ ಬಸವ ಕಾಯಕ ತತ್ವದ ಅರಿವಾಗಬೇಕಿದೆ.

-ಬಿ.ಎಸ್.ಪಾಟೀಲ್
ಲೋಕಾಯುಕ್ತ ನ್ಯಾಯಮೂರ್ತಿ

ಬಸವ ತತ್ವ ಪಾಲನೆ ಮಾಡಿ

ರಾಜ್ಯ ಹಸಿರು ನ್ಯಾಯಧೀಕರಣ ಸಮಿತಿ ಅಧ್ಯಕ್ಷ ನ್ಯಾ. ಸುಭಾಷ್ ಬಿ. ಅಡಿ ಮಾತನಾಡಿ, ಬಸವ ತತ್ವದ ಬಗ್ಗೆ ನಮಗಿಂತ ವಿದೇಶದಲ್ಲಿರುವವರೇ ಹೆಚ್ಚು ಪಾಲನೆ ಮಾಡುತ್ತಿದ್ದಾರೆ. ಎಲ್ಲರೂ ಬಸವಣ್ಣನ ತತ್ವಗಳ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು ಎಷ್ಟರ ಮಟ್ಟಿಗೆ ಪಾಲನೆ ಮಾಡುತ್ತಿದ್ದಾರೆ ಎಂಬುದು ಬಹಳ ಮುಖ್ಯ ಎಂದು ನುಡಿದರು.

ಕನ್ನಡಪ್ರಭ ಬುಧವಾರ 26.4.2023

ದುರಾಸೆಯಿಂದ ಕಾಯಕ ತತ್ವಕ್ಕೆ ಅಪಚಾರ: ಪಾಟೀಲ್

ಬಸವ ಜಯಂತಿ, ಬಸವಶ್ರೀ, ವಚನ ಸಾಹಿತ್ಯ ಪ್ರಶಸ್ತಿ ಪ್ರದಾನ



'ಬಸವ ವೇದಿಕೆ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಜಿ.ಎಸ್.ಜಯದೇವ ಅವರಿಗೆ 'ಬಸವಶ್ರೀ ಪ್ರಶಸ್ತಿ' ಹಾಗೂ ಸಾಹಿತಿಗಳಾದ ಡಾ.ಪ್ರದೀಪಕುಮಾರ ಹೆಬ್ರಿ, ಜಿ.ವಿ.ರೇಣಿಕಾ ರಾಜಶೇಖರ್ ಅವರಿಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಜಗಜ್ಯೋತಿ ಬಸವಣ್ಣನವರ ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನೆಮ್ಮದಿಯ ಬದುಕು ಸಾಗಿಸಬಹುದು. ಆದರೆ ಕೆಲವರು ದುರಾಸೆಗೆ ಬಿದ್ದು ಕಾಯಕ ತತ್ವದ ಕಲ್ಪನೆಗೆ ಅಪಚಾರ ಎಸಗುತ್ತಿದ್ದಾರೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಬೇಸರ ವ್ಯಕ್ತಪಡಿಸಿದರು.

ಬಸವ ವೇದಿಕೆ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಬಸವ ಜಯಂತಿ' ಹಾಗೂ 'ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ' ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವೇದಿಕೆ ಅಧ್ಯಕ್ಷ ಡಾ.ಸಿ.ಸೋಮಶೇಖರ್, 1996 ರಿಂದ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಕಾಯಕ ತತ್ವ ಪರಿಪಾಲನೆ ಮಾಡುತ್ತಿರುವವರು ಹಾಗೂ ವಚನಗಳ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಾಧಕರನ್ನು ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ಚಾಮರಾಜನಗರದ ದೀನಬಂಧು ಸಂಸ್ಥೆ ಸಂಸ್ಥಾಪಕ ಜಿ.ಎಸ್.ಜಯದೇವ ಅವರಿಗೆ 'ಬಸವಶ್ರೀ ಪ್ರಶಸ್ತಿ' ಹಾಗೂ ಸಾಹಿತಿಗಳಾದ ಡಾ.ಪ್ರದೀಪ ಕುಮಾರ ಹೆಬ್ರಿ, ಜಿ.ವಿ.ರೇಣಿಕಾ ರಾಜಶೇಖರ್ ಅವರಿಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ವೇದಿಕೆ ಉಪಾಧ್ಯಕ್ಷ ಎಸ್.ಷಡಕ್ಷರಿ ಮತ್ತಿತರರು ಉಪಸ್ಥಿತರಿದ್ದರು.

> **ಬಸವ ತತ್ವ ಕಾಯಕವನ್ನು ಗುರುತಿಸುತ್ತದೆಯೇ ಹೊರತು ಜಾತಿಯನ್ನಲ್ಲ. 12 ನೇ ಶತಮಾನದಲ್ಲೇ ಜಾತ್ಯತೀತ ತತ್ವವನ್ನು ಬಸವಣ್ಣ ಆಚರಿಸಿದ್ದರು. ಆದರೆ ಬಸವಣ್ಣನವರ ವಚನಗಳನ್ನು ವಿದೇಶಗಳಿಗಿರಲಿ, ರಾಷ್ಟ್ರಮಟ್ಟಕ್ಕೇ ಪರಿಪೂರ್ಣವಾಗಿ ತೆಗೆದುಕೊಂಡು ಹೋಗಲು ಸಾಧ್ಯವಾಗಿಲ್ಲ.**
>
> • **ನ್ಯಾ.ಸುಭಾಷ್ ಬಿ.ಆಡಿ**
> ರಾಜ್ಯ ಹಸಿರು ನ್ಯಾಯಾಧಿಕರಣ ಸಮಿತಿ ಅಧ್ಯಕ್ಷ

ವಿಜಯ ಕರ್ನಾಟಕ
ಬುಧವಾರ, 26 ಏಪ್ರಿಲ್ 2023

ಶೇಷಾದ್ರಿಪುರಂ ವಿದ್ಯಾರ್ಥಿಗಳ ಸಾಧನೆ

■ ವಿಕ ಸುದ್ದಿಲೋಕ ತುಮಕೂರು

ಶೇಷಾದ್ರಿಪುರಂ ಶಿಕ್ಷಣ ದತ್ತಿಯ 36 ಸಮೂಹ ಸಂಸ್ಥೆಗಳಾದ ತುಮಕೂರು, ಬೆಂಗಳೂರು, ಮೈಸೂರು, ಮಂಡ್ಯ ಸೇರಿ 8 ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದಿಂದ ಒಟ್ಟು 13 ರ್‍ಯಾಂಕ್‌ಗಳು ಹಾಗೂ ವಾಣಿಜ್ಯ ವಿಭಾಗದಿಂದ 45 ರ್‍ಯಾಂಕ್‌ಗಳು ಬಂದಿವೆ.

769 ಅತ್ಯುನ್ನತ ಶ್ರೇಣಿಯಲ್ಲಿ ವಿದ್ಯಾರ್ಥಿಗಳು, ಪ್ರಥಮ ಶ್ರೇಣೀಯಲ್ಲಿ 1581 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಂದ ಒಟ್ಟಾರೆ 3431 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, 3033 ವಿದ್ಯಾರ್ಥಿಗಳು ಉತ್ತೀರ್ಣರಾಗಿ, ಶೇ.88.40 ಉತ್ತಮ ಫಲಿತಾಂಶ ಬಂದಿದೆ.

ತುಮಕೂರು ಸಾಧನೆ : ತುಮಕೂರು ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆ ಮಾಡಿದ್ದಾರೆ. ವಾಣಿಜ್ಯ ವಿಭಾಗದ ಜಾಹ್ನವಿ. ಎಂ. ಹಾಗೂ ಸೌಮ್ಯಶ್ರೀ.ಪಿ. 584 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ 14ನೇ ರ್‍ಯಾಂಕ್ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಒಟ್ಟು 464 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 85 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 232 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಒಟ್ಟಾರೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.89.33, ವಾಣಿಜ್ಯ ವಿಭಾಗದಲ್ಲಿ ಶೇ.85.29 ಫಲಿತಾಂಶ ಬಂದಿದೆ. ಕಾಲೇಜಿಗೆ ಒಟ್ಟಾರೆ ಶೇ.88.15. ಫಲಿತಾಂಶ ಬಂದಿದೆ.



ಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ ಅದ್ವಿತೀಯ. ಎಲ್ಲ ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಉಪನ್ಯಾಸಕರಿಗೆ ಅಭಿನಂದನೆಗಳು. ಉಜ್ವಲ ಭವಿಷ್ಯ ಅವರದ್ದಾಗಲಿ ಎಂದು ಶುಭ ಹಾರೈಸುತ್ತೇನೆ.

-ಎನ್.ಆರ್.ಪಂಡಿತಾರಾಧ್ಯ | ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ಅಧ್ಯಕ್ಷ



ವಿದ್ಯಾರ್ಥಿಗಳ ಸಾಧನೆ ಅತ್ಯುತ್ತಮವಾಗಿದೆ. ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿಗಳ ಕೀರ್ತಿಯೂ ಮತ್ತಷ್ಟು ಹೆಚ್ಚಲಿ. ಎಲ್ಲ ವಿದ್ಯಾರ್ಥಿಗಳಿಗೆ ಶುಭವಾಗಲಿ. ಪೋಷಕರು, ಉಪನ್ಯಾಸಕರ ಪಾತ್ರ ಬಹುಮುಖ್ಯವಾಗಿದ್ದು, ಅವರಿಗೂ ಅಭಿನಂದನೆಗಳು.

-ನಾಡೋಜ ಡಾ.ವೂಡೇ ಪಿ.ಕೃಷ್ಣ | ಗೌರವ ಪ್ರಧಾನ ಕಾರ್ಯದರ್ಶಿ, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್

ಪ್ರಜಾವಾಣಿ

ಬುಧವಾರ • ಏಪ್ರಿಲ್ 26, 2023




ಬೆಂಗಳೂರಿನಲ್ಲಿ ಮಂಗಳವಾರ ಬಸವ ವೇದಿಕೆ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಾಹಿತಿ ಜಿ.ವಿ.ರೇಣುಕಾ ರಾಜಶೇಖರ್ (ವಚನ ಸಾಹಿತ್ಯ ಶ್ರೀ), ಜಿ.ಎಸ್.ಜಯದೇವ (ಬಸವಶ್ರೀ) ಡಾ.ಪ್ರದೀಪ್ ಕುಮಾರ್ ಹೆಬ್ರಿ (ವಚನ ಸಾಹಿತ್ಯ ಶ್ರೀ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ರಾಜ್ಯ ಹಸಿರು ನ್ಯಾಯಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ, ಬಸವ ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ, ಉಪಾಧ್ಯಕ್ಷ ಎಸ್.ಷಡಕ್ಷರಿ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಬೆಳಗಾವಿ ಜಿಲ್ಲೆಯ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ

– ಪ್ರಜಾವಾಣಿ ಚಿತ್ರ

ಈ ಸಂಜೆ

Apr 25, 2023



ಶೇಷಾದ್ರಿಪುರಂ ಕಾಲೇಜಿನಲ್ಲಿಂದು ಕನ್ನಡ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸರು ಹಾಗೂ ವಿಮರ್ಶಕರಾದ ಪ್ರೊ.ಅ.ರಾ.ಮಿತ್ರ, ಸಾರ್ಕ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾದ ನಾಡೋಜ ಡಾ.ಹಂಪ ನಾಗರಾಜಯ್ಯ ಅವರನ್ನು ಸನ್ಮಾನಿಸಲಾಯಿತು. ಕಸಾಪ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಎಚ್.ಎಂ.ಗೀತಾ ಹಾಜರಿದ್ದರು.

ಉದಯವಾಣಿ ಬೆಂಗಳೂರು
ಮಂಗಳವಾರ, ಏಪ್ರಿಲ್ 11, 2023

ಕೇಂದ್ರೀಯ ಗಾಂಧಿ ಸ್ಮಾರಕ ನಿಧಿ ಟ್ರಸ್ಟಿ: ಪ್ರೊ| ಪಿ. ಕೃಷ್ಣ ನೇಮಕ



ಬೆಂಗಳೂರು: ಕೇಂದ್ರೀಯ ಗಾಂಧಿ ಸ್ಮಾರಕ ನಿಧಿ ಟ್ರಸ್ಟಿ ಆಗಿ ಪ್ರೊ| ಪಿ. ಕೃಷ್ಣ ನೇಮಕವಾಗಿದ್ದಾರೆ. 2028ರ ಮಾರ್ಚ್ 25ರವರೆಗೂ ಅವರು ಟ್ರಸ್ಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಗಾಂಧಿ ಸ್ಮಾರಕ ನಿಧಿಯಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆ ಗುರುತಿಸಿ ಈ ಹುದ್ದೆ ನೀಡಲಾಗಿದೆ ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ರಾಮ್ ಚಂದ್ರ ರಾಹಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ ಭಾನುವಾರ ● ಏಪ್ರಿಲ್ 9, 2023



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿಗೆ ‘ನ್ಯಾಕ್‌ಎ+ ಗ್ರೇಡ್’ ಮಾನ್ಯತೆ ದೊರೆತಿದ್ದು ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್ ಅವರನ್ನು ಶಂಕರ್ ಬಿದರಿ ಸನ್ಮಾನಿಸಿದರು.

‘ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿ’

ಪ್ರಜಾವಾಣಿ ವಾರ್ತೆ

ಯಲಹಂಕ: ಶಿಕ್ಷಕ ವೃತ್ತಿಯು ಎಲ್ಲ ಕ್ಷೇತ್ರಗಳ ಸೇವಾ ವೃತ್ತಿಗಳಿಗಿಂತಲೂ ಅತ್ಯಂತ ಶ್ರೇಷ್ಠ ಹಾಗೂ ನೋಬೆಲ್ ವೃತ್ತಿಯಾಗಿದೆ. ಶಿಕ್ಷಕರು ನಿರಂತರ ಕಲಿಕೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಪಾಠ– ಪ್ರವಚನ, ಬೋಧನಾ ಶೈಲಿ ಗುಣಮಟ್ಟದಿಂದ ಕೂಡಿರಲು ಸಾಧ್ಯವಾಗುತ್ತದೆ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿಗೆ ‘ನ್ಯಾಕ್ ಎ+ ಗ್ರೇಡ್’ ಮಾನ್ಯತೆ ದೊರೆತಿದ್ದು ಪ್ರಾಂಶುಪಾಲರು, ಶಿಕ್ಷಕರಿಗಾಗಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ‘ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಸಿಬ್ಬಂದಿಯ ಪರಿಶ್ರಮದಿಂದ ಈ ಸಾಧನೆ ಮಾಡಿರುವುದು ಶ್ಲಾಘನೀಯ ಕಾರ್ಯ’ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೆ ಪಿ. ಕೃಷ್ಣ ಅವರು, ‘ದೇಶದಲ್ಲಿ ಎ + ಗ್ರೇಡ್ ಮಾನ್ಯತೆ ಪಡೆದಿರುವ 358 ಕಾಲೇಜುಗಳ ಪೈಕಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯೂ ಒಂದಾಗಿರುವುದು ಹೆಮ್ಮೆಯ ಸಂಗತಿ’ ಎಂದರು.

ಶೇಷಾದ್ರಿಪುರ ಶಿಕ್ಷಣಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಟಿ.ಎಸ್.ಹೆಂಜಾರಪ್ಪ, ಡಬ್ಲ್ಯು.ಎಚ್.ಅನಿಲ್ ಕುಮಾರ್, ಕೋಶಾಧ್ಯಕ್ಷ ಬಿ.ಎಂ.ಪಾರ್ಥಸಾರಥಿ, ಜಂಟಿ ಕಾರ್ಯದರ್ಶಿ ಎಸ್. ಶೇಷನಾರಾಯಣ ಇತರರು ಇದ್ದರು.

ಪ್ರಜಾವಾಣಿ
ಶನಿವಾರ • ಏಪ್ರಿಲ್ 8, 2023

ವೂಡೇ ಪಿ. ಕೃಷ್ಣ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೇಂದ್ರೀಯ ಗಾಂಧಿ ಸ್ಮಾರಕ ನಿಧಿಗೆ ಮುಂದಿನ 5 ವರ್ಷಗಳ ಅವಧಿಗೆ ಟ್ರಸ್ಟಿಯಾಗಿ ವೂಡೇ ಪಿ. ಕೃಷ್ಣ ನೇಮಕವಾಗಿದ್ದಾರೆ.

ಮಾರ್ಚ್ ವೂಡೇ ಪಿ. ಕೃಷ್ಣ 26ರಿಂದಲೇ ಈ ನೇಮಕಾತಿ ಜಾರಿಗೆ ಬಂದಿದ್ದು, 2028ರ ಮಾರ್ಚ್ 25ರವರೆಗೂ ಅವರು ಟ್ರಸ್ಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಗಾಂಧಿ ಸ್ಮಾರಕ ನಿಧಿಯಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆ ಗುರುತಿಸಿ ಈ ಹುದ್ದೆ ನೀಡಲಾಗಿದೆ ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ರಾಮ್ ಚಂದ್ರ ರಾಹಿ ಪತ್ರದಲ್ಲಿ ತಿಳಿಸಿದ್ದಾರೆ.

ಕನ್ನಡಪ್ರಭ ಸೋಮವಾರ 3.4.2023

ಖ್ಯಾತ ತಬಲಾ ವಾದಕ ಅನಿಂದೋ ಚಟರ್ಜಿಗೆ 'ಗುರು ಗೌರವ' ಪ್ರಶಸ್ತಿ

ಕಲಾವಿದರಿಗೆ ಸಿಗುವ ಗೌರವ ದೇವರಿಗೆ ಅರ್ಪಣೆ: ತಬಲಾ ವಾದಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಂತಾರಾಷ್ಟ್ರೀಯ ಖ್ಯಾತಿಯ ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿ ಅವರಿಗೆ ಸತೀಶ್ ಹಂಪಿಹೊಳಿ ಮ್ಯೂಜಿಕ್ ಫೌಂಡೇಶನ್ ಟ್ರಸ್ಟ್ ಕೊಡಮಾಡುವ 'ಗುರು ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಜಯನಗರದ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ನಡೆದ 'ಚೈತ್ರ ಸಂಗೀತೋತ್ಸವ' ಕಾರ್ಯಕ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅನಿಂದೋ ಚಟರ್ಜಿ, ಕಲಾವಿದರು ಯಾವಾಗಲೂ ಪ್ರಪಂಚದ ಪ್ರಸನ್ನತೆಯನ್ನು ಬಯಸುತ್ತಾರೆ. ಕಲಾವಿದರಿಗೆ ಸಲ್ಲುವ ಎಲ್ಲ ಗೌರವವು ದೇವರಿಗೆ ಅರ್ಪಣೆಯಾಗುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಡಾ। ವೂಡೇ ಪಿ.ಕೃಷ್ಣ, 'ಸಂಗೀತದ ಶಕ್ತಿ ಅಪಾರವಾದುದು. ಸಂಗೀತ ಕಲಿಕೆಯಿಂದ ಸೂಕ್ಷ್ಮಮತಿಗಳು, ಸಂವೇದನಾಶೀಲತೆ ಹೆಚ್ಚುತ್ತದೆ' ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿದ ಡಾ। ಮನು ಬಳಿಗಾರ್, ಯುವಕಲಾವಿದರು ಪ್ರಶಸ್ತಿ ಹಿಂದೆ ಹೋಗದೆ ತಮ್ಮ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ನೀಡಬೇಕು. ಪಂಡಿತ್ ಅನಿಂದೋ ಚಟರ್ಜಿ ಅವರಂತ ಕಲಾವಿದರನ್ನು ಪ್ರೇರಕ ಶಕ್ತಿಯಾಗಿ ಸ್ವೀಕರಿಸಿ ಅವರಂತೆ ನಡೆಯಬೇಕು. ಪದ್ಮಶ್ರೀ ಪ್ರಶಸ್ತಿಯನ್ನು ನಿರಾಕರಿಸಿದ ಅವರದ್ದು ಮಾದರಿ ವ್ಯಕ್ತಿತ್ವ ಎಂದರು.

ಹಿರಿಯ ಕವಿ ಡಾ। ಎಚ್.ಎಸ್. ವೆಂಕಟೇಶಮೂರ್ತಿ, ನಮ್ಮಲ್ಲಿನ್ನೂ ಸಂಸ್ಕೃತಿ, ಸಾಹಿತ್ಯ ಕಲೆಗೆ ಬೆಲೆಯಿದೆ. ಕರ್ನಾಟಕದ ಹೆಮ್ಮೆಯನ್ನು ರಾಜ್ಯ ಕಲಾವಿದರು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿ ಎಂದು ಆಶಿಸಿದರು.

ಹಿಂದೂಸ್ತಾನಿ ಗಾಯಕ ಪಂಡಿತ್ ಮೃತ್ಯುಂಜಯ ಶೆಟ್ಟರ್, ಪಂ.ಸತೀಶ್ ಹಂಪಿಹೊಳಿ ಇದ್ದರು.



ಅಂತಾರಾಷ್ಟ್ರೀಯ ಖ್ಯಾತಿಯ ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿ ಅವರಿಗೆ 'ಗುರು ಗೌರವ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಹಿರಿಯ ಕವಿ ಡಾ। ಎಚ್.ಎಸ್.ವೆಂಕಟೇಶಮೂರ್ತಿ, ಡಾ। ಮನು ಬಳಿಗಾರ್, ಪಂ. ಸತೀಶ್ ಹಂಪಿಹೊಳಿ ಇದ್ದರು.

ಮನಸೂರೆಗೊಳಿಸಿದ ಕಾರ್ಯಕ್ರಮ

ಪಂ. ಅಮೃತೇಶ ಕುಲಕರ್ಣಿ, ಪಂ.ಸತೀಶ್ ಹಂಪಿಹೊಳಿ, ವಿದ್ವಾನ್ ನಾಗೇಂದ್ರ ರಾಣಾಪೂರ, ವಿದೂಷಿ ರೇಖಾ ಹಂಪಿಹೊಳಿ, ಉಮಾ ಕುಲಕರ್ಣಿ, ಸಂಜನಾ ಭಟ್ ಅವರ ಸಂಗೀತ ಕಾರ್ಯಕ್ರಮ, ಅಲಂಕೃತ ನೃತ್ಯ ಸಂಸ್ಥೆ ವಿದ್ಯಾರ್ಥಿಗಳಿಂದ ನಡೆದ ಕಥಕ್ ಶಾಸ್ತ್ರೀಯ ನೃತ್ಯ, ಗುರುಕುಮಾರ ಕಲಾ ವೇದಿಕೆಯ ಸಮೂಹ ಗಾಯನ ಪ್ರೇಕ್ಷಕರ ಮನಸೆಳೆಯಿತು.

ಪ್ರಜಾ ಪ್ರಗತಿ

Mar 30, 2023

ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿಗಳಾಗಿ ನಾಡೋಜ ಡಾ.ವೂಡೇ ಪಿ. ಕೃಷ್ಣ



ವಿಜಯಪುರ: ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ ರವರನ್ನು ಮಾ. 26 ರಂದು ನವದೆಹಲಿಯ ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿಗಳಾಗಿ ನಾಮ ನಿರ್ದೇಶನ ಗೊಂಡಿರುತ್ತಾರೆಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸರ್ವೋದಯ ಮಂಡಳಿಯ ಅಧ್ಯಕ್ಷ ಡಾ.ವಿ.ಪ್ರಶಾಂತ ತಿಳಿಸಿದರು.

ಇವರು ಪಟ್ಟಣದ ಶ್ರೀ ಬಸವಕಲ್ಯಾಣ ಮಠದ ಆವಣದಲ್ಲಿ ಆಯೋಜಿಸ ಲಾದ ಗ್ರಾಮಾಂತರ ಜಿಲ್ಲಾ ಸರ್ವೋದಯ ಮಂಡಳಿಯ ಮಾಸಿಕ ಸಭೆಯಲ್ಲಿ ಈ ಸಂತಸದ ವಿಷಯವನ್ನು ಗಾಂಧಿ ಪ್ರಣೀತ ಸಂಘ-ಸಂಸ್ಥೆ ಸರ್ವ ಪದಾಧಿಕಾರಿಗಳ ಸಮ್ಮುಖದಲ್ಲಿ ವ್ಯಕ್ತಪಡಿಸಿ ಸಿಹಿ ವಿತರಿಸಿದರು.

ನವದೆಹಲಿಯ ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿಗಳಾಗಿ ನಾಮ ನಿರ್ದೇಶನಗೊಂಡ ನಾಡೋಜ ಡಾ. ವೂಡೇ ಪಿ. ಕೃಷ್ಣ ರವರಿಗೆ ಪಟ್ಟಣದ ಬಸವಕಲ್ಯಾಣ ಮಠಾಧ್ಯಕ್ಷ ನಿರಂಜನ ಪ್ರಣವ ಸ್ವರೂಪ ಡಾ. ಮಹಾದೇವ ಸ್ವಾಮೀಜಿ,ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರ ಕೃಷ್ಣಪ್ಪ, ಕರ್ನಾಟಕ ರಾಜ್ಯ ಸರ್ವೋದಯ ಮಂಡಲ ಅಧ್ಯಕ್ಷ ಡಾ. ಹೆಚ್.ಎಸ್. ಸುರೇಶ್, ಕಾರ್ಯದರ್ಶಿ ಡಾ. ಯಾ.ಚಿ.ದೊಡ್ಡಯ್ಯ, ದೇವನಹಳ್ಳಿ ಜೇಸಿಐ ದೇವನಹಳ್ಳಿ ಡೈಮಂಡ್ ನ ಅಧ್ಯಕ್ಷ ಜೇಸಿ.ಜಿ.ಎನ್.ಪ್ರಶಾಂತ್ ಕುಮಾರ್, ರಾಷ್ಟ್ರೀಯ ಯುವ ಯೋಜನೆ ಕರ್ನಾಟಕ ವಲಯದ ಹಿರಿಯ ಸಾಮಾಜಿಕ ಕಾರ್ಯಕರ್ತ ವಿ.ಎನ್.ಸೂರ್ಯಪ್ರಕಾಶ್, ರೋಟರಿ ವಿಜಯಪುರ ಅಧ್ಯಕ್ಷ ರೋ.ಎಚ್.ಎಸ್.ರುದ್ರೇಶ್ ಮೂರ್ತಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಗಾಂಧಿ ಪ್ರಣೀತ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಶುಭ ಕೋರಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI >> BENGALURU
ಗುರುವಾರ 30 ಮಾರ್ಚ್ 2023
30 MARCH 2023

ನಾಳೆಯಿಂದ ಚೈತ್ರ ಸಂಗೀತೋತ್ಸವ

ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿಗೆ ಗುರು ಗೌರವ ಪ್ರಶಸ್ತಿ ಪ್ರದಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಹಾಗೂ **ವಿಜಯವಾಣಿ** ಮತ್ತು **ದಿಗ್ವಿಜಯ ನ್ಯೂಸ್ 24X7** ಸಹಯೋಗದಲ್ಲಿ ಶನಿವಾರ (ಏ. 1) 'ಚೈತ್ರ ಸಂಗೀತೋತ್ಸವ' ಹಮ್ಮಿಕೊಂಡಿದೆ.

ಜಯನಗರದ 8ನೇ ಬಡಾವಣೆಯಲ್ಲಿನ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ನಡೆಯಲಿರುವ ಉತ್ಸವದಲ್ಲಿ ಅಂತಾರಾಷ್ಟ್ರೀಯ ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿ ಅವರಿಗೆ 'ಗುರು ಗೌರವ ಪ್ರಶಸ್ತಿ' ನೀಡಿ ಗೌರವಿಸಲಾಗುವುದು. ಸಂಜೆ 6ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಲಿದ್ದು, ಕವಿ ಡಾ. ಎಚ್.ಎಸ್. ವೆಂಕಟೇಶ ಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಿಂದೂಸ್ತಾನಿ ಗಾಯಕ ಪಂಡಿತ್ ಮೃತ್ಯುಂಜಯ ಶೆಟ್ಟರ್ ಇತರರು ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರೂ ಆದ ಡಾ. ಮನು ಬಳಿಗಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಸತೀಶ್ ಹಂಪಿಹೊಳಿ ತಿಳಿಸಿದ್ದಾರೆ.



ಸಂಗೀತೋತ್ಸವ: ಮಧ್ಯಾಹ್ನ 2 ಗಂಟೆಯಿಂದಲೇ ನಡೆಯುವ ಉತ್ಸವದಲ್ಲಿ ಕಲಾವಿದರು ಸಂಗೀತ ಹಾಗೂ ನೃತ್ಯ ಪ್ರದರ್ಶನ ನೀಡಲಿದ್ದಾರೆ. ಕಲಾವಿದರಾದ ಪಂ. ಅಮೃತೇಶ ಕುಲಕರ್ಣಿ, ಪಂ. ಸತೀಶ್ ಹಂಪಿಹೊಳಿ, ವಿದ್ವಾನ್ ನಾಗೇಂದ್ರ ರಾಣಾಪೂರ್ ಅವರಿಂದ ಸಂಗೀತ ವಾದನ. ಆಶಿಷ್ ನಾಯಕ್, ಶ್ರೀನಿವಾಸ ಹಂಪಿಹೊಳಿ, ವಿನೀತ್ ರಾಣಾಪೂರ್ ಅವರಿಂದ ಸಿತಾರ್ ವಾದನ. ಪ್ರಜ್ವಲ್ ಶರ್ಮಾ, ಅಮಿತ್ ಭಟ್, ಪುನೀತ್ ರಾಣಾಪೂರ್, ಪ್ರಣೀತ್ ಆಳ್ವ ಅವರಿಂದ ತಬಲಾ ವಾದನ. ಹರಿಭಟ್, ಸಮರ್ಥ ಸಪ್ರೆ ಅವರಿಂದ ಕೊಳಲು ವಾದನ, ರಾಕೇಶ್, ಶ್ರೀಧರ್, ನಂದನ್ ಭಾರದ್ವಾಜ್, ಗೌತಮ್ ಕಾರ್ಕಳ ಅವರಿಂದ ತಬಲಾ ವಾದನ ಹಾಗೂ ರಾಘವೇಂದ್ರ ಕುಲಕರ್ಣಿ, ಗೌರವ್ ಗಡಿಯಾರ್, ವಿಶ್ರುತ್ ಆಚಾರ್ಯ ಅವರು ತಬಲಾ ವಾದನ ನಡೆಸಿಕೊಡಲಿದ್ದಾರೆ. ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ವಿದ್ಯಾರ್ಥಿಗಳಿಂದ ತಬಲಾ ತರಂಗ್, ಶ್ರೀ ಗುರುಕುಮಾರ ಪಂಚಾಕ್ಷರ ಕಲಾ ವೇದಿಕೆ ವಿದ್ಯಾರ್ಥಿಗಳಿಂದ ಸಮೂಹ ಗಾಯನ, ಪಂಡಿತ್ ಅನಿಂದೋ ಚಟರ್ಜಿ ಅವರಿಂದ ತಬಲಾ ಸೋಲೋ. ಅಲಂಕೃತ ನೃತ್ಯ ಸಂಸ್ಥೆ ವಿದ್ಯಾರ್ಥಿಗಳು ವಿದುಷಿ ಪೂರ್ಣಾ ಆಚಾರ್ಯ ನಿರ್ದೇಶನದಲ್ಲಿ ಕಥಕ್ ಶಾಸ್ತ್ರೀಯ ನೃತ್ಯ ಪ್ರದರ್ಶನ ನೀಡಲಿದ್ದಾರೆ.

ದಿಗ್ವಿಜಯ 24X7 NEWS
ವಿಜಯವಾಣಿ ಮಾಧ್ಯಮ ಸಹಯೋಗ

ಪ್ರಜಾವಾಣಿ ಬುಧವಾರ ಮಾರ್ಚ್ 29, 2023

ಏ. 1ರಂದು 'ಚೈತ್ರ ಸಂಗೀತೋತ್ಸವ'



ಅನಿಂದೂ ಚಟರ್ಜಿ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್‌ನಿಂದ ಏಪ್ರಿಲ್ 1 ರಂದು 'ಚೈತ್ರ ಸಂಗೀತೋತ್ಸವ' ಕಾರ್ಯಕ್ರಮವನ್ನು ಜಯನಗರದ ಶಿವರಾತ್ರೀಶ್ವರ ಕೇಂದ್ರ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

'ಇದೇ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ತಬಲಾ ವಾದಕ ಅನಿಂದೂ ಚಟರ್ಜಿ ಅವರಿಗೆ 'ಗುರು ಗೌರವ' ಪ್ರಶಸ್ತಿಯನ್ನು ಮಾಜಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಉದ್ಘಾಟನೆ ಮಾಡಲಿದ್ದು, ಎಚ್.ಎಸ್. ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ.

ವಿವಿಧ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ' ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಸತೀಶ್ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡಪ್ರಭ

Wed. 29 March 2023

ಜಯನಗರ: ಏ.1ಕ್ಕೆ ಚೈತ್ರ ಸಂಗೀತೋತ್ಸವ

ಸತೀಶ್ ಹಂಪಿಹೊಳಿ ಟ್ರಸ್ಟ್‌ನ ಕಾರ್ಯಕ್ರಮ | ಅನಿಂದೋಗೆ ಗುರು ಗೌರವ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ವತಿಯಿಂದ ಏ.1ರಂದು ಮಧ್ಯಾಹ್ನ 2ಕ್ಕೆ ಜಯನಗರದ 8ನೇ ಬಡಾವಣೆಯಲ್ಲಿರುವ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಚೈತ್ರ ಸಂಗೀತೋತ್ಸವ ಆಯೋಜಿಸಲಾಗಿದೆ.



ಅನಿಂದೋ

ಚೈತ್ರ ಸಂಗೀತೋತ್ಸವದಲ್ಲಿ ಕಥಕ್ ನೃತ್ಯಗಾರ್ತಿ ವಿದುಷಿ ಪೂರ್ಣಾ ಆಚಾರ್ಯ ಅವರ ಅಲಂಕೃತ ನೃತ್ಯ ಶಾಲೆ ವಿದ್ಯಾರ್ಥಿಗಳಿಂದ ಕಥಕ್ ಶಾಸ್ತ್ರೀಯ ನೃತ್ಯ, ಶ್ರೀ ಗುರುಕುಮಾರ ಪಂಚಾಕ್ಷರ ಕಲಾವೇದಿಕೆ ವಿದ್ಯಾರ್ಥಿಗಳಿಂದ ಹಿಂದೂಸ್ತಾನಿ ಸಮೂಹ ಗಾಯನ, ಸತೀಶ್ ಹಂಪಿಹೊಳಿ ಅವರ ಶಿಷ್ಯ ಬಳಗದಿಂದ ತಬಲಾ ತರಂಗ, ಜೊತೆಗೆ ವಿದ್ವಾನ್ ಅಮಿತ್ ಭಟ್ ಅವರ ಲೆಹರ ಸಾಥ್ ಇರಲಿದೆ. ವಿದ್ವಾನ್ ನಾಗೇಂದ್ರ ರಾಣಾಪೂರ್, ಆಶಿಷ್ ನಾಯಕ್, ಶ್ರೀನಿವಾಸ್ ಹಂಪಿಹೊಳಿ, ವಿನೀತ್ ರಾಣಾಪೂರ್, ಉಮಾ ಕುಲಕರ್ಣಿ, ಸಂಜನಾ ಭಟ್ ಅವರ ಗಾಯನ ಹಾಗೂ ವಿದುಷಿ ರೇಖಾ ಹಂಪಿಹೊಳಿ, ಗೌರವ ಗಡಿಯಾರ್ ಅವರ ಹಾರ್ಮೋನಿಯಂ ಸಾಥ್, ಪಂಡಿತ್ ಅಮೃತೇಶ್ ಕುಲಕರ್ಣಿ ಅವರ ತಬಲಾ ಸಾಥ್ ಇರಲಿದೆ. ಸಂಜೆ 6ಕ್ಕೆ ನಡೆಯುವ ಸಭಾ ಕಾರ್ಯಕ್ರಮವನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ| ವೂಡೇ ಪಿ.ಕೃಷ್ಣ ಉದ್ಘಾಟಿಸುವರು. ಕವಿ ಡಾ| ಎಚ್.ಎಸ್. ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸುವರು. ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ| ಮನು ಬಳಿಗಾರ್ ಪ್ರಶಸ್ತಿ ಪ್ರದಾನ ಮಾಡುವರು. ಅಂತಾರಾಷ್ಟ್ರೀಯ ತಬಲಾ ವಾದಕ ಪಂಡಿತ್ ಅನಿಂದೋ ಚಟರ್ಜಿ ಅವರಿಗೆ 'ಗುರು ಗೌರವ' ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಹಿಂದೂಸ್ತಾನಿ ಗಾಯಕ ಪಂಡಿತ್ ಮೃತ್ಯುಂಜಯ ಶೆಟ್ಟರ್ ಉಪಸ್ಥಿತರಿರುವರು.

ವಿಶ್ವವಾಣಿ

Mar 27, 2023

ಚೇತನ ಬಿಜಿನೆಸ್ ಸ್ಕೂಲ್‌ನಲ್ಲಿ ರಾಷ್ಟ್ರೀಯ ಸಮ್ಮೇಳನ



ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಡಾ. ರವಿ ಠಾಕರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೋಡಿ ಪಿ. ಕೃಷ್ಣ ಪಾಲ್ಗೊಂಡಿದ್ದರು.

ಹುಬ್ಬಳ್ಳಿ: ನಗರದ ಚೇತನ ಬಿಜಿನೆಸ್ ಸ್ಕೂಲ್‌ನಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾರ್ಕೆಟಿಂಗ್, ಹಣಕಾಸು ಹಾಗೂ ಮಾನವ ಸಂಪನ್ಮೂಲ ವಿಭಾಗಗಳಲ್ಲಿ 60ಕ್ಕೂ ಹೆಚ್ಚು ಪ್ರಬಂಧಗಳು ಮಂಡನೆಯಾದವು. ಮಹಾರಾಷ್ಟ್ರ, ಗೋವಾ, ಪಂಜಾಬ್, ಆಂಧ್ರ ಹಾಗೂ ಕರ್ನಾಟಕದ ಉದ್ಯಮಿ ಪ್ರಬಂಧಗಳನ್ನು ಮಂಡಿಸಿದರು. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಪ್ರಬಂಧ ಮಂಡಿಸುವ ವ್ಯವಸ್ಥೆ ಮಾಡಲಾಗಿತ್ತು. ಕರ್ನಾಟಕ ಉನ್ನತ ಶಿಕ್ಷಣ ಅಕಾಡೆಮಿ ಅಧ್ಯಕ್ಷ ಡಾ.ಎಸ್. ಎಂ. ಶಿವಪ್ರಸಾದ ಸಮ್ಮೇಳನಕ್ಕೆ ಚಾಲನೆ ನೀಡಿದರು. ಅಹಮದಾಬಾದ್ ಇಂಡಿಯನ್ ಇನ್ಸ್ಟಿಟ್ಯೂಟ್‌ನ ನಿವೃತ್ತ ಪ್ರಾಧ್ಯಾಪಕ ಡಾ. ಮುಕುಂದ ದೀಕ್ಷಿತ ಮುಖ್ಯ ಭಾಷಣ ಮಾಡಿದರು. ಚೇತನ ಬಿಸಿನೆಸ್ ಸ್ಕೂಲ್ ನಿರ್ದೇಶಕ ಡಾ. ವಿ.ಎಂ. ಕೊರವಿ ಅಧ್ಯಕ್ಷತೆ ವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ನಿರ್ದೇಶಕ ಡಾ.ಎ.ಎಂ. ಕಡಕೋಳ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಂಯುಕ್ತ ಕರ್ನಾಟಕ Mar 27, 2023

ಅಪರಾಧ ಹಿನ್ನೆಲೆ, ಗೂಂಡಾ ಪ್ರವೃತ್ತಿಯುಳ್ಳವರಿಗೆ ಟಿಕೆಟ್ ಬೇಡ

ಹುಬ್ಬಳ್ಳಿ: ಅಪರಾಧ ಹಿನ್ನೆಲೆಯುಳ್ಳ ರಾಜಕಾರಣಿಗಳು ಪ್ರಜಾಪ್ರಭುತ್ವಕ್ಕೆ ಮಾರಕ. ಹೀಗಾಗಿ, ರಾಜಕೀಯ ಪಕ್ಷಗಳು ತತ್ವ ಸಿದ್ಧಾಂತಗಳಲ್ಲಿ ಬದ್ಧತೆ ಇರುವವರನ್ನು, ಸರಳರನ್ನು, ನಿಜವಾದ ಸಮಾಜ ಸೇವಕರನ್ನು ಗುರುತಿಸಿ ಅವರನ್ನೇ ಪಕ್ಷದ ಅಭ್ಯರ್ಥಿಗಳನ್ನಾಗಿ ಮಾಡಬೇಕಾಗಿದೆ. ಗೂಂಡಾ ಪ್ರವೃತ್ತಿಯುಳ್ಳವರನ್ನು ರಾಜಕೀಯ ಪಕ್ಷಗಳು ದೂರವಿಟ್ಟು, ಸಜ್ಜನರಿಗೆ ಟಿಕೇಟ್ ಕೊಡಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಅಧ್ಯಕ್ಷರಿಗೆ ಪತ್ರ ಬರೆದು ಸಜ್ಜನರಿಗೇ ಟಿಕೇಟ್ ಕೊಡಬೇಕು ಎಂದು ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ರಾಜಕಾರಣವೆನ್ನುವುದು ಸತ್ಯ ಶುದ್ಧ ಕಾಯಕಪ್ರಜ್ಞೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಒಂದು ಜವಾಬ್ದಾರಿಯುತ ಸೇವಾ ಕ್ಷೇತ್ರವಾಗಿದೆ. ಇಂತಹ ಸೇವಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸಲು ಬರುವ ವ್ಯಕ್ತಿಗಳಿಗೆ, ಪಕ್ಷಗಳಿಗೆ ನೈತಿಕ ನೆಲೆಯ ಪರಿಶುದ್ಧತೆ ಮುಖ್ಯ. ಆದರೆ, ಇಂದಿನ ರಾಜಕಾರಣದಲ್ಲಿ ಇದು ನಿರೀಕ್ಷೆಯಷ್ಟು ಕಾಣುತ್ತಿಲ್ಲ ಎಂದರು.

ಸದ್ಯ ಕಾರ್ಯನಿರ್ವಹಿಸುತ್ತಿರುವ ಸಂಸತ್ತಿನಲ್ಲಿ ಶೇ 43ರಷ್ಟು ಹಾಗೂ ರಾಜ್ಯ ವಿಧಾನಸಭೆಯಲ್ಲಿ ಶೇ. 27ರಷ್ಟು ಸದಸ್ಯರು ಕ್ರಿಮಿನಲ್ ಹಿನ್ನೆಲೆ ಇರುವ ಜನಪ್ರತಿನಿಧಿಗಳಿದ್ದಾರೆ. ಇದು ಇಡೀ ದೇಶವೇ ತಲೆತಗ್ಗಿಸುವ ವಿಚಾರವಾಗಿದೆ. ಇಂತಹ ಜನಪ್ರತಿನಿಧಿಗಳು ಇರುವುದು ದೇಶದ ರಾಜಕೀಯ ವ್ಯವಸ್ಥೆಗೆ ಕಪ್ಪು ಮಸಿಯೇ ಆಗಿದೆ. ಇಂಥವರಿಗೆ ಶಾಸಕ, ಸಂಸದ ಎನ್ನುವ ಅಧಿಕಾರ ರಕ್ಷಾಕವಚ ರೀತಿ ಅವರ ಅನೈತಿಕತೆಗಳಿಗೆ ಬಳಕೆಯಾಗುತ್ತದೆ ಎಂದು ಹೇಳಿದರು.

ನಾಗರಿಕರ ಹೊಣೆಗಾರಿಕೆಯೂ ಅಷ್ಟೇ ಮಹತ್ವದ್ದಾಗಿದೆ. ಶುಭ್ರ ಚಾರಿತ್ರ್ಯ ಉಳ್ಳವರನ್ನು, ಸೇವಾ ಕ್ಷೇತ್ರಕ್ಕೆ ಸಮರ್ಪಿಸಿಕೊಂಡವರನ್ನು ಗುರುತಿಸಿ ಬೆಂಬಲಿಸಬೇಕು ಎಂದೂ ಡಾ. ವೂಡೇ ಪಿ.ಕೃಷ್ಣ ಮನವಿ ಮಾಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸದಸ್ಯ ಉಮೇಶ ಬಳಿಗಾರ ಗೋಷ್ಠಿಯಲ್ಲಿದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕನ್ನಡಪ್ರಭ

Sun, 26 March 2023

ಶುದ್ಧ ಚಾರಿತ್ರ್ಯವುಳ್ಳವರಿಗೆ ಮಾತ್ರ ಟಿಕೆಟ್ ನೀಡಿ: ಡಾ. ವೂಡೇ ಪಿ. ಕೃಷ್ಣ

• ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ಅಪರಾಧ ಹಿನ್ನೆಲೆಯುಳ್ಳ ರಾಜಕಾರಣಿಗಳು ಪ್ರಜಾಪ್ರಭುತ್ವಕ್ಕೆ ಮಾರಕ. ರಾಜಕೀಯ ಪಕ್ಷಗಳಿಗೆ ಇಂಥವರಿಂದ ಹಾನಿ ಆಗುತ್ತದೆ. ಆದ್ದರಿಂದ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು ಶುದ್ಧ ಚಾರಿತ್ರ್ಯವುಳ್ಳವರಿಗೆ ಮಾತ್ರ ಟಿಕೆಟ್ ನೀಡಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮನವಿ ಮಾಡಿದರು.

■ ಅಪರಾಧ ಹಿನ್ನೆಲೆಯುಳ್ಳವರು ಪ್ರಜಾಪ್ರಭುತ್ವಕ್ಕೆ ಕಂಟಕ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೆಲ್ಲುವ ಭರದಲ್ಲಿ ರಾಜಕೀಯ ಪಕ್ಷಗಳು ವ್ಯಕ್ತಿಯ ಹಿನ್ನೆಲೆ ತಿಳಿದುಕೊಳ್ಳದೆ ಟಿಕೆಟ್ ನೀಡುತ್ತಿವೆ. ಅಪರಾಧ ಹಿನ್ನೆಲೆಯುಳ್ಳವರು ಪ್ರಜಾಪ್ರಭುತ್ವಕ್ಕೆ ಕಂಟಕವಾಗಿದ್ದಾರೆ. ಅದರಲ್ಲೂ ಕೊಲೆ, ಅತ್ಯಾಚಾರದಂತಹ ಆರೋಪವುಳ್ಳವರು ಇಂದು ಜನಪ್ರತಿನಿಧಿಗಳಾಗುತ್ತಿರುವುದು ಸರಿಯಲ್ಲ, ಇದರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆಯುಂಟಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಸದ್ಯ ಸಂಸತ್ತಿನಲ್ಲಿ ಶೇ. 40ರಷ್ಟು ಸದಸ್ಯರು, ರಾಜ್ಯದಲ್ಲಿ ಶೇ. 27ರಷ್ಟು ಜನಪ್ರತಿನಿಧಿಗಳು ಅಪರಾಧ ಹಿನ್ನೆಲೆಯುಳ್ಳವರುಳ್ಳವರಾಗಿದ್ದಾರೆ. ಸೇವಾಕ್ಷೇತ್ರವಾದ ರಾಜಕೀಯದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಅಪರಾಧ ಹಿನ್ನೆಲೆಯುಳ್ಳವರಿಗೆ ಟಿಕೆಟ್ ನೀಡದಂತೆ ಈಗಾಗಲೇ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ವರಿಷ್ಠರಿಗೆ ಮನವಿ ಸಲ್ಲಿಸಲಾಗಿದೆ. ಜನರು ಕೂಡ ಕಡ್ಡಾಯವಾಗಿ ಮತದಾನ ಮಾಡಬೇಕು. ವ್ಯಕ್ತಿಯ ವ್ಯಕ್ತಿತ್ವವನ್ನು ನೋಡಿ ಉತ್ತಮರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಗಾಂಧಿ ಭವನದ ಟ್ರಸ್ಟಿ ಉಮೇಶ ಬಳಿಗಾರ ಇದ್ದರು.

ನಾಳೆ ರಾಷ್ಟ್ರ ಮಟ್ಟದ ಸಮ್ಮೇಳನ

ವ್ಯಾಪಾರ ಸ್ಥಿತಿಸ್ಥಾಪಕತ್ವದ ಆರ್ಥಿಕ ಮತ್ತು ಸುಸ್ಥಿರ ಬೆಳವಣಿಗೆಗಾಗಿ ಹೊಸ ಸಾಧ್ಯತೆ' ವಿಷಯ ಕುರಿತು ಕಾರ್ಯಾಗಾರ

ವಿಕ ಸುದ್ದಿಲೋಕ ಹುಬ್ಬಳ್ಳಿ

ನಗರದ ಡಿಕೆಎಸ್ ಟ್ರಸ್ಟ್‌ನ ಚೇತನ ಬಿಸಿನೆಸ್ ಸ್ಕೂಲ್‌ನಲ್ಲಿ ಮಾ.25ರಂದು ಬೆಳಗ್ಗೆ 10ಕ್ಕೆ 'ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಿಕೆಎಸ್ ಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಡಾ.ವಿ.ಎಂ.ಕೊರವಿ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವ್ಯಾಪಾರ ಸ್ಥಿತಿಸ್ಥಾಪಕತ್ವದ ಆರ್ಥಿಕ ಮತ್ತು ಸುಸ್ಥಿರ ಬೆಳವಣಿಗೆಗಾಗಿ ಹೊಸ ಸಾಧ್ಯತೆ' ಎಂಬ ವಿಷಯದ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದರು.

ಈಗಾಗಲೇ ಕರ್ನಾಟಕ, ಗೋವಾ, ಪಂಜಾಬ್, ಆಂಧ್ರಪ್ರದೇಶ, ಮಹಾರಾಷ್ಟ್ರ ತಮಿಳುನಾಡು ಸೇರಿದಂತೆ ವಿದೇಶದ ವಿಷಯ ತಜ್ಞರಿಂದ ವಿವಿಧ ವಿಷಯಗಳು ಮಂಡನೆಯಾಗಲಿವೆ. ಸುಮಾರು 60ಕ್ಕೂ ಹೆಚ್ಚು ಸಂಶೋಧಕರು ಹಾಗೂ 80 ಪ್ರಬಂಧಗಳನ್ನು ಸ್ವೀಕರಿಸಲಾಗಿದೆ ಎಂದರು.

ಧಾರವಾಡ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಡಾ.ಎಸ್.ಎಂ.ಶಿವಪ್ರಸಾದ ಆಗಮಿಸಿ ಸಮ್ಮೇಳನ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಅಹಮದಾಬಾದ್ ಇಂಡಿಯನ್ ಇನ್‌ಸ್ಟಿಟ್ಯೂಟ್‌ನ ನಿವೃತ್ತ ಪ್ರಾಧ್ಯಾಪಕ ಡಾ.ಮುಕುಂದ ದೀಕ್ಷಿತ, ಡಾ.ರವಿ ಸರ್ಕಾರ್, ಡಾ.ವೃದಿ ಕೃಷ್ಣಾ, ಡಾ.ಪ್ರಕಾಶ ಆಗಮಿಸಲಿದ್ದಾರೆ. ಸಂತೋಷ ಹಾವರಕರ್ ನ್ಯೂಯಾರ್ಕ್‌ನಿಂದ ಆನ್‌ಲೈನ್ ಮೂಲಕ ಭಾಗವಹಿಸಲಿದ್ದಾರೆ. ಸಮ್ಮೇಳನದ ಸಮಾರೋಪ ಸಮಾರಂಭಕ್ಕೆ ಕೆಯುಡಿ ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಡೀನ್ ಹಾಗೂ ನಿರ್ದೇಶಕ ಡಾ.ಎ.ಎಂ. ಕಡಕೋಳ ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರೊ.ರಮಾಕಾಂತ ಕುಲಕರ್ಣಿ, ಸಮ್ಮೇಳನದ ಸಂಯೋಜಕಿ ಡಾ.ವೇದಾ ಮಾಲಗತ್ತಿ ಇದ್ದರು.

ವಿಜಯವಾಣಿ ನಂ 1

Mar 24, 2023

ಚೇತನ ಸ್ಕೂಲ್‌ನಲ್ಲಿ ರಾಷ್ಟ್ರೀಯ ಸಮ್ಮೇಳನ

ಹುಬ್ಬಳ್ಳಿ: ಇಲ್ಲಿಯ ಉಣಕಲ್ಲ ಶ್ರೀನಗರದಲ್ಲಿರುವ ಚೇತನ ಬಿಜಿನೆಸ್ ಸ್ಕೂಲ್‌ನಲ್ಲಿ 'ವ್ಯಾಪಾರ ಸ್ಥಿತಿ ಸ್ಥಾಪಕತ್ವದ ಆರ್ಥಿಕ ಮತ್ತು ಸುಸ್ಥಿರ ಬೆಳವಣಿಗೆಗಾಗಿ ಹೊಸ ಸಾಧ್ಯತೆಗಳು' ಕುರಿತು ರಾಷ್ಟ್ರೀಯ ಸಮ್ಮೇಳನವನ್ನು ಮಾ. 25ರಂದು ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ. ವಿ.ಎಂ. ಕೊರವಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಸಹಯೋಗದಲ್ಲಿ ಸಮ್ಮೇಳನ ನಡೆಯಲಿದ್ದು, ಸಂಶೋಧನಾ ಪ್ರಬಂಧಗಳೊಂದಿಗೆ ತಜ್ಞರು, ಸಂಶೋಧಕರು, ವಿದ್ಯಾರ್ಥಿಗಳು, ಉದ್ಯಮಿಗಳು ಭಾಗವಹಿಸಲಿದ್ದಾರೆ ಎಂದರು.

ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಡಾ. ಎಸ್.ಎಂ. ಶಿವಪ್ರಸಾದ ಅವರು ಬೆಳಗ್ಗೆ 9.30ಕ್ಕೆ ಸಮ್ಮೇಳನಕ್ಕೆ ಚಾಲನೆ ನೀಡುವರು. ಅಹಮದಾಬಾದ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿವೃತ್ತ ಪ್ರಾಧ್ಯಾಪಕ ಡಾ. ಮುಕುಂದ ದೀಕ್ಷಿತ ಮುಖ್ಯ ಭಾಷಣ ಮಾಡಲಿದ್ದಾರೆ. ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ನಿರ್ದೇಶಕ ಡಾ. ರವಿ ಸಾರ್ಕರ್ ಅವರು ವಿಶೇಷ ಆಹ್ವಾನಿತರಾಗಿದ್ದಾರೆ. ಡಾ. ವ್ರೂಡಿ ಕೃಷ್ಣಾ ಮತ್ತು ಡಾ. ಪ್ರಕಾಶ ಇತರರು ಭಾಗವಹಿಸಲಿದ್ದಾರೆ. ಓಮನ್ ದೇಶದಿಂದಲೂ ಒಬ್ಬರು ಪ್ರಬಂಧ ಮಂಡಿಸಲಿದ್ದಾರೆ. ಪಂಜಾಬ, ತಮಿಳನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ, ಕರ್ನಾಟಕ ಸೇರಿ ಆರು ರಾಜ್ಯಗಳಿಂದ ತಜ್ಞರು ಪ್ರಬಂಧ ಕಳಿಸಿದ್ದಾರೆ. ಸಂಶೋಧಕರು, ವಿದ್ಯಾರ್ಥಿಗಳಿಂದ ಸುಮಾರು 60 ಪ್ರಬಂಧ ಸ್ವೀಕರಿಸಲಾಗಿದೆ. ಅಂದು ಪ್ರಬಂಧ ಮಂಡನೆಗೆ ಅವಕಾಶ ನೀಡಲಾಗುತ್ತದೆ. ವಿಷಯ ತಜ್ಞರು ಪ್ರಬಂಧಗಳನ್ನು ಪರಿಶೀಲಿಸಿ ಇಬ್ಬರಿಗೆ ನಗದು ಬಹುಮಾನ ನೀಡಲಿದ್ದಾರೆ. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುತ್ತದೆ. ಜತೆಗೆ ಪ್ರಬಂಧಗಳ ಸಾರ ಸಂಗ್ರಹವನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು ಎಂದರು.

ಮಾರ್ಕೆಟಿಂಗ್, ಹಣಕಾಸು ಮತ್ತು ಮಾನವ ಸಂಪನ್ಮೂಲ ಮೂರು ವಿಭಾಗಗಳಲ್ಲಿ ಪ್ರಬಂಧ ಸ್ಪರ್ಧೆ ನಡೆಯಲಿದೆ. ಆಸಕ್ತರು ಭಾಗವಹಿಸಿ ಆಲಿಸಬಹುದು ಎಂದರು. ಸಂಜೆ ನಡೆಯುವ ಸಮ್ಮೇಳನ ಸಮಾರೋಪ ಸಮಾರಂಭಕ್ಕೆ ಕವಿವಿ ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್‌ನ ನಿರ್ದೇಶಕ ಡಾ. ಎ.ಎಂ. ಕಡಕೋಳ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಮ್ಮೇಳನದ ಸಂಯೋಜಕರಾದ ಡಾ. ವೇದಾ ಮಾಲಗತ್ತಿ, ಚೇತನ ಸ್ಕೂಲ್ ಶೈಕ್ಷಣಿಕ ನಿರ್ದೇಶಕ ರಮಾಕಾಂತ ಕುಲಕರ್ಣಿ ಸುದ್ದಿಗೋಷ್ಠಿಯಲ್ಲಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಭಾನುವಾರ 19 ಮಾರ್ಚ್ 2023
19 MARCH 2023

ಡಾ.ಸಿ. ಸೋಮಶೇಖರ್ ಹೇಳಿಕೆ ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶ

ಗಡಿನಾಡ ಪ್ರದೇಶಗಳಲ್ಲಿನ ಅಸ್ಮಿತೆ ಕಾಪಾಡಲು ಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಗಡಿನಾಡ ಪ್ರದೇಶಗಳ ಅಸ್ಮಿತೆ ಕಾಪಾಡುವ ನಿಟ್ಟಿನಲ್ಲಿ ಕೆಲ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಹೇಳಿದ್ದಾರೆ.

ಕರ್ನಾಟಕ ಲೇಖಕಿಯರ ಸಂಘವು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಶೇಷಾದ್ರಿಪುರ ಕಾಲೇಜು ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶ'ದಲ್ಲಿ ಮಾತನಾಡಿದರು. ಗಡಿನಾಡ ಪ್ರದೇಶದಲ್ಲಿ ಮಹಿಳೆಯರ ಪಾತ್ರ ವಿಶೇಷವಾದದ್ದು. ಕನ್ನಡದ ಅಸ್ಮಿತೆ ರಕ್ಷಿಸಲು ಲೇಖಕಿಯರ ಶ್ರಮ ಅಪಾರವಾದದ್ದು. ಮಹಿಳೆಯರು ಪುರುಷರಗಿಂತ ಹೆಚ್ಚು ಸಂವೇದನಾಶೀಲರು ಮತ್ತು ದಾರ್ಶನಿಕರು. ಸರ್ಕಾರದ ಅಧಿಕಾರಿಗಳು ಗಡಿನಾಡ ಪ್ರದೇಶಕ್ಕೆ ಆಗಾಗ್ಗೆ ಭೇಟಿ ನೀಡಿದರೆ ಅಲ್ಲಿನ ವಾಸ್ತವ ಸ್ಥಿತಿ ಚೆನ್ನಾಗಿ ಗೊತ್ತಾಗಲಿದೆ. ಗಡಿ ಭಾಗದ ಶೈಕ್ಷಣಿಕ ಸಮಸ್ಯೆಯನ್ನು ಬಗೆಹರಿಸಿ ಶಾಲಾ ಕೊಠಡಿಗಳು ಮತ್ತು ಗ್ರಂಥಾಲಯಗಳ ಸೇರಿ ಇತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಅನೇಕ ಸಂಘ ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲಾಗುತ್ತಿದೆ ಎಂದರು. ರಾಜ್ಯದ 19 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾಧಿಕಾರಿಗಳ ಸಭೆ ನಡೆಸಲಾಗಿದೆ. ಗಡಿನಾಡ ಕನ್ನಡಿಗರ ಅಸ್ಮಿತೆ ಕಾಪಾಡಲು ಪ್ರತಿ ತಿಂಗಳು ಗಡಿ ಜಿಲ್ಲೆಯ ಗ್ರಾಮಗಳಿಗೆ ಭೇಟಿ ನೀಡಿ ಅವರ ಸಮಸ್ಯೆ ಬಗೆಹರಿಸುವಂತೆ ಸೂಚಿಸಲಾಗಿದೆ ಎಂದು ವಿವರಿಸಿದರು. ಗಡಿನಾಡ ಸಾಹಿತ್ಯ ಹಾಗೂ ಭಾಷಾ ಬಾಂಧವ್ಯ ವಿಚಾರ ಸಂಕಿರಣ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಎಚ್.ಎಲ್. ಪುಷ್ಪಾ, ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಹೇಮಲತಾ ಮಹಿಷಿ ಮತ್ತಿತರರಿದ್ದರು.



ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶದ ಉದ್ಘಾಟನೆ ವೇಳೆ ಡಾ.ಸಿ. ಸೋಮಶೇಖರ್, ಡಾ. ಶಾಲಿನಿ ರಜನೀಶ್, ಡಾ. ವೂಡೇ ಪಿ. ಕೃಷ್ಣ, ಡಾ.ಎಚ್.ಎಲ್. ಪುಷ್ಪಾ, ಲೀಲಾದೇವಿ ಪ್ರಸಾದ್ ಇದ್ದರು.

3 ಸಾವಿರ ಕೋಟಿ ರೂ. ಮೀಸಲು

ರಾಜ್ಯದಲ್ಲಿ ಶೇ.43 ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ. ಉಳಿದವರು ಇದರಿಂದ ವಂಚಿತರಾಗುತ್ತಿಧ್ದಾರೆ. ಶೇ.30 ಹೆಣ್ಣುಮಕ್ಕಳು ಔದ್ಯೋಗಿಕ ಕ್ಷೇತ್ರಕ್ಕೆ ಬರುತ್ತಾರೆ. ಆದರೆ, ಶೇ.70 ಹೆಣ್ಣುಮಕ್ಕಳು ಗೃಹಿಣಿಯರಾಗಿ ಉಳಿಯುತ್ತಿದ್ದಾರೆ. ಪ್ರಾದೇಶಿಕ ಅಭಿವೃದ್ಧಿ ಅಸಮಾನತೆ ಸರಿದೂಗಿಸಲು ಸರ್ಕಾರ ಇತ್ತೀಚಿಗೆ ಮಂಡನೆಯಾದ ಬಜೆಟ್‌ನಲ್ಲಿ 3 ಸಾವಿರ ಕೋಟಿ ರೂ. ಮೀಸಲಿಟ್ಟಿದೆ ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.

ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶವನ್ನು ಗಡಿನಾಡ ಪ್ರದೇಶದಲ್ಲಿ ಅರ್ಥಪೂರ್ಣವಾಗಿ ಆಚರಿಸಿದರೆ ಅದಕ್ಕೆ ಹೆಚ್ಚು ಮಹತ್ವ ಸಿಗುತ್ತದೆ. ಯಾವುದೇ ಕಾರಣಕ್ಕೂ ಬೆಂಗಳೂರಿನಲ್ಲಿ ಆಯೋಜನೆ ಮಾಡಕೂಡದು. ಬರುವ ವರ್ಷದಲ್ಲಿ ಗಡಿನಾಡ ಪ್ರದೇಶಗಳಲ್ಲೇ ಸಮಾವೇಶವನ್ನು ಏರ್ಪಡಿಸಬೇಕು. ಇದರಿಂದ ಅಲ್ಲಿನ ಸಮಸ್ಯೆಗಳ ಬಗ್ಗೆ ಸಮರ್ಪಕವಾಗಿ ಅರಿಯಲು ಅನುಕೂಲವಾಗುತ್ತದೆ.

। ಡಾ. ಲೀಲಾದೇವಿ ಆರ್. ಪ್ರಸಾದ್ ಮಾಜಿ ಸಚಿವೆ

ವಿಜಯ ಕರ್ನಾಟಕ ರವಿವಾರ, 9 ಏಪ್ರಿಲ್ 2023

ಕೇಂದ್ರ ಗಾಂಧಿ ಸ್ಮಾರಕ ನಿಧಿ ನೂತನ ಟ್ರಸ್ಟಿಯಾಗಿ ವೂಡೆ ಪಿ. ಕೃಷ್ಣ ಆಯ್ಕೆ

• ವಿಕ ಸುದ್ದಿಲೋಕ ಬೆಂಗಳೂರು

ಕೇಂದ್ರ ಗಾಂಧಿ ಸ್ಮಾರಕ ನಿಧಿಯ ನೂತನ ಟ್ರಸ್ಟಿಯನ್ನಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ. ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ.



ಇತ್ತೀಚೆಗೆ ನಡೆದ ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿಗಳ ಮಂಡಳಿಯ ಸಭೆಯಲ್ಲಿ, ವೂಡೆ ಪಿ. ಕೃಷ್ಣ ಅವರನ್ನು ನೂತನ ಟ್ರಸ್ಟಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. 2023ರ ಮಾರ್ಚ್ 30ರಿಂದ 2028ರ ಮಾರ್ಚ್ 31ರವರೆಗೆ (5 ವರ್ಷ) ಈ ಅವಧಿ ಅನ್ವಯವಾಗಲಿದೆ ಎಂದು ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಸಂಜಯ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಗಾಂಧಿ ಸ್ಮಾರಕ ನಿಧಿಯು ದೇಶಾದ್ಯಂತ ಇರುವ 150ಕ್ಕೂ ಹೆಚ್ಚು ಗಾಂಧಿ ಆಶ್ರಮಗಳು ಹಾಗೂ ಕೇಂದ್ರಗಳ ಉಸ್ತುವಾರಿ ನಿರ್ವಹಿಸುತ್ತಿದೆ. ದೇಶದ [illegible] ಹಾಗೂ [illegible] ಯಾಗಿ ಕೇಂದ್ರ ಗಾಂಧಿ ಸ್ಮಾರಕ ನಿಧಿಯನ್ನು ನಿರ್ವಹಿಸುತ್ತಿದ್ದು, ಅವರ ಸಾಲಿನ ಟ್ರಸ್ಟಿಯನ್ನಾಗಿ ನನ್ನನ್ನು ಆಯ್ಕೆ ಮಾಡಿರುವುದಕ್ಕೆ [illegible] ಸಂತಸವಾಗಿದೆ ಎಂದು ವೂಡೆ ಪಿ. ಕೃಷ್ಣ ಹೇಳಿದ್ದಾರೆ.

ಮಕ್ಕಳಲ್ಲಿರುವ ಪ್ರತಿಭಾ ಪೋಷಣೆ ಪಾಲಕರ ಹೊಣೆಗಾರಿಕೆ

ಶಿಕ್ಷಣ ತಜ್ಞ ಡಾ.ವೂಡೇ ಪಿ. ಕೃಷ್ಣ ಅಭಿಮತ | ತಬಲ ಮಾಂತ್ರಿಕ ಆನಿಂದೋ ಚಟರ್ಜಿಗೆ ಗುರುಗೌರವ ಪ್ರಶಸ್ತಿ ಪ್ರದಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕಲೆ ಮನುಷ್ಯನ ಬಾಳಿಗೆ ಹೊಸ ರೂಪ ನೀಡುವ ಅದ್ಭುತ ಶಕ್ತಿ ಹೊಂದಿದೆ. ಹೀಗಾಗಿ ಪಾಲಕರು ತಮ್ಮ ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಿಸುವ ಮೂಲಕ ನಾಡಿಗೆ ಉತ್ತಮ ಕಲಾವಿದರನ್ನು ನೀಡಬೇಕು ಎಂದು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಹೇಳಿದ್ದಾರೆ.

ಪಂಡಿತ್ ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ವತಿಯಿಂದ ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಚೈತ್ರ ಸಂಗೀತೋತ್ಸವ'ದಲ್ಲಿ ಪಶ್ಚಿಮ ಬಂಗಾಳದ ಹಿರಿಯ ತಬಲ ವಾದಕ ಆನಿಂದೋ ಚಟರ್ಜಿ ಅವರಿಗೆ 'ಗುರುಗೌರವ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಕಳೆದ ವರ್ಷ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು ಘೋಷಿಸಿದಾಗ ಅದನ್ನು ತಿರಸ್ಕರಿಸಿದವರು ಚಟರ್ಜಿ. ನಿಜವಾದ ಕಲಾವಿದನಿಗೆ ಮಾತ್ರ ಅಂಥ ಛಾತಿ ಇರುತ್ತದೆ. ಸಕಾಲದಲ್ಲಿ ಸಿಗದ ಗೌರವನ್ನು ಒಲ್ಲೆ ಎಂದ ಆನಿಂದೋ, 'ಹತ್ತು ವರ್ಷ ಮೊದಲೇ ಈ ಪ್ರಶಸ್ತಿ ಬಂದಿದ್ದರೆ ಸ್ವೀಕರಿಸುತ್ತಿದ್ದೆ' ಎಂದು ಸಮಜಾಯಿಷಿ ನೀಡಿದ್ದರು. ಇದು ಸರ್ಕಾರಕ್ಕೆ ಉತ್ತಮ ಸಂದೇಶ ರವಾನಿಸಿತು ಎಂದರು. ಹಿರಿಯ ಸಾಹಿತಿ ಡಾ.ಎಚ್.ಎಸ್. ವೆಂಕಟೇಶಮೂರ್ತಿ ಮಾತನಾಡಿ, ತಮ್ಮ ಗುರು ಪಂಡಿತ್ ಬಸವರಾಜ ಬೆಂಡಿಗೇರಿ ಸ್ಮರಣಾರ್ಥ ತಬಲ ವಾದಕ ಪಂಡಿತ್ ಸತೀಶ್ ಹಂಪಿಹೊಳಿ ಈ ಕಾರ್ಯಕ್ರಮ ಆಯೋಜಿಸಿದ್ದಾರೆ. ದೂರದ ಬಂಗಾಳದಿಂದ ಇಂತಹ ಅದ್ಭುತ ಕಲಾವಿದರನ್ನು ಕರೆಸಿ, ಕನ್ನಡದ ಕಲಾರಸಿಕರ ಪರವಾಗಿ ಅವರನ್ನು ಸನ್ಮಾನಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಂತಿ ಸ್ವೀಟ್ಸ್ ಮಾಲೀಕರಾದ ಉಷಾ ಶರ್ಮ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ಪಂಡಿತ್ ಆನಿಂದೋ ಚಟರ್ಜಿ ತಬಲ ವಾದನ ಪ್ರಸ್ತುತಪಡಿಸಿದರು. ಅವರಿಗೆ ಸತೀಶ್ ಕೊಳ್ಳಿ (ಲೆಹೆರಾ) ಸಾಥ್ ನೀಡಿದರು. ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್‌ನ ಕಲಾವಿದರು ಸಂಗೀತ- ನೃತ್ಯ ನಡೆಸಿಕೊಟ್ಟರು.



ವಿಜಯವಾಣಿ

'ಚೈತ್ರ ಸಂಗೀತೋತ್ಸವ'ದಲ್ಲಿ ಪಶ್ಚಿಮ ಬಂಗಾಳದ ಹಿರಿಯ ತಬಲ ವಾದಕ ಆನಿಂದೋ ಚಟರ್ಜಿ ಅವರಿಗೆ 'ಗುರುಗೌರವ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಡಾ.ವೂಡೇ ಪಿ. ಕೃಷ್ಣ, ಡಾ. ಮನು ಬಳಿಗಾರ್, ಸತೀಶ್ ಹಂಪಿಹೊಳಿ ಮತ್ತಿತರರಿದ್ದರು.

ಭಾರತರತ್ನ ಗೌರವ ತಿರಸ್ಕರಿಸಬೇಡಿ..

ಶ್ರೇಷ್ಠ ಕಲಾವಿದರಿಗೆ ಭಾಷೆಯ ಗಡಿ ಇರುವುದಿಲ್ಲ. ಪಶ್ಚಿಮ ಬಂಗಾಳದ ಆನಿಂದೋ ಚಟರ್ಜಿ ಅವರಿಗೆ ಕರ್ನಾಟಕದಲ್ಲಿ ಗೌರವ ಅರಸಿಬಂದಿರುವುದೇ ಈ ಮಾತಿಗೆ ಸಾಕ್ಷಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಮನು ಬಳಿಗಾರ್ ಹೇಳಿದರು. 'ಮುಂದೊಂದು ದಿನ ನಿಮಗೆ ಭಾರತರತ್ನ ಗೌರವ ಹುಡುಕಿಕೊಂಡು ಬರುವ ಸಾಧ್ಯತೆ ಇದೆ. ಆಗ ದಯವಿಟ್ಟು ಅದನ್ನು ತಿರಸ್ಕರಿಸಬೇಡಿ' ಎಂದು ಚಟರ್ಜಿ ಅವರಿಗೆ ಮನವಿ ಮಾಡಿದರು.

ವಿಜಯವಾಣಿ ನಂ 1

Apr 8, 2023

ಕೇಂದ್ರ ಗಾಂಧಿ ಸ್ಮಾರಕ ನಿಧಿಗೆ ಟ್ರಸ್ಟಿ ನೇಮಕ



ವೂಡೇ ಪಿ. ಕೃಷ್ಣ

ಬೆಂಗಳೂರು: ದೆಹಲಿಯಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರುವ ಗಾಂಧಿ ಸ್ಮಾರಕ ನಿಧಿಯ ರಾಷ್ಟ್ರೀಯ ಟ್ರಸ್ಟಿ ಆಗಿ ಕರ್ನಾಟಕದ ವೂಡೇ ಪಿ. ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಇತ್ತೀಚಿಗೆ ದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೃಷ್ಣ ಅವರ ಆಯ್ಕೆಯನ್ನು ಅನುಮೋದಿಸಲಾಗಿದೆ. ಇವರ ಅವಧಿ 2023ರಿಂದ 2028ರವರೆಗೆ ಇರಲಿದೆ ಎಂದು ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಸಂಜಯ್ ಸಿಂಗ್ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

Apr 8, 2023

ಜಿಲ್ಲಾ ಸುದ್ದಿ

ಕೇಂದ್ರ ಗಾಂಧಿ ಸ್ಮಾರಕ ನಿಧಿಗೆ ಧರ್ಮದರ್ಶಿಯಾಗಿ ನೇಮಕ

ಬೆಂಗಳೂರು: ನವದೆಹಲಿಯಲ್ಲಿ ಕೇಂದ್ರಸ್ಥಾನ ಹೊಂದಿರುವ ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಧರ್ಮದರ್ಶಿಯಾಗಿ (ಟ್ರಸ್ಟಿ) ಡಾ.ವೂಡೆ ಪಿ.ಕೃಷ್ಣ ಅವರನ್ನು ಮುಂದಿನ ಐದು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ. ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಆಡಳಿತ ಮಂಡಳಿಯ ವಿಶೇಷ ಸಭೆಯಲ್ಲಿ ನಿರ್ಧರಿಸಿದ್ದು 2028ರ ಮಾರ್ಚ್ 26ರವರೆಗೆ ಈ ನೇಮಕಾತಿ ಅನ್ವಯವಾಗಲಿದೆ ಎಂದು ನಿಧಿಯ ಕಾರ್ಯದರ್ಶಿ ಸಂಜಯ್ ಸಿಂಘಾ ತಿಳಿಸಿದ್ದಾರೆ. ವೂಡೆ ಪಿ ಕೃಷ್ಣ ಅವರು ಪ್ರಸ್ತುತ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಕನ್ನಡಪ್ರಭ
ಭಾನುವಾರ 19.3.2023

‘ಗಡಿ ಕನ್ನಡಿಗರ ಅಸ್ಮಿತೆ ಕಾಪಾಡಲು ಬದ್ಧ’

ಗಡಿನಾಡು ಪ್ರದೇಶ ಲೇಖಕಿಯರ ಸಮಾವೇಶ ಉದ್ಘಾಟಿಸಿದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಭರವಸೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗಡಿ ಕನ್ನಡಿಗರ ಅಸ್ಮಿತೆ ಕಾಪಾಡಲು ಸರ್ಕಾರ ಬದ್ಧವಾಗಿದ್ದು, ಅನ್ಯ ಭಾಷಿಕರ ಜತೆ ಸಂಘರ್ಷವಿಲ್ಲದೆ ಸಾಮರಸ್ಯದಿಂದ ಸಾಗಬೇಕು ಎಂದು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ ಹೇಳಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಶೇಷಾದ್ರಿಪುರ ಕನ್ನಡ ಸಂಘ ಶನಿವಾರ ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ ‘ಗಡಿನಾಡು ಪ್ರದೇಶ ಲೇಖಕಿಯರ ಸಮಾವೇಶ’ ಉದ್ಘಾಟಿಸಿ ಮಾತನಾಡಿದ ಅವರು, ಗಡಿನಾಡ ಕನ್ನಡಿಗರ ಸಮಸ್ಯೆ ಆಲಿಸಿ ಪರಿಹರಿಸಲು ಎಲ್ಲ ಜಿಲ್ಲಾಧಿಕಾರಿಗಳು ಗಡಿ ಗ್ರಾಮಗಳಿಗೆ ತೆರಳುವಂತೆ ಸೂಚಿಸಲಾಗಿದೆ ಎಂದರು.

ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಗಡಿಭಾಗದ 500 ಶಾಲೆಗಳಿಗೆ ತಲಾ ₹ 1ಲಕ್ಷ ನೀಡಲಾಗಿದೆ. ಕಾಸರಗೋಡಿನಲ್ಲಿ ₹ 2 ಕೋಟಿ ವೆಚ್ಚದಲ್ಲಿ ಕನ್ನಡಭವನ ಶಿಲಾನ್ಯಾಸ ಮಾಡಲಾಗಿದೆ. ಆ ಭಾಗದ ಶಿಕ್ಷಕಿಯರು ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕಿದೆ ಎಂದರು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಸಿ. ಸೋಮಶೇಖರ ಅವರು ನಗರದಲ್ಲಿ ಶನಿವಾರ ‘ಗಡಿನಾಡು ಪ್ರದೇಶ ಲೇಖಕಿಯರ ಸಮಾವೇಶ’ ಉದ್ಘಾಟಿಸಿದರು. ಮಾಜಿ ಸಚಿವೆ ಡಾ. ಲೀಲಾದೇವಿ ಆರ್. ಪ್ರಸಾದ್, ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಎಚ್.ಎಲ್.ಪುಷ್ಪಾ, ಹೇಮಲತಾ ಮಹಿಷಿ ಸೇರಿ ಇತರರಿದ್ದರು.

ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಹೇಮಲತಾ ಮಹಿಷಿ ಮಾತನಾಡಿ, ಗಡಿಯಲ್ಲಿ ನೆಲ, ಜಲ, ಭಾಷೆ ಸಮಸ್ಯೆ ಜೊತೆಗೆ ಮೂಲಭೂತ ಸೌಕರ್ಯ, ವಲಸೆ ಸೇರಿ ಸಾಕಷ್ಟು ಸಮಸ್ಯೆಗಳಿವೆ. ಅಲ್ಲಿನ ರಸ್ತೆ, ನೀರು, ಆರೋಗ್ಯ, ಶಿಕ್ಷಣದ ಬಗ್ಗೆ ಒತ್ತು ನೀಡಿ ವಲಸೆಯನ್ನು ತಡೆಯಬೇಕು ಎಂದರು.

ಮಾಜಿ ಸಚಿವೆ ಡಾ. ಲೀಲಾದೇವಿ ಆರ್. ಪ್ರಸಾದ್ ಮಾತನಾಡಿ, ಗಡಿನಾಡಿನಲ್ಲೇ ಲೇಖಕಿಯರ ಸಮ್ಮೇಳನವನ್ನು ಮಾಡಬೇಕು. ಅಲ್ಲಿನ ಸಮಸ್ಯೆಗಳು ಅದೇ ಪರಿಸರದಲ್ಲಿ ಚರ್ಚೆಯಾಗಬೇಕು. ಸಮಾವೇಶದಲ್ಲಿ ಚರ್ಚೆ ಯಾಗುವ ವಿಚಾರ, ಕೈಗೊಳ್ಳುವ ನಿರ್ಧಾರಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು ಎಂದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಎಚ್.ಎಲ್.ಪುಷ್ಪಾ, ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಮಾತನಾಡಿದರು.

ಪ್ರಜಾವಾಣಿ
ಭಾನುವಾರ • ಮಾರ್ಚ್ 19, 2023

ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಮತ

‘ಸ್ತ್ರೀಯರ ಪ್ರಗತಿಗೆ ಸಮುದಾಯ ಕಿಚನ್ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆಯಲ್ಲಿ ಕುಟುಂಬದ ಸದಸ್ಯರ ಆರೈಕೆ, ಅಡುಗೆ ಸೇರಿ ವಿವಿಧ ಕೆಲಸಗಳಿಂದ ಮಹಿಳೆಯರು ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿ ಹೊಂದಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಥಾಯ್ಲೆಂಡ್ ಮಾದರಿಯಲ್ಲಿ ಇಲ್ಲಿಯೂ ಸಮುದಾಯ ಅಡುಗೆಮನೆಗಳನ್ನು ನಿರ್ಮಿಸಬೇಕಾದ ಅಗತ್ಯತೆ ಇದೆ’ ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕ ಲೇಖಕಿಯರ ಸಂಘವು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಶೇಷಾದ್ರಿಪುರಂ ಕಾಲೇಜು ಸಹಯೋಗದಲ್ಲಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶದಲ್ಲಿ ಭಾಗವಹಿಸಿ, ಮಾತನಾಡಿದರು.

‘ಥಾಯ್ಲೆಂಡ್‌ನಲ್ಲಿ ಎಲ್ಲೆಡೆ ಸಮುದಾಯ ಅಡುಗೆಮನೆಗಳನ್ನು ನಿರ್ಮಿಸಲಾಗಿದೆ. ಅಲ್ಲಿನ ಮನೆಗಳಲ್ಲಿ ಅಡುಗೆಕೋಣೆಗೆ ಅಷ್ಟಾಗಿ ಆದ್ಯತೆ ನೀಡುವುದಿಲ್ಲ. ಹೊರಗಡೆಯೇ ಆಹಾರ ಸೇವಿಸುತ್ತಾರೆ. ಇದರಿಂದಾಗಿ ಅಲ್ಲಿಯ ಮಹಿಳೆಯರು ಔದ್ಯೋಗಿಕ ಕ್ಷೇತ್ರದಲ್ಲಿ ಶೇ 100ರಷ್ಟು ಪ್ರಗತಿ ಹೊಂದಿದ್ದಾರೆ. ಅದೇ ನಮ್ಮಲ್ಲಿ ಈ ಪ್ರಮಾಣ ಶೇ 30ರಷ್ಟಿದೆ. ಹೆಚ್ಚಿನ ಸಮಯವನ್ನು ಅಡುಗೆಮನೆಗಳಲ್ಲಿ ಕಳೆಯಬೇಕಾಗಿರುವುದೇ ಇದಕ್ಕೆ ಮುಖ್ಯ ಕಾರಣ. ಸಮುದಾಯ ಅಡುಗೆಮನೆಗಳ ನಿರ್ಮಾಣದಿಂದ ಸಾಮಾಜಿಕ ಬದಲಾವಣೆ ಸಾಧ್ಯ’ ಎಂದು ಹೇಳಿದರು.

‘ರಾಜ್ಯದಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ 65ಕ್ಕೆ ತಲುಪಿದೆ. ಲಿಂಗಾನುಪಾತವೂ ಪುರುಷರಿಗೆ ಸಮಾನವಾಗಿ ಇದೆ. ಶೇ 43ರಷ್ಟು ಹೆಣ್ಣು ಮಕ್ಕಳು ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ. ಔದ್ಯೋಗಿಕ ಕ್ಷೇತ್ರಕ್ಕೆ ಶೇ 30ರಷ್ಟು ಹೆಣ್ಣು ಮಕ್ಕಳು ಹೋಗುತ್ತಿದ್ದಾರೆ. ಇನ್ನುಳಿದ ಶೇ 70ರಷ್ಟು ಹೆಣ್ಣು ಮಕ್ಕಳು ಮನೆಗಳಲ್ಲಿ ವಿವಿಧ ಕೆಲಸ ಮಾಡುತ್ತಿದ್ದಾರೆ. ಅವರ ಕೆಲಸದ ಮೌಲ್ಯ ಎಷ್ಟು ಎಂದು ಲೆಕ್ಕ ಹಾಕುತ್ತಿಲ್ಲ. ಅಮೆರಿಕದಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರ ವೇತನ ಬಹುರಾಷ್ಟ್ರೀಯ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಮ. ಗೃಹಿಣಿಯರ ವೇತನವನ್ನು ಲೆಕ್ಕ ಹಾಕಿದರೆ ನಮ್ಮ ರಾಷ್ಟ್ರೀಯ ಉತ್ಪನ್ನ ಶೇ 27ರಷ್ಟು ಹೆಚ್ಚಳ ಆಗುತ್ತದೆ’ ಎಂದು ತಿಳಿಸಿದರು.



ಗಡಿನಾಡ ಪ್ರದೇಶದ ಲೇಖಕಿಯರ ಸಮಾವೇಶದಲ್ಲಿ (ಎಡದಿಂದ) ಲೀಲಾದೇವಿ ಆರ್. ಪ್ರಸಾದ್ ಹಾಗೂ ಶಾಲಿನಿ ರಜನೀಶ್ ಉಭಯ ಕುಶಲೋಪರಿ ವಿಚಾರಿಸಿಕೊಂಡರು. ಸಿ. ಸೋಮಶೇಖರ್, ವಕೀಲರಾದ ಹೇಮಲತಾ ಮಹಿಷಿ ಮತ್ತು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಇದ್ದಾರೆ – ಪ್ರಜಾವಾಣಿ ಚಿತ್ರ

ಸಿಗದ ಆದ್ಯತೆ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಿ. ಸೋಮಶೇಖರ, ‘ಈವರೆಗೆ ನಡೆದಿರುವ 86 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ನಾಲ್ವರು ಮಹಿಳೆಯರಿಗೆ ಮಾತ್ರ ಸಮ್ಮೇಳನಾಧ್ಯಕ್ಷತೆ ದೊರೆತಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮಹಿಳಾ ಸಾಧಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರನ್ನು ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಬೇಕು. ಗಡಿಭಾಗದ ಮಹಿಳೆಯರು ಮಕ್ಕಳಲ್ಲಿ ಕನ್ನಡದ ಪ್ರೀತಿ, ಅಭಿಮಾನವನ್ನು ಹೆಚ್ಚಿಸಬೇಕು’ ಎಂದು ಹೇಳಿದರು.

ಬಳಿಕ ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ನಡೆಯಿತು.

ಬೆಂಗಳೂರಿನಲ್ಲಿ ಸಮ್ಮೇಳನ ಹುಚ್ಚುತನ: ಲೀಲಾದೇವಿ ಆರ್. ಪ್ರಸಾದ್

‘ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶವನ್ನು ಬೆಂಗಳೂರಿನಲ್ಲಿ ಮಾಡುವುದು ಹುಚ್ಚುತನ. ಅಲ್ಲಿನ ಸಮಸ್ಯೆಗಳನ್ನು ಅರಿಯಲು ಮುಂದಿನ ಸಮ್ಮೇಳನವನ್ನಾದರೂ ಆ ಭಾಗದಲ್ಲಿ ಮಾಡಬೇಕು. ಬೆಂಗಳೂರಿಗೆ ಸಂಬಂಧಿಸಿದ ವಿಷಯದ ಬಗ್ಗೆ ಗಡಿನಾಡಿನಲ್ಲಿ, ಗಡಿನಾಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಬೆಂಗಳೂರಿನಲ್ಲಿ ಚರ್ಚಿಸುವುದು ಸೂಕ್ತವಲ್ಲ’ ಎಂದು ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಹೇಳಿದರು.

‘ಮಹಿಳಾ ಬರಹಗಾರರ ಹಿತದೃಷ್ಟಿಯಿಂದ ಸಂಘವನ್ನು ಸ್ಥಾಪಿಸಲಾಯಿತು. ಆದರೆ, ಈಗ ಮಹಿಳೆಯರು ಸಂಘದ ವಿಚಾರವಾಗಿ ಕೋರ್ಟ್‌ಗೆ ಹೋಗಿರುವುದು ಬೇಸರವನ್ನುಂಟು ಮಾಡಿದೆ. ಅಷ್ಟಕ್ಕೂ ಸಂಘದಲ್ಲಿ ಆಸ್ತಿ ಇದೆಯಾ’ ಎಂದು ಪ್ರಶ್ನಿಸಿದರು.

> ಗಡಿ ಕನ್ನಡಿಗರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿಗತಿ ಸುಧಾರಿಸಲು ವಿಶೇಷ ಆದ್ಯತೆ ನೀಡಿದೆ. ಸಂಸ್ಕೃತಿ ಬೆಳೆಸದೆ ಬದುಕನ್ನು ಬೆಳಗಿಸಲು ಸಾಧ್ಯವಿಲ್ಲ.
>
> **ಸಿ. ಸೋಮಶೇಖರ,** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ

ಸಂಯುಕ್ತ ಕರ್ನಾಟಕ

ಭಾನುವಾರ, 19, ಮಾರ್ಚ್, 2023
ಬೆಂಗಳೂರು | BENGALURU

ಗಡಿ ಕನ್ನಡ ಶಾಲೆಗಳ ಅಭಿವೃದ್ಧಿಗೆ ನೆರವು

ಸಂ.ಕ.ಸಮಾಚಾರ, ಬೆಂಗಳೂರು

ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಗಡಿಭಾಗದ 500 ಕನ್ನಡ ಶಾಲೆಗಳಿಗೆ ತಲಾ 1 ಲಕ್ಷ ರೂ. ನೀಡಲಾಗಿದೆ ಎಂದು ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಶನಿವಾರ ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಶೇಷಾದ್ರಿಪುರ ಕನ್ನಡ ಸಂಘ ಏರ್ಪಡಿಸಿದ್ದ ಗಡಿನಾಡು ಪ್ರದೇಶ ಲೇಖಕಿಯರ ಸಮಾವೇಶ' ಉದ್ಘಾಟಿಸಿ ಮಾತನಾಡಿದರು. ಕಾಸರಗೋಡಿನಲ್ಲಿ 2 ಕೋಟಿ ವೆಚ್ಚದಲ್ಲಿ ಕನ್ನಡ ಭವನ ಶಿಲಾನ್ಯಾಸ ಮಾಡಲಾಗಿದೆ. ಆ ಭಾಗದ ಶಿಕ್ಷಕಿಯರು ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕಿದೆ. ಗಡಿ ಕನ್ನಡಿಗರ ಅಸ್ಮಿತೆ ಕಾಪಾಡಲು ಪ್ರಾಧಿಕಾರ ಬದ್ಧವಾಗಿದೆ. ಅನ್ಯಭಾಷಿಕರ ಜತೆ ಸಂಘರ್ಷವಿಲ್ಲದೆ ಸಾಮರಸ್ಯದಿಂದ ಸಾಗಬೇಕು. ಗಡಿನಾಡ ಕನ್ನಡಿಗರ ಸಮಸ್ಯೆ ಆಲಿಸಿ ಪರಿಹರಿಸಲು ಎಲ್ಲ ಜಿಲ್ಲಾಧಿಕಾರಿಗಳು ಗಡಿ ಗ್ರಾಮಗಳಿಗೆ ತೆರಳುವಂತೆ ಸೂಚಿಸಲಾಗಿದೆ ಎಂದರು.



ಗಡಿನಾಡು ಪ್ರದೇಶ ಲೇಖಕಿಯರ ಸಮಾವೇಶವನ್ನು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಉದ್ಘಾಟಿಸಿದರು.

ಇಂತಹ ಸಮಾವೇಶವನ್ನು ಗಡಿನಾಡ ಪ್ರದೇಶದಲ್ಲಿ ಅರ್ಥಪೂರ್ಣವಾಗಿ ಆಚರಿಸಿದರೆ ಅದಕ್ಕೆ ಹೆಚ್ಚು ಮಹತ್ವ ಸಿಗುತ್ತದೆ. ಯಾವುದೇ ಕಾರಣಕ್ಕೂ ಬೆಂಗಳೂರಿನಲ್ಲಿ ಆಯೋಜನೆ ಮಾಡಕೂಡದು. ಬರುವ ವರ್ಷದಲ್ಲಿ ಗಡಿನಾಡ ಪ್ರದೇಶಗಳಲ್ಲೇ ಸಮಾವೇಶವನ್ನು ಏರ್ಪಡಿಸಬೇಕು. ಇದರಿಂದ ಅಲ್ಲಿನ ಸಮಸ್ಯೆಗಳ ಬಗ್ಗೆ ಸಮರ್ಪಕವಾಗಿ ಅರಿಯಲು ಅನುಕೂಲವಾಗುತ್ತದೆ.

ಡಾ.ಲೀಲಾದೇವಿ ಆರ್. ಪ್ರಸಾದ್ | ಮಾಜಿ ಸಚಿವೆ

ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಹೇಮಲತಾ ಮಹಿಷಿ ಮಾತನಾಡಿ, ಗಡಿಯಲ್ಲಿ ಪುರುಷ ಹಾಗೂ ಮಹಿಳೆಯರು ಎದುರಿಸುವ ಸಮಸ್ಯೆ ಒಂದೇ ಆದರೂ ಮಹಿಳೆಯರೆ ಹೆಚ್ಚಾಗಿ ಅವುಗಳ ಪರಿಣಾಮ ಎದುರಿಸುತ್ತಿದ್ದಾರೆ. ನೆಲ, ಜಲ, ಭಾಷೆ ಸಮಸ್ಯೆ ಜತೆಗೆ ಮೂಲ ಸೌಕರ್ಯ, ವಲಸೆ ಸೇರಿ ಸಾಕಷ್ಟು ಸಮಸ್ಯೆಗಳಿವೆ. ಅಲ್ಲಿನ ರಸ್ತೆ, ನೀರು, ಆರೋಗ್ಯ, ಶಿಕ್ಷಣದ ಬಗ್ಗೆ ಒತ್ತು ನೀಡಿ ವಲಸೆಯನ್ನು ತಡೆಯಬೇಕೆಂದು ತಿಳಿಸಿದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ, ಐಎಎಸ್ ಅಧಿಕಾರಿ ಡಾ. ಶಾಲಿನಿ ರಜನೀಶ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಮತ್ತಿತರರಿದ್ದರು.

ಪ್ರಜಾವಾಣಿ | ಶನಿವಾರ ◦ ಮಾರ್ಚ್ 18, 2023

ಇಂದು ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕ ಲೇಖಕಿಯರ ಸಂಘವು ಶೇಷಾದ್ರಿಪುರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶ, ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಹಮ್ಮಿಕೊಂಡಿದೆ.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಉದ್ಘಾಟಿಸಲಿದ್ದಾರೆ.



ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಆಶಯ ಭಾಷಣ ಮಾಡಲಿದ್ದಾರೆ. ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಉಪಸ್ಥಿತರಿರಲಿದ್ದಾರೆ.

'ಗಡಿನಾಡ ಸಾಹಿತ್ಯ ಹಾಗೂ ಭಾಷಾ ಬಾಂಧವ್ಯ' ಎಂಬ ಶೀರ್ಷಿಕೆಯಡಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ವಿಮರ್ಶಕಿ ಎಂ.ಎಸ್. ಆಶಾದೇವಿ ಅಧ್ಯಕ್ಷತೆ ವಹಿಸಲಿದ್ದಾರೆ. 'ಶಿಕ್ಷಣ ಕ್ಷೇತ್ರದಲ್ಲಿ ಭಾಷಾ ಬೋಧನೆ' ವಿಷಯದ ಬಗ್ಗೆ ಪ್ರಾಧ್ಯಾಪಕಿ ಮೈತ್ರೇಯಿಣಿ ಗದಿಗೆಪ್ಪಗೌಡರ, 'ಭಾಷಾ ಬಾಂಧವ್ಯದ ಶಕ್ತಿ ಹಾಗೂ ಸವಾಲುಗಳು' ವಿಷಯದ ಬಗ್ಗೆ ಲೇಖಕಿ ವೆಂಕಮ್ಮ ಎಮ್.ಡಿ., 'ಗಡಿನಾಡಿನ ಸಾಹಿತ್ಯ ಮತ್ತು ರಂಗಭೂಮಿ' ವಿಷಯದ ಬಗ್ಗೆ ಪ್ರಾಧ್ಯಾಪಕಿ ಸುಜಾತಾ ಜಂಗಮಶೆಟ್ಟಿ ಹಾಗೂ 'ಗಡಿನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘಟನೆಗಳು' ವಿಷಯದ ಬಗ್ಗೆ ನಿವೃತ್ತ ಪ್ರಾಧ್ಯಾಪಕಿ ಜಯಲಕ್ಷ್ಮೀ ಕಾರಂತ ಮಾತನಾಡಲಿದ್ದಾರೆ.

ಕವಯಿತ್ರಿ ಸುಕನ್ಯಾ ಮಾರುತಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ದೂರದರ್ಶನ ಕೇಂದ್ರದ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ನಿರ್ಮಲಾ ಸಿ. ಎಲಿಗಾರ ಅವರು ಆಶಯ ನುಡಿಯಾಡಲಿದ್ದಾರೆ. ಕವಯಿತ್ರಿಯರಾದ ಜ್ಯೋತಿ ಬದಾಮಿ, ವಸುಂಧರಾ ಕದಲೂರು, ಮಧುಪಾಂಡೆ ಮಾನ್ವಿ, ಸುಮಾ ಆನಂದರಾವ್, ಗೀತಾ ಡಿ.ಸಿ., ಅಸೀಫಾ ಬೇಗಂ, ದೀಪದಮಲ್ಲಿ, ಅಂಜಲಿ ಬೆಳಗಲ್, ಸೌಮ್ಯಾ ಕೆ.ಆರ್., ಚೈತ್ರ ಶಿವಯೋಗಿಮಠ, ಮಂಜುಳಾ ಎನ್. ಸರ್ಜಾಪುರ ಹಾಗೂ ಸೌಮ್ಯಾ ಪ್ರವೀಣ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Mar 18, 2023



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಗಡಿನಾಡು ಪ್ರದೇಶದ ಲೇಖಕಿಯರ ಸಮಾವೇಶ, ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ, ಡಾ.ಸಿ.ಸೋಮಶೇಖರ್, ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್, ನಾಡೋಜ ಡಾ.ವೂಡೆ ಪಿ.ಕೃಷ್ಣ, ಹೇಮಲತಾ ಮಹಿಷಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಜನನಿಯ ಸಾರಥಿ
ವಾರ್ತಾ ಭಾರತಿ

Mar [illegible] 2023

ಶ್ರೇಷ್ಠತೆಯ ಸೊಕ್ಕು ಅಪಾಯಕಾರಿ: ಡಾ. ಬರಗೂರು ರಾಮಚಂದ್ರಪ್ಪ

ಕಾ.ತ.ಚಿಕ್ಕಣ್ಣಗೆ 'ಅತ್ಯುತ್ತಮ ಕಾದಂಬರಿ ಪ್ರಶಸ್ತಿ' ಪ್ರದಾನ



ಬೆಂಗಳೂರು, ಮಾ.15: ಸಾಹಿತ್ಯ ಕ್ಷೇತ್ರದಲ್ಲಿ ಕಟು ವಿಮರ್ಶೆ ಪ್ರತಿಭಾ ಭ್ರೂಣಹತ್ಯೆಗೆ ಕಾರಣವಾಗಬಾರದು. ಹೊಸಬರಿಗೆ ಮುಕ್ತವಾಗಿ ಬರೆಯುವ ವಾತಾವರಣವನ್ನು ಕಲ್ಪಿಸಬೇಕು ಎಂದು ಹಿರಿಯ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರದ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ವತಿಯಿಂದ ನಡೆದ 2022ರ ಅತ್ಯುತ್ತಮ ಕಾದಂಬರಿ ಸ್ಪರ್ಧೆಯಲ್ಲಿ ವಿಜೇತರಾದ 'ಪ್ರದಾನಕನ್ಯೆ' ಕಾದಂಬರಿಯ ಕರ್ತೃ ಕಾ.ತ.ಚಿಕ್ಕಣ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಎಲ್ಲ ಕ್ಷೇತ್ರಗಳಲ್ಲಿ ಶ್ರೇಷ್ಠತೆಯ ಸೊಕ್ಕು ಅಪಾಯಕಾರಿಯಾಗಿದ್ದು, ಶ್ರೇಷ್ಠತೆಯ ರೋಧ ಆರೋಗ್ಯಕರವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾ.ತ.ಚಿಕ್ಕಣ್ಣ ಲೇಖಕರಾಗಿ ಹಾಗೂ ಆಡಳಿತಗಾರರಾಗಿ ಪ್ರಬುದ್ಧರು, ನನ್ನ ಗೆಳೆಯರೂ ಆದ ಈ ಪ್ರತಿಭಾವಂತರಿಗೆ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಏರ್ಪಡಿಸಿದ್ದ ಕಾದಂಬರಿ ಸ್ಪರ್ಧೆಯಲ್ಲಿ ಪಟ್ಟ ಮೊದಲ ಸಾಲಿನ ಪ್ರಶಸ್ತಿ ಲಭಿಸಿರುವುದು ನನಗೆ ಅತ್ಯಂತ ಸಂತಸ ತಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿ ವೈವಿಧ್ಯಮಯ ಪ್ರಕಾರ, ಓದುಗರ ಜೊತೆಗಾರ ಎಂದು ಗುರುತಿಸಿಕೊಂಡಿದೆ ಎಂದು ಹೇಳಿದರು.

ಸಾರ್ವಕಾಲಿಕ ಶ್ರೇಷ್ಠವಾದ ಎರಡು ಕಾದಂಬರಿಗಳು ಹಾಗೂ ಇತರ ಪ್ರಾಕಾರಗಳಲ್ಲಿ ಅತ್ಯುತ್ತಮ ಕೃತಿಗಳನ್ನು ರಚಿಸಿದ ಕುವೆಂಪು ಅವರನ್ನು ಪೂರ್ವಾಗ್ರಹ ಪೀಡಿತ ವಿಮರ್ಶಕರು ಅವರು ಕವಿಯೇ ಅಲ್ಲ ಎಂದು ಗೇಲಿ ಮಾಡುತ್ತಿದ್ದರು. ಅವರಿಗೆ ಪ್ರಶಸ್ತಿಯ ಮೇಲೆ ಪ್ರಶಸ್ತಿಗಳು ಬಂದಾಗ, ಇದೇ ವಿಮರ್ಶಕರು ಹೊಗಳಲು ಪ್ರಾರಂಭಿಸಿದರು ಎಂದು ಅವರು ತಿಳಿಸಿದರು.

ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಮಹಾತ್ಮಾಗಾಂಧೀಜಿಯವರ ಕಲ್ಪನೆಯ ಸಮಾಜ ನಿರ್ಮಾಣ ಆಗಬೇಕಾಗಿದೆ. ಅದಕ್ಕಾಗಿ ಸಾಹಿತಿಗಳೆಲ್ಲರೂ ತಮ್ಮ ಬರವಣಿಗೆಯ ಮೂಲಕ ಶ್ರಮಿಸಬೇಕಾಗಿದೆ ಎಂದು ಕರೆ ನೀಡಿದರು.

ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಮಾತನಾಡಿ, ಮಹಿಳೆಯರ ಗೌರವಾರ್ಥವಾಗಿ ಪ್ರತಿಷ್ಠಾನ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದರಲ್ಲದೆ ಇತ್ತೀಚೆಗೆ ಮಹಿಳೆಯರ ಬಗ್ಗೆ ಕೆಟ್ಟದಾಗಿ ನಡೆದುಕೊಂಡಿರುವ ಕ.ಸಾ.ಪ. ಅಧ್ಯಕ್ಷ ಹಾಗೂ ಕೋಲಾರ ಲೋಕಸಭಾ ಸದಸ್ಯರ ವರ್ತನೆಯನ್ನು ಕಟು ಶಬ್ದಗಳಲ್ಲಿ ಖಂಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಚ.ಹ.ರಘುನಾಥ್, 'ಪ್ರತಿಷ್ಠಾನದ ಕಾರ್ಯದರ್ಶಿ ಇ. ಬಸವರಾಜು, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪಾ, ಪ್ರತಿಷ್ಠಾನದ ಸದಸ್ಯರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಿ.ಬಿ.ರಾಮಯ್ಯ, ಕೆ.ಅಶೋಕ್, ಎಂ.ತಿಪ್ಪಯ್ಯ ಮತ್ತು ಬಿ.ಸಿ. ರಾಘವೇಂದ್ರ, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ನೋಟಕಾರ್ ಸತೀಶ್, ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯ, ಸಿದ್ಧಲಿಂಗಯ್ಯ ಬನ್ನಂಗಾಡಿ, ಡಾ. ಸತ್ಯಮಂಗಲ ಮಹದೇವ್, ಡಾ. ರಾಜಶೇಖರ ಹತಗುಂದಿ, ಕುವರ ಯಲ್ಲಪ್ಪ, ಡಾ. ಸಂತೋಷ ಹಾನಗಲ್, ವೀರಸಂಗಯ್ಯ, ವ.ಚ.ಚನ್ನೇಗೌಡ, ರಾಣಿ ಗೋವಿಂದರಾಜು, ಡಿ.ಎನ್. ಹರಿದಾಸ್, ಎನ್.ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾ ಪ್ರಗತಿ

Mar 16, 2023

ಸಾಹಿತ್ಯಕ್ಕೆ ಓದುಗ, ಸಂಗೀತಕ್ಕೆ ಕೇಳುಗ ಸಿನಿಮಾಕ್ಕೆ ನೋಡುಗ ಮುಖ್ಯ

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ



■ ಪ್ರಜಾಪ್ರಗತಿ.ಕಾಂ

ಶ್ರೇಷ್ಠ ಸಾಹಿತ್ಯವೂ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸೊಕ್ಕಾಗಬಾರದು, ಶೋಧವಾಗಬೇಕು. ಸೊಕ್ಕು ಅಪಾಯಕರ, ಶೋಧ, ಆರೋಗ್ಯಕರ ಹೆಚ್ಚಿನ ಅಕ್ಷರ ಜ್ಞಾನವಿಲ್ಲದವರ ಸಾಹಿತ್ಯ ಕೃತಿಗಳಿಗೆ ಮುನ್ನುಡಿ ಬರೆದಿದ್ದೇನೆಂಬುದು ನನಗೆ ಹೆಮ್ಮೆ. ಬರೆದದ್ದು ಪ್ರಕಟವಾಗದೆ ಹೋದರೆ ಅದು ಶ್ರೇಷ್ಠವೋ, ಕನಿಷ್ಠವೋ, ಹೇಗೆ ತಿಳಿಯುತ್ತದೆ? ಕಟು ವಿಮರ್ಶೆಗಳಿಂದ ಪ್ರತಿಭಾ ಭ್ರೂಣಹತ್ಯೆ ಸಲ್ಲದು, ಸಾಹಿತ್ಯಕ್ಕೆ ಓದುಗ, ಸಂಗೀತಕ್ಕೆ ಕೇಳುಗ ಮತ್ತು ಸಿನಿಮಾಕ್ಕೆ ನೋಡುಗ ಮುಖ್ಯ. ಪುರಾಣ ಕನ್ಯೆ ಅಂತಹ ಕಾದಂಬರಿಗಳು ಹೆಚ್ಚು ಹೆಚ್ಚಾಗಿ ಬರಬೇಕು.

■ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ

ಬೆಂಗಳೂರು: ಕಾ.ತ. ಚಿಕ್ಕಣ್ಣ ಲೇಖಕರಾಗಿ ಹಾಗೂ ಆಡಳಿತಗಾರರಾಗಿ ಪ್ರಬುದ್ಧರು, ನನ್ನ ಗೆಳೆಯರೂ ಆದ ಈ ಪ್ರತಿಭಾವಂತರಿಗೆ ದ್ವಾರನಕುಂಟೆ, ಪಾತಣ್ಣ ಪ್ರತಿಷ್ಠಾನ ಏರ್ಪಡಿಸಿದ್ದ ಕಾದಂಬರಿ, ಸ್ಪರ್ಧೆಯಲ್ಲಿ ಮೊಟ್ಟ ಮೊದಲ ಸಾಲಿನ ಪ್ರಶಸ್ತಿ ಲಭಿಸಿರುವುದು ನನಗೆ ಅತ್ಯಂತ ಸಂತಸ ತಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿ ವೈವಿಧ್ಯಮಯ ಪ್ರಕಾರ, ಓದುಗರ ಜೊತೆಗಾರ ಎಂದು ಗುರ್ತಿಸಿಕೊಂಡಿದೆ. ಸಾರ್ವಕಾಲಿಕ ಶ್ರೇಷ್ಠವಾದ ಎರಡು ಕಾದಂಬರಿಗಳು ಹಾಗೂ ಇತರೆ ಪ್ರಕಾರಗಳಲ್ಲಿ ಅತ್ಯುತ್ತಮ ಕೃತಿಗಳನ್ನು ರಚಿಸಿದ ಕುವೆಂಪು ಅವರನ್ನು ಪೂರ್ವಾಗ್ರಹ ಪೀಡಿತ ವಿಮರ್ಶಕರು ಅವರು ಕವಿಯೇ ಅಲ್ಲ ಎಂದು ಗೇಲಿ ಮಾಡುತ್ತಿದ್ದರು. ಅವರಿಗೆ ಪ್ರಶಸ್ತಿಯ ಮೇಲೆ ಪ್ರಶಸ್ತಿಗಳು ಬಂದಾಗ, ಇದೇ ವಿಮರ್ಶಕರು ತಾರಾ ಮಾರಾ ಹೊಗಳಿದರು ಎಂದು ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಮಾ.14 ರಂದು ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಮತ್ತು ಗೋಧೂಳಿ ಕನ್ನಡ ಸಂಘಗಳ ಸಹಯೋಗದಲ್ಲಿ ಏರ್ಪಡಿಸಿದ್ದ 2022ರ ಅತ್ಯುತ್ತಮ ಕಾದಂಬರಿ ಸ್ಪರ್ಧೆಯಲ್ಲಿ ವಿಜೇತರಾದ 'ಪುರಾಣಕನ್ಯೆ' ಕಾದಂಬರಿಯ ಕರ್ತೃ ಕಾ.ತ. ಚಿಕ್ಕಣ್ಣ ಅವರಿಗೆ 25,000ರೂಗಳ ನಗದುಳ್ಳಗೊಂಡ ಪ್ರಶಸ್ತಿ ಪ್ರದಾನ ಮಾಡಿ ಡಾ. ಬರಗೂರು ಮಾತನಾಡಿದರು.

ಕಾದಂಬರಿ ಸ್ಪರ್ಧೆಯ ತೀರ್ಪುಗಾರರಾಗಿದ್ದ ವಿಮರ್ಶಕ ಡಾ.ಎಚ್. ದಂಡಪ್ಪ ಪುರಾಣ ಕನ್ಯೆ ಕಾದಂಬರಿಯ ನಿರೂಪಣೆ ಶೈಲಿ ಸೊಗಸಾಗಿದೆ ಎಂದರು.

ಮತ್ತೊಬ್ಬ ತೀರ್ಪುಗಾರ ದೇವುಪತ್ತಾರ 'ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ 1891ರಲ್ಲಿ ಮೊದಲನೆಯದಾಗಿ ಕಾದಂಬರಿ ಸ್ಪರ್ಧೆ ಏರ್ಪಡಿಸಿತ್ತು. ಹೀಗಾಗಿ ಕಾದಂಬರಿ ಸ್ಪರ್ಧೆಗಳಿಗೆ 132 ವರ್ಷಗಳ ಇತಿಹಾಸವಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, 'ಮಹಾತ್ಮಗಾಂಧಿ ಅವರ ಕಲ್ಪನೆಯ ಸಮುದಾಯ ಸಮಾಜ ನಿರ್ಮಾಣ ಆಗಬೇಕಾಗಿದೆ. ಅದಕ್ಕಾಗಿ ಸಾಹಿತಿಗಳೆಲ್ಲರೂ ತಮ್ಮ ಬರವಣಿಗೆಯ ಮೂಲಕ ಶ್ರಮಿಸಬೇಕಾಗಿದೆ' ಎಂದು ಕರೆ ನೀಡಿದರು.


ಪ್ರಶಸ್ತಿ ಸ್ವೀಕರಿಸಿದ ಕಾ.ತ.ಚಿಕ್ಕಣ್ಣ ಅವರು ಪ್ರೀತಿಸಲು ಸಮರ್ಥನಾದವನು ಬದುಕಲೂ ಸಮರ್ಥನಾಗುತ್ತಾನೆ. ಇದೇ ನನ್ನ ಕಾದಂಬರಿಯ ಕಥಾವಸ್ತು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಹಿರಿಯ ಪತ್ರಕರ್ತ ಬಿ.ಎಂ.ಹನೀಫ್ ಮಹಿಳೆಯರ ಗೌರವಾರ್ಥವಾಗಿ ಪ್ರತಿಷ್ಠಾನ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದಲ್ಲದೆ, ಇತ್ತೀಚೆಗೆ ಮಹಿಳೆಯರ ಬಗೆಗೆ ಕಟುವಾಗಿ ನಡೆದುಕೊಂಡಿರುವ ಕ.ಸಾ.ಪ. ಅಧ್ಯಕ್ಷ ಹಾಗೂ ಕೋಲಾರದ ಲೋಕಸಭಾ ಸದಸ್ಯರ ವರ್ತನೆಯನ್ನು ಕಟು ಶಬ್ದಗಳಲ್ಲಿ ಖಂಡಿಸಿದರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರತಿಷ್ಠಾನದ ಧರ್ಮದರ್ಶಿ ಹಾಗೂ ಹಿರಿಯ ಪತ್ರಕರ್ತ ಕೆ.ಹ.ರಘುನಾಥ್ "ಕಳೆದ ವರ್ಷ ಇದೇ ದಿನ ಪ್ರತಿಷ್ಠಾನ ಆರಂಭವಾಯಿತು. ಮಾ. 14 ದ್ವಾರನಕುಂಟೆ ಪಾತಣ್ಣ ಅವರ ಜನ್ಮದಿನ, ಈ ಶುಭದಿನವನ್ನು ಪುಸ್ತಕ ಸಂಸ್ಕೃತಿ ದಿನವನ್ನಾಗಿ ಆಚರಿಸಲು ಪ್ರತಿಷ್ಠಾನ ನಿರ್ಧರಿಸಿದೆ' ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಸದಸ್ಯ ಡಾ.ಮೂಡ್ನಾಕೂಡು ಚಿನ್ನಸ್ವಾಮಿ, ಡಿ.ಬಿ.ರಾಮಯ್ಯ, ಕೆ.ಅಶೋಕ್ ಎಂ, ತಿಮ್ಮಯ್ಯ ಮತ್ತು ಬಿ.ಸಿ. ರಾಘವೇಂದ್ರ, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ ನೋಟಗಾರ್ ಸತೀಶ್, ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯ, ಸಿದ್ದಲಿಂಗಯ್ಯ ಬನ್ನಂಗಾಡಿ, ಡಾ. ಸತ್ಯಮಂಗಲ ಮಹದೇವ್, ಡಾ. ರಾಜಶೇಖರ ಹತಗುಂದಿ, ಕುಮಾರ ಯಲ್ಲಪ್ಪ, ಡಾ. ಸಂತೋಷ ಹಾನಗಲ್, ವೀರಸಂಗಯ್ಯ, ವ.ಚ.ಚನ್ನೇಗೌಡ, ರಾಣಿ ಗೋವಿಂದರಾಜು, ಡಿ.ಎನ್.ಹರಿದಾಸ್, ಎನ್. ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವವಾಣಿ 16.03.2023 ಗುರುವಾರ

ಸೊಕ್ಕು ಅಪಾಯಕಾರಿ, ಶೋಧ ಆರೋಗ್ಯಕರ



'ಪುರಾಣಕನ್ಯೆ' ಕಾದಂಬರಿಯ ಕರ್ತೃ ಕಾ.ತ.ಚಿಕ್ಕಣ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ, ಶಿಕ್ಷಣತಜ್ಞ ಡಾ.ವೂಡೆ ಪಿ.ಕೃಷ್ಣ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಮತ್ತಿತರರು ಇದ್ದರು.

ಬೆಂಗಳೂರು: ಸಾಹಿತ್ಯವೂ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಶ್ರೇಷ್ಠತೆ ಸೊಕ್ಕಾಗಬಾರದು, ಶೋಧವಾಗಬೇಕು. ಸೊಕ್ಕು ಅಪಾಯಕಾರಿ, ಶೋಧ ಆರೋಗ್ಯಕರ ಎಂದು ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

ಶೇಷಾದ್ರಿಪುರ ಕಾಲೇಜು ಸಭಾಂಗಣದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ವತಿಯಿಂದ ನಡೆದ 2022ರ ಅತ್ಯುತ್ತಮ ಕಾದಂಬರಿ ಸ್ಪರ್ಧೆಯಲ್ಲಿ ವಿಜೇತರಾದ 'ಪುರಾಣಕನ್ಯೆ' ಕಾದಂಬರಿಯ ಕರ್ತೃ ಕಾ.ತ.ಚಿಕ್ಕಣ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಹೆಚ್ಚಿನ ಅಕ್ಷರ ಜ್ಞಾನವಿಲ್ಲದವರ ಸಾಹಿತ್ಯ ಕೃತಿಗಳಿಗೆ ಮುನ್ನುಡಿ ಬರೆದಿದ್ದೇನೆ ಎಂಬುದು ನನಗೆ ಹೆಮ್ಮೆ. ಬರೆದದ್ದು ಪ್ರಕಟವಾಗದೆ ಹೋದರೆ ಅದು ಶ್ರೇಷ್ಠವೋ ಕನಿಷ್ಠವೋ ಹೇಗೆ ತಿಳಿಯುತ್ತದೆ? ಕಟು ವಿಮರ್ಶೆಗಳಿಂದ ಪ್ರತಿಭಾ ಭ್ರೂಣಹತ್ಯೆ ಸಲ್ಲದು. ಸಾಹಿತ್ಯಕ್ಕೆ ಓದುಗ, ಸಂಗೀತಕ್ಕೆ ಕೇಳುವ ಮತ್ತು ಸಿನಿಮಾಗೆ ನೋಡುಗ ಮುಖ್ಯ ಎಂದರು.

ಶಿಕ್ಷಣತಜ್ಞ ಡಾ.ವೂಡೆ ಪಿ.ಕೃಷ್ಣ ಮಾತನಾಡಿ, ಮಹಾತ್ಮಗಾಂಧಿ ಅವರ ಕಲ್ಪನೆಯ ಸಮುದಾಯ ಸಮಾಜ ನಿರ್ಮಾಣ ಆಗಬೇಕಿದೆ. ಆದಕ್ಕಾಗಿ ಸಾಹಿತಿಗಳೆಲ್ಲರೂ ತಮ್ಮ ಬರವಣಿಗೆಯ ಮೂಲಕ ಶ್ರಮಿಸಬೇಕಾಗಿದೆ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಮಾತನಾಡಿ, ಮಹಿಳೆಯರ ಗೌರವಾರ್ಥ ಪ್ರತಿಷ್ಠಾನ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ; ಇತ್ತೀಚೆಗೆ ಮಹಿಳೆಯರ ಬಗ್ಗೆ ಕೆಟ್ಟದಾಗಿ ನಡೆದುಕೊಂಡಿರುವ ಕಸಾಪ ಅಧ್ಯಕ್ಷ ಹಾಗೂ ಕೋಲಾರದ ಲೋಕಸಭಾ ಸದಸ್ಯರ ವರ್ತನೆಯನ್ನು ಕಟು ಶಬ್ದಗಳಲ್ಲಿ ಖಂಡಿಸಿದರು.

ಪ್ರಜಾವಾಣಿ

ಬುಧವಾರ • ಮಾರ್ಚ್ 15, 2023

ಪ್ರತಿಭಾ ಭ್ರೂಣಹತ್ಯೆ ನಿಲ್ಲಿಸಿ: ಬರಗೂರು

ಕಾ.ತ. ಚಿಕ್ಕಣ್ಣಗೆ 'ಅತ್ಯುತ್ತಮ ಕಾದಂಬರಿ ಪ್ರಶಸ್ತಿ' ಪ್ರದಾನ: ಪಾತಣ್ಣ ಪ್ರತಿಷ್ಠಾನದ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಸೊಕ್ಕು ಪ್ರತಿಭಾ ಭ್ರೂಣಹತ್ಯೆಗೆ ಕಾರಣವಾಗಬಾರದು. ಹೊಸಬರಿಗೆ ಮುಕ್ತವಾಗಿ ಬರೆಯಲು ಬಿಡಬೇಕು. ಕಾಲದ ಗತಿಯಲ್ಲಿ ಕೆಲವರು ನಿಲ್ಲುತ್ತಾರೆ, ಕೆಲವರು ಹಿಂದೆ ಸರಿಯುತ್ತಾರೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕಾ.ತ. ಚಿಕ್ಕಣ್ಣ ಅವರಿಗೆ '2022ರ ಅತ್ಯುತ್ತಮ ಕಾದಂಬರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಅವರ 'ಪುರಾಣ ಕನ್ಯೆ' ಕಾದಂಬರಿ ಈ ಪ್ರಶಸ್ತಿಗೆ ಆಯ್ಕೆಯಾಗಿತ್ತು. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

'ಸಾಹಿತ್ಯ, ಸಾಂಸ್ಕೃತಿಕ ಒಳಗೊಂಡಂತೆ ಎಲ್ಲ ಕ್ಷೇತ್ರದಲ್ಲಿ ಶ್ರೇಷ್ಠತೆಯ ಸೊಕ್ಕು ಅಪಾಯಕಾರಿಯಾಗಿದೆ. ಶ್ರೇಷ್ಠತೆಯ ಶೋಧ ಆರೋಗ್ಯಕರವಾದದ್ದಾಗಿದೆ. ನಮ್ಮ ಸಾಹಿತ್ಯದ ಸಂದರ್ಭದಲ್ಲಿ ಶ್ರೇಷ್ಠತೆಯ ಪ್ರಶ್ನೆ ಪ್ರಚಲಿತವಾಯಿತು. ಸಾಹಿತ್ಯವನ್ನು ನೋಡುವ ಮನೋಧರ್ಮದಲ್ಲಿ ಸ್ಥಿತ್ಯಂತರವಾಯಿತು. ಕೆಲವರು ಕಾವ್ಯ, ಕಾದಂಬರಿಯ ಪ್ರಕಾರ ಮುಗಿಯಿತು ಎನ್ನುತ್ತಾರೆ. ಈಗ ಸಾಹಿತಿಗಳ ಕಥೆಯೇ ಮುಗಿಯಿತು ಎನ್ನುವ ಕಾಲದಲ್ಲಿ ಇದ್ದೇವೆ. ಸರಿಯಾಗಿ ಮಾತನಾಡಿದರೆ ಮನೆಯಲ್ಲಿ ಇರುತ್ತಾರೆಯೋ, ಸೆರೆಮನೆಯಲ್ಲಿ ಇರುತ್ತಾರೆಯೋ ಎಂಬ ವಾತಾವರಣದಲ್ಲಿ ಇದ್ದೇವೆ. ಯಾವುದೇ ಸಾಹಿತ್ಯ ಪ್ರಕಾರ ಯಾವತ್ತೂ ಮುಗಿಯುವುದಿಲ್ಲ' ಎಂದು ಬರಗೂರು ರಾಮಚಂದ್ರಪ್ಪ ತಿಳಿಸಿದರು.

'ಸಾಹಿತ್ಯವು ಕೃಷಿಯಾಗಿದ್ದು, ಅದು ಹದವಾಗುವವರೆಗೆ ಬರೆಯುತ್ತಲೇ ಇರಬೇಕು. ನಾನು ಕನ್ನಡ ಸಾಹಿತ್ಯದ ಆರೋಗ್ಯದ ದೃಷ್ಟಿಯಿಂದ 8 ನಾಟಕಗಳನ್ನು ಪ್ರಕಟಿಸಿಲ್ಲ. ಅವು ಪ್ರಕಟಣೆಗೆ ಯೋಗ್ಯವಲ್ಲ ಅನಿಸಿತು. ಆತ್ಮವಿಮರ್ಶೆ ಮಾಡಿಕೊಳ್ಳುವ ಸೌಜನ್ಯ ಇರಬೇಕು. ಅದು ಇರದಿದ್ದರೆ ಸೊಕ್ಕು ಮೂಡುತ್ತದೆ' ಎಂದು ಅವರು ಹೇಳಿದರು.

ಪ್ರಶಸ್ತಿಯ ತೀರ್ಪುಗಾರ ದೇವು ಪತ್ತಾರ ಅವರು ಮಾತನಾಡಿ, 'ಸ್ಪರ್ಧೆಗೆ 40 ಕಾದಂಬರಿಗಳು ಬಂದಿದ್ದವು. ಅಂತಿಮ ಹಂತಕ್ಕೆ ಕಾ.ತ. ಚಿಕ್ಕಣ್ಣ ಅವರ ಕೃತಿ ಮಾತ್ರವಲ್ಲದೇ, ಎಚ್.ಆರ್. ಸುಜಾತ ಅವರ 'ಮಣಿಬಾಲೆ' ಮತ್ತು ಎಂ.ಆರ್. ದತ್ತಾತ್ರಿ ಅವರ 'ಒಂದೊಂದು ತಲೆಗೂ ಒಂದೊಂದು ಬೆಲೆ' ಕಾದಂಬರಿಗಳು ಆಯ್ಕೆಗೊಂಡಿದ್ದವು' ಎಂದರು.

'ಈ ಕಾದಂಬರಿಗಳ ಪೈಕಿ ಒಂದನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು' ಎಂದು ಹೇಳಿದರು.



ಕಾ.ತ. ಚಿಕ್ಕಣ್ಣ ಅವರಿಗೆ 'ಅತ್ಯುತ್ತಮ ಕಾದಂಬರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಬರಗೂರು ರಾಮಚಂದ್ರಪ್ಪ, ವಿಮರ್ಶಕ ಎಚ್. ದಂಡಪ್ಪ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಇದ್ದಾರೆ –ಪ್ರಜಾವಾಣಿ ಚಿತ್ರ

ಕನ್ನಡಪ್ರಭ

ಬುಧವಾರ 15.3.2023



ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕಾ.ತ.ಚಿಕ್ಕಣ್ಣ ಅವರ 'ಪುರಾಣ ಕನ್ಯೆ' ಕಾದಂಬರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಡಾ| ಬರಗೂರು ರಾಮಚಂದ್ರಪ್ಪ, ದ್ವಾರನಕುಂಟೆ ಪಾತಣ್ಣ ಇದ್ದರು.


ಕಾ.ತ.ಚಿಕ್ಕಣ್ಣ ವಿರಚಿತ 'ಪುರಾಣ ಕನ್ಯೆ'ಗೆ ಪ್ರಶಸ್ತಿ

'ಸಾಹಿತ್ಯದಲ್ಲಿ ಶ್ರೇಷ್ಠತೆ ಶೋಧಿಸಿ'

ಬೆಂಗಳೂರು: ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಅಳೆಯುವುದು ಎಂದರೆ ಅದು ಶೋಧವಾಗಬೇಕೇ ಹೊರತು ಸೊಕ್ಕಾಗಬಾರದು. ಸೊಕ್ಕು ಹೊಸಬರ ಬರಹಗಳನ್ನು ಭ್ರೂಣದಲ್ಲೇ ಕೊಂದುಬಿಡುತ್ತದೆ ಎಂದು ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ಹೇಳಿದರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಮಂಗಳವಾರ ನಗರದಶೇಷಾದ್ರಿಪುರಂಕಾಲೇಜಿನಲ್ಲಿ ಆಯೋಜಿಸಿದ್ದ '2022ರ ಅತ್ಯುತ್ತಮ ಕಾದಂಬರಿ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ಕಾ.ತ.ಚಿಕ್ಕಣ್ಣ ಅವರ 'ಪುರಾಣ ಕನ್ಯೆ' ಕಾದಂಬರಿಗೆ ಪ್ರಶಸ್ತಿ ನೀಡಿ ಗೌರವಿಸಿ ಮಾತನಾಡಿದರು. ನವ್ಯ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯದ ಶ್ರೇಷ್ಠತೆಯನ್ನು ಅಳೆಯುವ ಪ್ರಶ್ನೆ ಹೆಚ್ಚು ಪ್ರಚಲಿತವಾಯಿತು. ಆಗ ಸಾಹಿತ್ಯವನ್ನು ಸ್ವೀಕರಿಸುವ ಮನೋಭಾವ ನಿರಾಕರಣೆಯ ಮನೋಧರ್ಮದ ಸ್ಥಿತ್ಯಂತರವಾಯಿತು ಎಂದರು. ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ಕಾ.ತ.ಚಿಕ್ಕಣ್ಣ, ಶಿಕ್ಷಣ ತಜ್ಞ ಡಾ| ವೂಡೇ ಪಿ.ಕೃಷ್ಣ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್, ಪ್ರಶಸ್ತಿ ಆಯ್ಕೆ ಸಮಿತಿಯ ತೀರ್ಪುಗಾರರಾದ ಡಾ| ಎಚ್.ದಂಡಪ್ಪ, ದೇವು ಪತ್ತಾರ ಇದ್ದರು.

ಪ್ರಜಾವಾಣಿ ಮಂಗಳವಾರ ● ಮಾರ್ಚ್ 14, 2023



ರಂಗಮಂಡಲ ಸಾಂಸ್ಕೃತಿಕ ಸಂಘ ಮತ್ತು ಶಿವಗಂಗ ಟ್ರಸ್ಟ್ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ 'ಹಿರಿಯೂರು ರಾಘವೇಂದ್ರ 70ರ ಸಂಭ್ರಮ' ಕಾರ್ಯಕ್ರಮದಲ್ಲಿ ಕಿರುತೆರೆ ಕಲಾವಿದ ಸಿಹಿ ಕಹಿ ಚಂದ್ರು (ಎಡದಿಂದ ಮೂರನೆಯವರು) ಅವರು ಹಿರಿಯೂರು ರಾಘವೇಂದ್ರ (ಎಡದಿಂದ ಎರಡನೆಯವರು) ಅವರ 'ಈ ಸಲ ಕಪ್ ನಮ್ದೇ' ಕೃತಿ ಲೋಕಾರ್ಪಣೆ ಮಾಡಿದರು. (ಎಡದಿಂದ) ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ರಂಗಕರ್ಮಿ ಸಿ.ಕೆ. ಗುಂಡಣ್ಣ, ಶಿವಗಂಗ ಪ್ರಕಾಶನದ ಪ್ರಕಾಶಕ ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ ಮತ್ತು ಸಾಹಿತಿ ರಾ.ಸು. ವೆಂಕಟೇಶ್ ಇದ್ದಾರೆ.

ಪ್ರಜಾವಾಣಿ ಚಿತ್ರ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI >> BENGALURU
ಸೋಮವಾರ 13 ಮಾರ್ಚ್ 2023
13 MARCH 2023

ಬೆಂಗಳೂರು ಸಿಟಿಎಕ್ಸ್‌ಪ್ರೆಸ್

ವಿಜಯವಾಣಿ ಚಿತ್ರ



ಪುಸ್ತಕ ಬಿಡುಗಡೆ

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಹಿರಿಯೂರು ರಾಘವೇಂದ್ರ ಬರೆದಿರುವ 'ಈ ಸಲ ಕಪ್ ನಮ್ದೇ' ನಗೆಬರಹಗಳ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ಚಿತ್ರನಟ ಸಿಹಿಕಹಿ ಚಂದ್ರು, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ರಂಗಭೂಮಿ ಕಲಾವಿದ ನಾಗೇಂದ್ರ ಪ್ರಸಾದ್, ಕನ್ನಡಪರ ಹೋರಾಟಗಾರ ರಾ. ಸು. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂಜೆ

Apr 7, 2023



ಆಯ್ಕೆ..

ಗಾಂಧಿ ಸ್ಮರಕ ನಿಧಿಯ ಧರ್ಮದರ್ಶಿಯಾಗಿ ಪ್ರೊಫೆ ಪಿ.ಕೃಷ್ಣ ಅವರನ್ನು ಟ್ರಸ್ಟ್‌ನ ಆಡಳಿತ ಮಂಡಳಿ ಆಯ್ಕೆ ಮಾಡಿದೆ.

ಪ್ರಜಾ ಪ್ರಗತಿ

Mar 10, 2023

ಶ್ರಮದಾನದ ಮೂಲಕ ಬಹು ದೊಡ್ಡ ಬದಲಾವಣೆ ಸಾಧ್ಯ

ರಾಜ್ಯಮಟ್ಟದ ಶ್ರಮದಾನ ಶಿಬಿರದ ಸಮಾರೋಪದಲ್ಲಿ ವೂಡೆ ಪಿ. ಕೃಷ್ಣ

■ ಪ್ರಜಾ ಪ್ರಗತಿ ಕಾಂ

ವಿಜಯಪುರ: ಗಾಂಧಿಯನ್ನು ಓದಿ - ಅಧ್ಯಯನಮಾಡಿಕೊಳ್ಳಿಹಾಗೂ ಗಾಂಧಿಯನ್ನು ಪ್ರಶ್ನೆ ಮಾಡಿ ಎಂದು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು.

ಇವರು ಚಿಕ್ಕಮರಳ್ಳಿ ಸಮೀಪದ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ಆವರಣದಲ್ಲಿ ಕರ್ನಾಟಕ ಸರ್ಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ರಾಷ್ಟ್ರೀಯ ಸೇವಾ ಯೋಜನಾರಾಜ್ಯಕೋಶ, ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಉತ್ತರವಿಶ್ವವಿದ್ಯಾನಿಲಯಹಾಗೂಬೆಂಗಳೂರು ಗ್ರಾಮಾಂತರ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಂಗಮಕೋಟೆಯ ಶ್ರೀ ಯೋಗಿ ನಾರಾಯಣ ಎಜುಕೇಶನ್ ಟ್ರಸ್ಟ್ ಮತ್ತು ಗಾಂಧಿ ಪ್ರೇರಿತ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ರಾಜ್ಯಮಟ್ಟದ ಶ್ರಮದಾನ ಶಿಬಿರದ ಸಮಾರೋಪ ಭಾಷಣದಲ್ಲಿ ಮಾತನಾಡಿ ನಮ್ಮ ಕೆಲಸವನ್ನು ಇನ್ನೊಬ್ಬರೊಂದಿಗೆ ಮಾಡಿಸಿಕೊಂಡರೆ ಅದು ಬಹುದೊಡ್ಡ



ಶೋಷಣೆ ಎಂದು ಹೇಳಿದರೆ ತಪ್ಪಾಗಲಾರದು.

ಪ್ರತಿ ದಿನ ನಾವು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವುದು ಅದು ನಮ್ಮ ಬಹುದೊಡ್ಡ ಗುಣ ಅಂದರೆ ನಮ್ಮ ಶೌಚಾಲಯ, ದಿನ ನಿತ್ಯ ಬಳಸುವ ನಮ್ಮ ಹುಡುಗೆ ಮತ್ತು ತೊಡುಗೆಗಳು, ಊಟ ಮಾಡಿದ ತಟ್ಟೆ, ನಮ್ಮ ಮನೆ ಹಾಗೂ ಮನೆಯ ಸುತ್ತ ಮುತ್ತಲಿನ ಪರಿಸರವನ್ನು ನಾವೇ ಸುಚಿ ಮಾಡಿಕೊಳ್ಳಬೇಕು ಆಗ ಮಾತ್ರ ಸಾಧ್ಯ ಇಂತಹ ಶ್ರಮದಾನಗಳ ಮೂಲಕ ಈ ಜಗತ್ತಿನಲ್ಲಿ ನಾವೆಲ್ಲರೂ ಬಹು ದೊಡ್ಡ ಬದಲಾವಣೆಯನ್ನು ಕಾಣಬಹುದೆಂದರು.

ಕಾರ್ಯಕ್ರಮದ ಉಪಸ್ಥಿತಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಆರ್. ಗೀತಾ, ಚಿಕ್ಕಮರಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ನ ಪ್ರಾಂಶುಪಾಲೆ ಡಾ.ಎನ್. ಆನಂದಮ್ಮ, ಆಡಳಿತಾಧಿಕಾರಿ ಸುಧಾಕರ ಕುಲಕರ್ಣಿ, ಹೊಸಕೋಟೆ ತಾಲ್ಲೂಕಿನ ಯುವ ಪರಿವರ್ತಕ ವಿ. ಪ್ರವೀಣ್, ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ.ಅಂಬರೀಶ್ ಹಾಗೂ ಎಸ್. ಸುರೇಶ್ ಹಾಗೂ ಸ್ವಯಂಸೇವಕರು ಹಾಜರಿದ್ದರು.

ಚಿಕ್ಕಮರಳ್ಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಎ.ವಿಶ್ವಾಸ್ ರಾಜ್ಯ ಮಟ್ಟದ ಈ ಶ್ರಮದಾನ ಶಿಬಿರದಲ್ಲಿ ತಮ್ಮ ವರದಿಯನ್ನು ಮಂಡಿಸಿ ಮಾತನಾಡಿ ಅನೇಕ ಅರಿವು ಕಾರ್ಯಕ್ರಮಗಳ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆ ಹಾಗೂ ನಾಯಕತ್ವ ತರಬೇತಿಗಳ ಬಗ್ಗೆ ಎನ್.ಎಸ್.ಎಸ್ ಸ್ವಯಂ ಸೇವಕರಿಗೆ ನಿರಂತರ ತರಬೇತಿಗಳನ್ನು ನೀಡಲಾಯಿತು ಹಾಗೂ ಈ ಶಿಬಿರದಲ್ಲಿ ಮಂಗಳೂರು, ರಾಯಚೂರು, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಹಾಗೂ ವಿಶ್ವ ವಿದ್ಯಾನಿಲಯಗಳಿಂದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕ ಹಾಗೂ ಸ್ವಯಂ ಸೇವಕಿಯರು ಭಾಗವಹಿಸಿದ್ದರು ಎಂದು ತಿಳಿಸಿದರು.

ಕಸ್ತೂರಿ ಪ್ರಭ

ಫೆಬ್ರವರಿ, ೨೦೨೪



ಶಿಕ್ಷಣ ತಜ್ಞ, ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಅರವತ್ತು ವರ್ಷ ತುಂಬಿದ ಸಂದರ್ಭದಲ್ಲಿ ಅವರನ್ನು ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಅಧ್ಯಕ್ಷರಾದ ಗೌಡಗೆರೆ ಮಾಯುಶ್ರೀ, ಕೋಶಾಧ್ಯಕ್ಷ, ಪತ್ರಕರ್ತ ಎನ್. ವೇಣುಗೋಪಾಲ್, ಹಿರಿಯ ಸಾಹಿತಿಗಳಾದ ಹಾ.ವಿ. ಮಂಜುಳಾ ಶಿವಾನಂದ, ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಇದ್ದಾರೆ.

ಪ್ರಜಾವಾಣಿ ಮಂಗಳವಾರ • ಫೆಬ್ರುವರಿ 28, 2023

ಡಾ.ಎಚ್.ಎಸ್. ಶ್ರೀಮತಿ ಅವರಿಗೆ ಪ್ರೊ.ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ಡಾ.ಎನ್.ಜಗದೀಶ್ ಕೊಪ್ಪ ಅವರಿಗೆ ವಿ.ನಾಗರಾಜ್‌ರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ: ಡಾ. ವೂಡೆ ಪಿ. ಕೃಷ್ಣ ಅತಿಥಿಗಳು: ಆರ್.ಪೂರ್ಣಿಮಾ, ಡಾ.ಬೈರಮಂಗಲ ರಾಮೇಗೌಡ, ಆಯೋಜನೆ: ಬಿಎಂಶ್ರೀ ಪ್ರತಿಷ್ಠಾನ, ಸ್ಥಳ: ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ನರಸಿಂಹರಾಜ ಕಾಲೊನಿ, ಸಂಜೆ 5

ಇಂದು ಸಂಜೆ

ಶನಿವಾರ | 11 ಫೆಬ್ರವರಿ 2023



ಬೆಂಗಳೂರು ಬ್ರಹ್ಮಸಮಾಜದ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಡಾ. ರಾಣಗೋವಿಂದರಾಜು ಅವರು ರಚಿಸಿರುವ ರಾಜಾ ರಾಮಮೋಹನರಾಯ್ ಕೃತಿಯ ಇಂಗ್ಲೀಷ್ ಆವೃತ್ತಿಯನ್ನು ನಾಡೋಜ, ಡಾ. ವೂಡೇ. ಪಿ. ಕೃಷ್ಣ ಲೋಕಾರ್ಪಣೆಗೊಳಿಸಿದರು. ಬೆಂಗಳೂರು ಬ್ರಹ್ಮಸಮಾಜದ ಅಧ್ಯಕ್ಷ ಡಾ. ಅಶೋಕ ಗುರುದಾಸ್, ಡಾ. ರಾಣಗೋವಿಂದರಾಜು, ನಿರ್ಗುಣಾರ್ಥಿ, ಶೋಭನಿ ಗುರುದಾಸ್ ಪ್ರತಿಭಾ ಮುಂತಾದವರಿದ್ದಾರೆ.

RNI: KAR/KAN/58071/93

ಇಂದು ಸಂಜೆ

ಸ್ಥಳೀಯ ಸುದ್ದಿಗಳ ಸಮಗ್ರ ಚಿತ್ರಣ

INDU SANJE, Kannada evening daily

Bangalore, Mysore, Mandya, Hassan, Kolar, Chikkaballapur, Chamarajnagara, Ramanagara, Hubballi Published simultaneously



ಬೆಂಗಳೂರು ಬ್ರಹ್ಮಸಮಾಜದ ಆಶ್ರಯದಲ್ಲಿ ಇತ್ತೀಚಿಗೆ ನಡೆದ ಸಮಾರಂಭದಲ್ಲಿ ಡಾ. ರಾಣಿಗೋವಿಂದರಾಜು ಅವರು ರಚಿಸಿರುವ ರಾಜಾ ರಾಮಮೋಹನರಾಯ್ ಕೃತಿಯ ಇಂಗ್ಲೀಷ್ ಆವೃತ್ತಿಯನ್ನು ನಾಡೋಜ, ಡಾ. ಪ್ರೊಡೇ. ಪಿ. ಕೃಷ್ಣ ಲೋಕಾರ್ಪಣೆಗೊಳಿಸಿದರು. ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ ಗುರುದಾಸ್, ಡಾ. ರಾಣಿಗೋವಿಂದರಾಜು. ನಿರ್ಗುಣಾರ್ಥಿ, ಶೋಭಿನಿ ಗುರುದಾಸ್ ಪ್ರತಿಭಾ ಮುಂತಾದವರಿದ್ದಾರೆ.

ಪ್ರಜಾ ಪ್ರಗತಿ

Feb 11, 2023

ಗುರುಕುಲ ಪದ್ಧತಿ ವಿಶ್ವಕ್ಕೆ ಮಾದರಿ



■ ಪ್ರಜಾಪ್ರಗತಿ.ಕಾಂ

ತಿಪಟೂರು : ಭಾರತೀಯ ಗುರುಕುಲ ಪದ್ಧತಿಯಲ್ಲಿನ ಶಿಕ್ಷಣ ವ್ಯವಸ್ಥೆ ಅತ್ಯುತ್ತಮವಾಗಿದ್ದು ಪ್ರಪಂಚಾದ್ಯಂತ ಗುರುಕುಲ ಪದ್ಧತಿಯನ್ನು ಅಳವಡಿಸಿಕೊಳ್ಳಲು ಉತ್ಸುಕತೆ ತೋರುತ್ತಿದ್ದಾರೆಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಅವರು ನಗರದ ಕಲ್ಪತರು ಸೆಂಟ್ರಲ್ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿದರು. ಇಂದಿನ ಆಧುನಿಕ ಶಿಕ್ಷಣದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತಂದು ಅವರ ಜ್ಞಾನಾರ್ಜನೆಯ ಮಟ್ಟವನ್ನು ಉನ್ನತೀಕರಿಸಿ ಮನುಕುಲದ ಅಭಿವೃದ್ಧಿಗೆ ನಾಂದಿ ಹಾಡಬೇಕೆಂದು ತಿಳಿಸಿದರು.

ಖ್ಯಾತ ಶಿಕ್ಷಣ ತಜ್ಞ ಊಡೆ ಪಿ.ಕೃಷ್ಣ ಮಾತನಾಡಿ, ಸ್ವಾಮಿ ವಿವೇಕಾನಂದರು ಹೇಳಿರುವಂತೆ ನಮ್ಮ ಆಲೋಚನೆಗಳೆ ನಮ್ಮನ್ನು ರೂಪಿಸುತ್ತವೆ, ಆದ್ದರಿಂದ ಏನನ್ನು ಯೋಚಿಸುತ್ತೀರೊ ಅದರ ಬಗ್ಗೆ ಎಚ್ಚರದಿಂದಿರಿ. ಗಾಂಧೀಜಿಯವರ ದೃಷ್ಟಿಕೋನವಾದ ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಮಕ್ಕಳಲ್ಲಿ ಕ್ರಿಯಾಶೀಲತೆಯ ಗುಣವನ್ನು ಬೆಳೆಸಿ ಸ್ವಾವಲಂಬನೆಯ ಜೀವನ ನಡೆಸಲು ಪ್ರೋತ್ಸಾಹಿಸುವ ಗುರುತರವಾದ ಜವಾಬ್ದಾರಿ ಶಿಕ್ಷಕರ ಹೆಗಲ ಮೇಲಿದೆ ಎಂದರು.

ಕಲ್ಪತರು ವಿದ್ಯಾ ಸಂಸ್ಥೆಯ ಅಧ್ಯಕ್ಷ ಟಿ.ಕೆ.ಶಿವರುದ್ರಪ್ಪ ಮಾತನಾಡಿ, ಸಾಂಸ್ಕೃತಿಕ ಚಟುವಟಿಕೆಗಳು ಆಯಾಸ, ಬೇಸರ, ಬಿನ್ನತೆಯನ್ನು ನೀಗಿಸುವ ಮೂಲಮಂತ್ರಗಳು. ಚೇತನವನ್ನು ಉಂಟುಮಾಡಿ ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸುತ್ತವೆ. ಅದಕ್ಕಾಗಿಯೇ ಶಿಕ್ಷಣ ಸಂಸ್ಥೆಗಳಲ್ಲಿ ಶಾಲಾ ವಾರ್ಷಿಕೋತ್ಸವಗಳ ಮೂಲಕ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದೇ ಇದರ ಉದ್ದೇಶವೆಂದು ತಿಳಿಸಿದರು.

ಮಕ್ಕಳ ಮನೋಮೋಹಕ ಸಾಂಸ್ಕೃತಿಕ ನೃತ್ಯಗಳು ಎಲ್ಲರ ಕಣ್ಮನ ಸೆಳೆದವು, ಕಲ್ಪತರು ವಿದ್ಯಾ ಸಂಸ್ಥೆಯ ಶಿವಪ್ರಸಾದ್, ಬಾಗಪಲ್ಲಿ ನಟರಾಜು, ಬಸವರಾಜು, ದೀಪಕ್, ಉಮೇಶ್, ಸಂಗಮೇಶ್, ಜಗದೀಶ್‌ಮೂರ್ತಿ, ಉಮಾಶಂಕರ್, ಸುಧಾಕರ್, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭುಸ್ವಾಮಿ, ತಹಸೀಲ್ದಾರ್ ಪವನ್‌ಕುಮಾರ್, ಕೆ.ಸಿ.ಎಸ್ ಪ್ರಾಂಶುಪಾಲೆ ದೀಪಿಕ.ಬಿ.ಸ್ವಾಮಿ ಉಪಸ್ಥಿತರಿದ್ದರು.

ಈ ಸಂಜೆ

Feb 10 2023



ಬ್ರಹ್ಮ ಸಮಾಜದ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ರಾಣಿ ಗೋವಿಂದರಾಜು ಅವರು ರಚಿಸಿರುವ ರಾಜಾರಾಮ ಮೋಹನರಾಯ್ ಕೃತಿಯ ಆಂಗ್ಲ ಅನುವಾದ ಕೃತಿಯನ್ನು ನಾಡೋಜ ಡಾ. ವೂಡೆ ಪಿ. ಕೃಷ್ಣ, ಬ್ರಹ್ಮ ಸಮಾಜದ ಅಧ್ಯಕ್ಷರಾದ ಡಾ. ಅಶೋಕ್ ಗುರುದಾಸ್ ಬಿಡುಗಡೆ ಮಾಡಿದರು. ಪ್ರತಿಭಾ, ಶೋಭಿನಿ ಗುರುದಾಸ್ ಸೇರಿದಂತೆ ಮತ್ತಿತರರಿದ್ದರು.

ಪ್ರತಿನಿಧಿ

08 Feb 2023



ಮೈಸೂರಿನ ಮುಕ್ತ ಗಂಗೋತ್ರಿಯ ಮಹಾತ್ಮ ಗಾಂಧಿ ಅಧ್ಯಯನ ಪೀಠವು ಮಂಗಳವಾರ ಆಯೋಜಿಸಿದ್ದ ಯುವಜನರಿಗಾಗಿ ಗಾಂಧಿ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ರಂಗಕರ್ಮಿ ಪ್ರಸನ್ನ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ. ಕೃಷ್ಣ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಪೀಠದ ನಿರ್ದೇಶಕಿ ಡಾ.ಆರ್.ಎಚ್.ಪವಿತ್ರಾ ಮಹಾತ್ಮ ಗಾಂಧೀಜಿಯ ವಿವಿಧ ಚಿತ್ರಗಳನ್ನು ವೀಕ್ಷಿಸಿದರು.

ಕನ್ನಡಪ್ರಭ

Wed. [illegible]

ಅಭಿಮತ ರಂಗಕರ್ಮಿ ಪ್ರಸನ್ನ | ಯುವ ಜನರಿಗಾಗಿ ಗಾಂಧಿ ಕುರಿತು ವಿಶೇಷ ಉಪನ್ಯಾಸ, ಛಾಯಾಚಿತ್ರ, ಖಾದಿ ವಸ್ತುಗಳ ಪ್ರದರ್ಶನ


ಪರಂಪರೆ, ಒಳ್ಳೆಯ ವಿಚಾರಗಳನ್ನು ಸಂಕೇತಗೊಳಿಸಲಾಗಿದೆ

• ಕನ್ನಡಪ್ರಭ ವಾರ್ತೆ ಮೈಸೂರು

ಭಾರತ ಮಾತ್ರವಲ್ಲದೇ ಇಡೀ ವಿಶ್ವದಲ್ಲಿಯೇ ಪರಂಪರೆ, ಒಳ್ಳೆಯ ವಿಚಾರಗಳನ್ನು ಸಂಕೇತಗೊಳಿಸಲಾಗಿದೆ. ನಾವೆಲ್ಲರೂ ಆ ಸಂಕೇತಗಳ ಭ್ರಮೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದೇವೆ ಎಂದು ಹಿರಿಯ ರಂಗಕರ್ಮಿ ಪ್ರಸನ್ನ ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಮಹಾತ್ಮ ಗಾಂಧಿ ಅಧ್ಯಯನ ಪೀಠವು ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು ಮತ್ತು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಎನ್‌ಎಸ್‌ಎಸ್ ಘಟಕಗಳ ಸಹಯೋಗದಲ್ಲಿ ಮಂಗಳವಾರ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಯುವ ಜನರಿಗಾಗಿ ಗಾಂಧಿ ಕುರಿತು ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ, ಖಾದಿ ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಒಳ್ಳೆಯ ವಿಚಾರಗಳಿಗೆ ಚೌಕಟ್ಟು ಕಟ್ಟುವುದು. ಮಂದಿರ ಸ್ಥಾಪನೆ, ಭವ್ಯ ನಗರಗಳ ನಿರ್ಮಾಣ, ಬೃಹತ್ ಕಾರ್ಖಾನೆ ಆರಂಭಿಸುವುದು. ಎಲ್ಲೋ ಉತ್ಪಾದಿಸಿದ ವಸ್ತುಗಳನ್ನು ಇನ್ನೆಲ್ಲಿಯೋ ಮಾರಾಟ ಮಾಡುವುದು. ಈ ಹಂತದಲ್ಲಿ ಎಲ್ಲಾ ವಿಚಾರಗಳು ಸತ್ತು ಹೋಗುತ್ತಿವೆ. ಇದನ್ನು ವಿದ್ಯಾರ್ಥಿಗಳು ತಪ್ಪಿಸಬೇಕು ಎಂದರು.



ಕರ್ನಾಟಕ ರಾಜ್ಯ ಮುಕ್ತ ವಿವಿ ಮಹಾತ್ಮ ಗಾಂಧಿ ಅಧ್ಯಯನ ಪೀಠವು ಮಂಗಳವಾರ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಯುವ ಜನರಿಗಾಗಿ ಗಾಂಧಿ ಕುರಿತು ವಿಶೇಷ ಉಪನ್ಯಾಸವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ ಉದ್ಘಾಟಿಸಿದರು. ಪ್ರಸನ್ನ, ಪ್ರೊ. ಶರಣಪ್ಪ ವಿ. ಹಲಸೆ, ಪ್ರೊ.ಜಿ.ಬಿ. ಶಿವರಾಜು, ಪ್ರೊ.ಕೆ.ಎಲ್.ಎನ್. ಮೂರ್ತಿ, ಡಾ.ಆರ್.ಎಚ್. ಪವಿತ್ರಾ, ಡಾ.ಬಿ.ಆರ್. ಜಯಕುಮಾರಿ ಇದ್ದರು.

> ಧರ್ಮ ಬೇರೆ ಸಾರ್ವಜನಿಕ ಬದುಕು ಬೇರೆಯಾಗಿ ಧರ್ಮ ಕಟ್ಟಾಳುವವರ ವೇದಿಕೆಯಾಗಿದೆ. ಪಕ್ಕದ ಮನೆಯವನ ಧರ್ಮಕ್ಕಿಂತ ತನ್ನ ಧರ್ಮ ದೊಡ್ಡದು. ನೆರೆಯ ಮನೆಯವನ ದೇವರಿಗಿಂತ ತನ್ನ ದೇವರು ದೊಡ್ಡದೆಂದು ಹಿಡಿದುಕೊಂಡು ತಿರುಗುತ್ತಿದ್ದೇವೆ. ಸಾರ್ವಜನಿಕವಾಗಿ ಕಟ್ಟಡಗಳನ್ನು ನಿರ್ಮಿಸಿ ಮರ, ಗಿಡ ಬೆಳೆಯದಂತೆ ಮಾಡಿದ್ದೇವೆ. ಇದು ಅಪಾಯಕಾರಿ.
>
> • ಪ್ರಸನ್ನ, ಹಿರಿಯ ರಂಗಕರ್ಮಿ

ಮಠ, ಮಂದಿರ, ಮಸೀದಿ ಮತ್ತು ಚರ್ಚುಗಳು ಕಟ್ಟಡಗಳಾದರೆ ಯುವಕರು ತಿರಸ್ಕರಿಸಬೇಕು. ಇಲ್ಲದಿದ್ದರೆ ಬದುಕು ಉಳಿಯೋದಿಲ್ಲ, ಭಾವತಿರೇಕದಿಂದ ಈ ಮಾತನ್ನು ಹೇಳುತ್ತಿಲ್ಲ. ಕಳೆದ ಶತಮಾನ ಕಂಡ ಪ್ರತಿಭಾವಂತ ವಿಜ್ಞಾನಿ ಸ್ಟೀಫನ್ ವಿಲಿಯಂ ಹಾಕಿಂಗ್ ಹೇಳುತ್ತಿರುವ ಮಾತುಗಳಿವು. ಕುವೆಂಪು, ಬಿಎಂಶ್ರೀ ಅವರು ಪ್ರಾಧ್ಯಾಪಕರಾಗಿ ತಮ್ಮ ಹುದ್ದೆಗೆ ಗೌರವ ತಂದಿದ್ದಾರೆ. ನುಡಿದಂತೆ ನಡೆದು ಪಾಠ ಮಾಡಿದರು. ಇವತ್ತು ಪ್ರಾಧ್ಯಾಪಕರ ಅರ್ಹತೆಯನ್ನು ಸಂಬಳದಲ್ಲಿ ನಿಗದಿ ಮಾಡಿದ್ದೇವೆ ಎಂದು ಅವರು ವಿಷಾದಿಸಿದರು.

ದೊಡ್ಡ ದೊಡ್ಡ ಕಟ್ಟಡ ಕಟ್ಟಿ ಗಾಂಧೀಜಿಯನ್ನು ತಂದು ಕೂರಿಸಿದ್ದೇವೆ. ಪ್ರಸ್ತುತ ರಾಷ್ಟ್ರಪತಿ ಭವನ, ವಿಕ್ಟೋರಿಯಾ ಸ್ಮಾರಕ ನಿರ್ಮಿಸಿದಾಗ ಬಡವರನ್ನು ಹಸಿವಿನಿಂದ ಸಾಯಿಸಿ ಕಟ್ಟಡ ನಿರ್ಮಾಣಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಎಚ್ಚರಿಕೆ ನಮ್ಮೆಲ್ಲರಿಗೂ ಇರಬೇಕು ಎಂದು ಅವರು ಹೇಳಿದರು.


ಒಗ್ಗೂಡಿಸಿ ಸ್ವಾತಂತ್ರ್ಯ ಹೋರಾಟ: ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ ಮಾತನಾಡಿ, ಮಹಾತ್ಮ ಗಾಂಧೀಜಿ ಅವರು ವೈವಿಧ್ಯಮಯ ದೇಶದಲ್ಲಿ ಎಲ್ಲಾ ಧರ್ಮ, ಜಾತಿ ಜನರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಹೋರಾಟವನ್ನು ರೂಪಿಸಿದರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಎಂದು ಹೇಳಿದರು.

ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಗಾಂಧಿ ಭವನ ಉಪಾಧ್ಯಕ್ಷ ಪ್ರೊ.ಜಿ.ಬಿ. ಶಿವರಾಜು, ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಡೀನ್‌ಗಳಾದ ಕಾಂಬ್ಳೆ ಅಶೋಕ, ಡಾ. ಆನಂದಗೌಡ, ಹಣಕಾಸು ಅಧಿಕಾರಿ ಖಾದರ್ ಪಾಷಾ, ಮಹಾತ್ಮ ಗಾಂಧಿ ಅಧ್ಯಯನ ಪೀಠದ ಗೌರವ ನಿರ್ದೇಶಕಿ ಡಾ. ಆರ್.ಎಚ್. ಪವಿತ್ರಾ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ ಇತರರಿದ್ದರು

ಆಂದೋಲನ
Feb 8, 2023

‘ದ್ವೇಷಿಸಿದವರನ್ನೇ ಪ್ರೀತಿಸುತ್ತಿದ್ದರು ಗಾಂಧೀಜಿ’

ಯುವಜನರಿಗಾಗಿ ಗಾಂಧಿ ಕುರಿತು ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ, ಖಾದಿ ವಸ್ತುಗಳ ಮಾರಾಟ



ಮೈಸೂರು: ಗಾಂಧೀಜಿ ತಮ್ಮನ್ನು ಯಾರು ದ್ವೇಷಿಸಿದರೋ ಅವರನ್ನೇ ಪ್ರೀತಿಸುತ್ತಿದ್ದರು. ಯಾವ ವ್ಯಕ್ತಿಯನ್ನು ಬೇರೆಯವರು ಕಡೆಗಣಿಸುತ್ತಿದ್ದರೋ ಅಂತಹವರನ್ನೇ ಒಗ್ಗೂಡಿಸಿ ಹೋರಾಟಕ್ಕೆ ಸೇರಿಸಿ ಕೊಂಡಂತಹ ಶ್ರೇಷ್ಠ ವ್ಯಕ್ತಿ ಅವರು ಎಂದು ಗಾಂಧಿ ಸ್ಮಾರಕ ಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವತಿಯಿಂದ ‘ಯುವಜನರಿಗಾಗಿ ಗಾಂಧಿ’ ಕುರಿತು ಒಂದು ದಿನದ ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ ಹಾಗೂ ಖಾದಿ ವಸ್ತುಗಳ ಮಾರಾಟ ಮತ್ತು ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಗಾಂಧೀಜಿ ಅವರ ಇಡೀ ಬದುಕಿನಲ್ಲಿ ಎಲ್ಲರನ್ನೂ ಪ್ರೀತಿಸಿದರು. ಯಾರನ್ನೂ ದ್ವೇಷಿಸಲಿಲ್ಲ. ದೇಶಕ್ಕಾಗಿ ಹೋರಾಟ ಮಾಡಿದವರಲ್ಲಿ ಗಾಂಧೀಜಿ ಪ್ರಮುಖರು. ಗಾಂಧಿಜೀ ಇಡೀ ವಿಶ್ವಕ್ಕೆ ನಾಯಕರಾಗಿದ್ದರು. ಭಾರತ ಬಿಟ್ಟು ಗಾಂಧಿ ಇಲ್ಲ, ಗಾಂಧಿ ಬಿಟ್ಟು ಭಾರತ ಇಲ್ಲ ಎಂದು ಅಭಿಪ್ರಾಯಪಟ್ಟರು. ನಾವುಗಳು ಹಣಕಾಸು ದುಡಿಯುವ ಯಂತ್ರಗಳಾಗಬಾರದು.

ದೇಶಕ್ಕಾಗಿ ಹೋರಾಟ ಮಾಡಿ ಬದುಕನ್ನು ರೂಪಿಸಿಕೊಳ್ಳುವವ ರಾಗಬೇಕು. ಸತ್ಯಕ್ಕೆ ಹತ್ತಿರ ಇದ್ದಷ್ಟು ಗಾಂಧೀ ಅವರ ಹತ್ತಿರಕ್ಕೆ ಹೋದಂತೆ, ಅವರು ಬಳಸುತ್ತಿದ್ದ ಉಡುಪುಗಳನ್ನೇ ತೊಡಬೇಕಾಗಿಲ್ಲ ಅವರ ತತ್ವ ಆದರ್ಶಗಳನ್ನು ಪಾಲಿಸಬೇಕಿದೆ. ತತ್ವ, ಅಹಿಂಸೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕಿದೆ. ಗಾಂಧೀಜಿಯವರ ಬದುಕು, ಬೋಧನೆ, ತತ್ವಾದರ್ಶಗಳು ನಮ್ಮೆಲ್ಲರ ಹೃದಯದಲ್ಲಿ ಎಂದಿಗೂ ಅಜರಾಮರ. ಅವರು ಹೇಳಿದ ಅನೇಕ ಮಾತುಗಳು ಇವತ್ತಿಗೂ ಸತ್ಯ ಎಂದರು.

ರಂಗಕರ್ಮಿ ಪ್ರಸನ್ನ ಹೆಗ್ಗೋಡು ಮಾತನಾಡಿ, ಗಾಂಧೀಜಿಯವರ ಮುಖ್ಯ ತತ್ವಗಳಲ್ಲಿ ಸತ್ಯವು ಒಂದು. ನಿಜ ಅಥವಾ ಸತ್ಯದ ಪರಿಶೋಧನೆ ಎಂಬ ವಿಸ್ತೃತ ಉದ್ದೇಶಕ್ಕಾಗಿ ಗಾಂಧೀಜಿಯವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ತಮ್ಮ ತಪ್ಪುಗಳಿಂದಲೇ ಕಲಿತು, ತಮ್ಮ ಮೇಲೆಯೇ ಪ್ರಯೋಗಗಳನ್ನು ಮಾಡಿಕೊಂಡು ಸತ್ಯದ ಮಾರ್ಗವನ್ನು ಸಾಧಿಸಲು ಪ್ರಯತ್ನಿಸಿದರು. ಈ ಹಿಂದೆ ಎಲ್ಲ ಧರ್ಮದ ಮಹನೀಯರ ವಿಚಾರಗಳನ್ನು ಅವರವರ ಜೀವನ ಶೈಲಿ ಮೂಲಕ ತಿಳಿದುಕೊಳ್ಳುತ್ತಿದ್ದರು. ಜಂಗಮಕ್ಕೆ ಸ್ಥಾವರ- ಸ್ಥಾವರಕ್ಕೆ -ಜಂಗಮ ಮುಖ್ಯವಾಗಿದೆ. ಸ್ಥಾವರ ಹಾಗೂ ಜಂಗಮದ ನಡುವೆ ಸಮಾನತೆಯನ್ನು ಸರಿಯಾದ ರೀತಿಯಲ್ಲಿ ರೂಪಿಸಿದರೆ ಮಾತ್ರ ಉತ್ತಮವಾದ ಸಮಾಜ ನಿರ್ಮಿಸಬಹುದು ಎಂದರು.

ಇಂದು ಹೆಚ್ಚು ಪುಸ್ತಕ ಬಳಸುವ ಮೊದಲು ಮೊಬೈಲ್ ನಲ್ಲಿಯೇ ಎಲ್ಲ ಮಾಹಿತಿಯನ್ನು ಪಡೆದುಕೊಳ್ಳುವಂತಹ ಬೆಳವಣಿಗೆ ಆಗಿದೆ. ನಾವು ಬೇರೆ, ಧರ್ಮ ಬೇರೆ ಎಂಬುದನ್ನು ರೂಢಿಸಿಕೊಂಡು ಒಬ್ಬರಿಗೊಬ್ಬರ ಜೊತೆ ವೈರತ್ವವನ್ನು ಹುಟ್ಟುಹಾಕುವ ಬದಲು ಎಲ್ಲರೂ ಒಂದೇ ಎಂಬ ಮನೋಭಾವ ಬೆಳೆಸಿಕೊಳ್ಳೋಣ ಎಂದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಮಹಾತ್ಮ ಗಾಂಧಿ ಅಧ್ಯಯನ ಪೀಠದ ಗೌರವ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರ, ಗಾಂಧಿ ಸ್ಮಾರಕ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಉಪನ್ಯಾಸ ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಭಿಮತ

'ಗಾಂಧಿ ತತ್ವಕ್ಕೆ ಶರಣು; ಅಹಿಂಸಾವಾದಿಗಳ ಸಂಖ್ಯೆ ಹೆಚ್ಚಳ'



ಮೈಸೂರಿನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಪ್ರಯುಕ್ತ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಗಾಂಧೀಜಿ ಆಲೋಚನೆಗಳು ಕುರಿತು ನಾಡೋಜ ಡಾ.ವೂಡೇ ಪಿ.ಕೃಷ್ಣ, ಮಾತನಾಡಿದರು. ಜಿ.ಬಿ.ಶಿವರಾಜು, ಡಾ.ಎಂ.ಬಿ.ಸುರೇಶ್, ಸಂಯೋಜಕ ಡಾ.ಬಿ.ಚಂದ್ರಶೇಖರ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು: ಭಾರತ ಸೇರಿದಂತೆ ಜಗತ್ತಿನಲ್ಲಿ ಗಾಂಧಿ ವಿಚಾರಧಾರೆ, ತತ್ವಗಳಿಗೆ ಶರಣಾಗುತ್ತಿರುವ ಪರಿಣಾಮ ಅಹಿಂಸಾವಾದಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಗಾಂಧಿ ಎಂಬುದು ಹೆಸರಲ್ಲ, ಅದೊಂದು ಸಮಾಜಕ್ಕೆ ಅಹಿಂಸಾವಾದದ ಮಾರ್ಗ ತೋರುವ ಶಕ್ತಿ ಎಂದು ನಾಡೋಜ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ನಗರದ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಪ್ರಯುಕ್ತ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಗಾಂಧೀಜಿ ಆಲೋಚನೆಗಳ' ಕುರಿತು ಅವರು ಮಾತನಾಡಿದರು.

ಗಾಂಧೀಜಿ ಅವರ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ದೊರೆಯಿತು. ತ್ಯಾಗ, ಅಹಿಂಸೆ ಮತ್ತು ಮಾನವತಾವಾದಿಯ ಬಗ್ಗೆ ಗಾಂಧೀಜಿ ಬೆಳಕು ಚೆಲ್ಲಿದರು. ಗಾಂಧೀಜಿ ಇಂದು ಭಾರತಕ್ಕೆ ಸೀಮಿತವಾಗದೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಮುಖ್ಯವಾಗಿದ್ದಾರೆ. ಅವರ ತತ್ವಗಳನ್ನು ಪ್ರೀತಿಸುವವರು, ವಿಚಾರಧಾರೆಗಳನ್ನು ಅರಿಯುತ್ತಿರುವವರ ಪ್ರಮಾಣ ಜಾಸ್ತಿಯಾಗುತ್ತಿರುವ ಕಾರಣ ಅಹಿಂಸಾವಾದಿಗಳು ಹೆಚ್ಚಾಗುತ್ತಿದ್ದಾರೆ ಎಂದು ಹೇಳಿದರು.

ಗಾಂಧೀಜಿ ಅವರನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಯುವ ಜನಾಂಗದಲ್ಲಿ ನಾಯಕತ್ವವನ್ನು ಯಾವ ರೀತಿ ರೂಪಿಸಬೇಕು ಎಂಬುದನ್ನು ಗಾಂಧೀಜಿ ಅವರ ಮೂಲಕ ತಿಳಿಯಬಹುದಾಗಿದೆ. ಜಾತಿ, ಧರ್ಮ, ಭಾಷೆ, ವರ್ಣ ಸೇರಿದಂತೆ ಯಾವುದೇ ತಾರತಮ್ಯ ಇಲ್ಲದೆ ಎಲ್ಲರೂ ಭಾವೈಕ್ಯತೆಯಿಂದ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಹಾಗಾಗಿಯೇ, ಇಂದು ಗಾಂಧಿ ಅವರ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚು ಚರ್ಚೆಗಳಾಗುತ್ತಿವೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಜಿ.ಬಿ.ಶಿವರಾಜು, ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಸಂಯೋಜಕ ಡಾ.ಬಿ.ಚಂದ್ರಶೇಖರ್ ಇನ್ನಿತರರು ಹಾಜರಿದ್ದರು.

ಪ್ರತಿನಿಧಿ
ಪ್ರಾದೇಶಿಕ ದಿನಪತ್ರಿಕೆ

08 Feb 2023

ಹಿರಿಯ ರಂಗಕರ್ಮಿ ಹೆಗ್ಗೋಡು ಪ್ರಸನ್ನ ಹೇಳಿಕೆ


ಪ್ರಾಧ್ಯಾಪಕರ ಅರ್ಹತೆ ಸಂಬಳದಲ್ಲಿ ನಿಗದಿ

ಪ್ರತಿನಿಧಿ ವರದಿ ಮೈಸೂರು

ಕುವೆಂಪು, ಬಿಎಂಶ್ರೀ ಅವರು ಪ್ರಾಧ್ಯಾಪಕರಾಗಿ ತಮ್ಮ ಹುದ್ದೆಗೆ ಗೌರವ ತಂದಿದ್ದಾರೆ. ನುಡಿದಂತೆ ನಡೆದು ಪಾಠ ಮಾಡಿದರು. ಇವತ್ತು ಪ್ರಾಧ್ಯಾಪಕರ ಅರ್ಹತೆಯನ್ನು ಸಂಬಳದಲ್ಲಿ ನಿಗದಿಮಾಡಿದ್ದೇವೆ ಎಂದು ಹಿರಿಯ ರಂಗಕರ್ಮಿ ಹೆಗ್ಗೋಡು ಪ್ರಸನ್ನ ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಹಾತ್ಮಗಾಂಧಿ ಅಧ್ಯಯನ ಪೀಠದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಯುವ ಜನರಿಗಾಗಿ ಗಾಂಧಿ ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ, ಖಾದಿ ವಸ್ತುಗಳ ಮಾರಾಟದಲ್ಲಿ ಮುಖ್ಯ ಭಾಷಣ ಮಾಡಿದರು.ಭಾರತ ಮಾತ್ರವಲ್ಲದೇ ವಿಶ್ವದಲ್ಲಿಯೇ ಪರಂಪರೆ, ಒಳ್ಳೆಯ ವಿಚಾರಗಳನ್ನು ಸಂಕೇತಗೊಳಿಸಲಾಗಿದೆ. ನಾವೆಲ್ಲರೂ ಸಂಕೇತಗಳ ಭ್ರಮೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದೇವೆ ಎಂದು ವಿಷಾದಿಸಿದರು.

ಒಳ್ಳೆಯ ವಿಚಾರಗಳಿಗೆ ಚೌಕಟ್ಟು ಕಟ್ಟುವುದು. ಮಂದಿರ ಸ್ಥಾಪನೆ, ಭವ್ಯ ನಗರಗಳ ನಿರ್ಮಾಣ, ಬೃಹತ್ ಕಾರ್ಖಾನೆ ಪ್ರಾರಂಭಿಸುವುದು. ಎಲ್ಲೋ ಉತ್ಪಾದಿಸಿದ ವಸ್ತುಗಳನ್ನು ಇನ್ನೆಲ್ಲಿಯೋ ಮಾರಾಟ ಮಾಡುವುದು. ಈ ಪದ್ಧತಿಯಲ್ಲಿ ಎಲ್ಲ ವಿಚಾರಗಳು ಸತ್ತು ಹೋಗುತ್ತಿವೆ. ಇದನ್ನು ವಿದ್ಯಾರ್ಥಿಗಳು ತಪ್ಪಿಸಬೇಕು ಎಂದು ಒತ್ತಾಯಿಸಿದರು.



ಧರ್ಮ ಬೇರೆ ಸಾರ್ವಜನಿಕ ಬದುಕು ಬೇರೆಯಾಗಿ ಧರ್ಮ ಕಟ್ಟಾಡುವವರ ವೇದಿಕೆಯಾಗಿದೆ. ಪಕ್ಕದ ಮನೆಯವನ ಧರ್ಮಕ್ಕಿಂತ ತನ್ನ ಧರ್ಮ ದೊಡ್ಡದು. ನೆರೆಯ ಮನೆಯವನ ದೇವರಿಗಿಂತ ತನ್ನ ದೇವರು ದೊಡ್ಡದೆಂದು ಕಿತ್ತಾಡುತ್ತಿದ್ದೇವೆ. ಸಾರ್ವಜನಿಕವಾಗಿ ಮಠಗಳನ್ನು ಮರ-ಗಿಡ ಬೆಳೆಯುದಂತೆ ಮಾಡಿದ್ದೇವೆ. ಇದು ಅಪಾಯಕಾರಿಯಾಗಿದೆ ಎಂದು ತಿಳಿಸಿದರು.

ಗಾಂಧೀಜಿಯನ್ನು ಪಾಲಿಸಬೇಕಾದರೆ ಲಂಗೋಟಿ ಹಾಕೊಂಡು ತಿರುಗುವಂತೆ ಹೇಳುವುದಿಲ್ಲ, 2 ಮೊಬೈಲ್ ಬಳಸುತ್ತಿದ್ದರೆ ಒಂದು ಮೊಬೈಲ್ ಬಳಸುತ್ತೇವೆಂದು ನಿರ್ಧರಿಸುವುದು ಗಾಂಧೀಜಿ ಕಡೆಗೆ ಒಂದು ಹೆಜ್ಜೆ ಇಟ್ಟಂತೆ ಎಂದು ಹೇಳಿದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ. ಕೃಷ್ಣ ಸಮಾರಂಭ ಉದ್ಘಾಟಿಸಿದರು. ಗಾಂಧಿ ಭವನ ಬೆಂಗಳೂರು ಉಪಾಧ್ಯಕ್ಷ ಪ್ರೊ.ಜಿ.ಬಿ. ಶಿವರಾಜು, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಡಾ.ಎಸ್.ಆನಂದಗೌಡ, ಹಣಕಾಸು ಅಧಿಕಾರಿ ಖಾದರ್ ಪಾಷಾ, ಶೈಕ್ಷಣಿಕ ಡೀನ್ ಕಾಂಬ್ಳೆ ಅಶೋಕ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಮುಕ್ತ ವಿ.ವಿ ಪ್ರೊ.ಕೆ.ಎಲ್.ಎನ್.ಮೂರ್ತಿ, ಡಾ.ಆರ್.ಎಚ್.ಪವಿತ್ರಾ, ಡಾ.ಎನ್.ಆರ್.ಚಂದ್ರೇಗೌಡ,ಡಾ.ರಾಮನಾಥಂ ನಾಯ್ಡು ಇದ್ದರು.

ಮೈಸೂರು ಮಿತ್ರ ಬುಧವಾರ 8 ಫೆಬ್ರವರಿ 2023

ಮುಕ್ತ ಗಂಗೋತ್ರಿಯಲ್ಲಿ 'ಯುವ ಜನರಿಗಾಗಿ ಗಾಂಧಿ' ಕಾರ್ಯಕ್ರಮ

ಗಾಂಧಿ ಮಾರ್ಗದ ಕಡೆಗೆ ತುರ್ತಾಗಿ ಹೊರಳದಿದ್ದರೆ ಭಾರೀ ಆಪತ್ತು ಕಾದಿದೆ

ನಾಟಕಕಾರ, ರಂಗಕರ್ಮಿ ಪ್ರಸನ್ನ ಆತಂಕ



'ಯುವ ಜನರಿಗಾಗಿ ಗಾಂಧಿ' ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಗಾಂಧಿ ಕುರಿತ ಚಿತ್ರ ಪ್ರದರ್ಶನವನ್ನು ನಾಟಕಕಾರ, ರಂಗಕರ್ಮಿ ಪ್ರಸನ್ನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ.ಕೃಷ್ಣ, ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು ಇನ್ನಿತರರು ವೀಕ್ಷಿಸಿದರು.

ಮೈಸೂರು, ಫೆ7(ಆರ್‌ಕೆಬಿ)– ಪ್ರಸ್ತುತ ಸಂದರ್ಭದಲ್ಲಿ ನಾವು ತುರ್ತಾಗಿ ಗಾಂಧಿ ಮಾರ್ಗದ ಕಡೆಗೆ ಹೊರಳದಿದ್ದರೆ ಮುಂದೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ನಾಟಕಕಾರ, ರಂಗಕರ್ಮಿ ಪ್ರಸನ್ನ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಮಹಾತ್ಮಾ ಗಾಂಧಿ ಪೀಠದ ವತಿಯಿಂದ ಮುಕ್ತ ಗಂಗೋತ್ರಿ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಯುವಜನರಿಗಾಗಿ ಗಾಂಧಿ' ಕುರಿತ ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ ಹಾಗೂ ಖಾದಿ ವಸ್ತುಗಳ ಮಾರಾಟ ಕಾರ್ಯಕ್ರಮದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಸ್ಥಾವರಗಳ ನಿರ್ಮಾಣಗಳಿಂದ ಮುಂದಿನ 100 ವರ್ಷದಲ್ಲಿ ಮನುಕುಲ ನಾಶವಾಗಲಿದೆ ಎಂದು ವಿಜ್ಞಾನಿ ಸ್ಟೀಫನ್ ಹಾಕಿಂಗ್ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, ಇಂತಹ ತುರ್ತಿನ ಸಮಯದಲ್ಲಿ ಗಾಂಧಿ ಮಾರ್ಗದ ಕಡೆ ಹೊರಳಬೇಕಾಗಿದೆ. ಜೀವನಶೈಲಿಯನ್ನು ಬದಲಿಸಿಕೊಳ್ಳಬೇಕಿದೆ. ಎರಡು ಮೊಬೈಲ್ ಬದಲು ಒಂದು ಬಳಸಿದರೆ ಸಾಕು. ನಾವು ಗಾಂಧಿ ಕಡೆಗೆ ಇಡುವ ಒಂದು ಹೆಜ್ಜೆಯಾಗಿದೆ ಎಂದು ತಿಳಿಸಿದರು.

ಇಂದು ಒಳ್ಳೆಯ ವಿಚಾರಗಳನ್ನು ಸಂಕೇತಗಳನ್ನಾಗಿ ಮಾಡಿದ್ದಲ್ಲದೇ ಚೌಕಟ್ಟಿನಲ್ಲಿ ಬಂಧಿಸಿಡಲಾಗಿದೆ. ನಗರಗಳು ಬೆಳೆಯುತ್ತಿದ್ದಂತೆ, ಕಾಡುಗಳು ಅಳಿಯುತ್ತಿವೆ. ಎಲ್ಲವೂ ಮಾರಾಟದ ಸರಕಾಗಿವೆ. ಧರ್ಮಗಳು ಕಟ್ಟಡದ ವೇದಿಕೆಗಳಾಗಿವೆ. ಸತ್ಯ ವಿಚಾರಗಳನ್ನು ಹೇಳದೆ ಮಠ, ಮಂದಿರ, ಮಸೀದಿ, ಚರ್ಚ್‌ಗಳು ಕೇವಲ ಕಟ್ಟಡಗಳಾದರೆ, ಯುವ ಮನಸ್ಸುಗಳು ಅವುಗಳನ್ನು ತಿರಸ್ಕರಿಸಬೇಕು. ನಾವು ಸಂಕೇತಗಳ ಭ್ರಮಾಲೋಕದಿಂದ ಹೊರ ಬರಬೇಕು. ಸರಳ ಜೀವನ ಶೈಲಿ ಅಳವಡಿಸಿಕೊಂಡು, ಗಾಂಧಿ, ಬುದ್ಧ ಬಸವ, ಅಂಬೇಡ್ಕರ್ ಅವರನ್ನು ಅದರಲ್ಲಿ ಕಾಣಬೇಕು. ಸತ್ಯ ಎನಿಸುವುದನ್ನು ಧೈರ್ಯವಾಗಿ ಹೇಳುವಂತಾಗಬೇಕು ಎಂದು ಹೇಳಿದರು.

ಗಾಂಧೀಜಿ ಯಂತ್ರವನ್ನು ವಿರೋಧಿಸುತ್ತಿರಲಿಲ್ಲ. ಆದರೆ ಇಂದು ಕಂಪ್ಯೂಟರ್‌ನಿಂದ ಕೃತಕ ಬುದ್ಧಿಮತ್ತೆ ಕಾಲಕ್ಕೆ ಬಂದಿದ್ದೇವೆ. ಎಲ್ಲವನ್ನೂ ಆ್ಯಪ್ ಮಾಡುವುದಾದರೆ ನಮಗೇನು ಕೆಲಸವಿದೆ ಎಂದು ಪ್ರಶ್ನಿಸಿದರು. ಜಂಗಮ ಕ್ರಿಯಾತ್ಮಕ, ಸ್ಥಾವರವೆಂದರೆ ಕಟ್ಟಡ. ಇವೆರಡನ್ನು ಗಾಂಧೀಜಿ ದೈವಿ ಸಂಬಂಧವಾಗಿ ನೋಡಿದರು. ಈ ಎರಡರಲ್ಲೂ ಒಂದು ದೊಡ್ಡದಾದರೆ ಅನಾಹುತ ನಡೆಯುತ್ತದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ.ಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಡಾ.ಎನ್.ಆನಂದಗೌಡ, ಹಣಕಾಸು ಅಧಿಕಾರಿ ಖಾದರ್ ಪಾಷಾ, ಶೈಕ್ಷಣಿಕ ಡೀನ್ ಕಾಂಬ್ಳೆ ಅಶೋಕ್, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಅಧ್ಯಯನ ಕೇಂದ್ರದ ಡೀನ್ ಡಾ.ರಾಮನಾಥಂ ನಾಯ್ಡು, ಮಹಾತ್ಮ ಗಾಂಧಿ ಅಧ್ಯಯನ ಪೀಠ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರಾ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಪಿ.ಆರ್.[illegible] ಕುಮಾರಿ, ಡಾ.ಎನ್.ಆರ್.ಚಂದ್ರೇಗೌಡ, ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿದ್ದರು.

ಗಮನ ಸೆಳೆದ 'ಗಾ

'ಯುವಜನರಿಗಾಗಿ ಗಾಂಧಿ' ಕಾರ್ಯಕ್ರಮದಲ್ಲಿ ವಿಶೇಷವಾಗಿ ಗಮನ ಸೆಳೆದದ್ದು 'ಗಾಂಧಿ ಲೋಕ' ಇಲ್ಲಿ ಖಾದಿ ಬಟ್ಟೆ, ಕರಕುಶಲ ವಸ್ತುಗಳು, ಸಿರಿಧಾನ್ಯದ ತಿನಿಸುಗಳು, ನೂಲುವ ಚರಕ, ನೈಸರ್ಗಿಕ ಒಡವೆಗಳು ಯುವಜನರನ್ನು ಆಕರ್ಷಿಸಿದವು. ಇಲ್ಲಿಗೆ ಭೇಟಿ ನೀಡಿದ ವಿವಿಧ ಕಾಲೇಜು ವಿದ್ಯಾರ್ಥಿಗಳು ತಮಗಿಷ್ಟವಾದ ಖಾದಿ ಬಟ್ಟೆ ಖರೀದಿಸಿದರು. ಸಿರಿಧಾನ್ಯದ ತಿನಿಸುಗಳನ್ನು ಸವಿದರು ಛಾಯಾಚಿತ್ರ ಪ್ರದರ್ಶನದಲ್ಲಿ ಗಾಂಧೀಜಿಯವರ ಅಪರೂಪದ ಚಿತ್ರಗಳು ಕಂಡು ಸಂತಸಪಟ್ಟರು.

ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ
ಬುಧವಾರ • ಫೆಬ್ರುವರಿ 8, 2023

ಮುಕ್ತ ಗಂಗೋತ್ರಿಯಲ್ಲಿ ಗ್ರಾಮ್ಯ ಭಾರತ ಅನಾವರಣ: ರಂಗಕರ್ಮಿ ಪ್ರಸನ್ನ ಭಾಗಿ

ಖಾದಿ, ಸಿರಿಧಾನ್ಯದ 'ಗಾಂಧಿ ಲೋಕ'

ಪ್ರಜಾವಾಣಿ ವಾರ್ತೆ

ಮೈಸೂರು: ಉಡಲು ಖಾದಿ ಬಟ್ಟೆಗಳು.. ಆಪ್ತವೆನಿಸುವ ಕರಕುಶಲ ವಸ್ತುಗಳು.. ಬಾಲ್ಯದ ಖುಷಿ ನೆನಪಿಸುವ ಸಿರಿಧಾನ್ಯಗಳು.. ನೂಲುವ ಚರಕ- ನೈಸರ್ಗಿಕ ಒಡವೆಗಳು..

ಮುಕ್ತ ಗಂಗೋತ್ರಿಯ ಆವರಣಕ್ಕೆ ಮಂಗಳವಾರ ನಗರದ ವಿವಿಧ ಕಾಲೇಜುಗಳಿಂದ ಬಂದಿದ್ದ ವಿದ್ಯಾರ್ಥಿಗಳನ್ನು ಮೇಳದ ವಸ್ತುಗಳು ಸೆಳೆದವು. ಅವುಗಳ ಮೂಲಕವೇ 'ಬಾಪೂಜಿ' ಕನಸಿನ ಗ್ರಾಮ್ಯ ಭಾರತವನ್ನು ಅಪ್ಪುವ ವಾತಾವರಣ ಅಲ್ಲಿ ಒಡಮೂಡಿತ್ತು.

ಕೆಎಸ್‌ಒಯು, ಮಹಾಜನ, ಮಹಾರಾಣಿ ಕಾಲೇಜುಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಯುವಜನರಿಗಾಗಿ ಗಾಂಧಿ' ಉಪನ್ಯಾಸ, ಕೃತಿ ಬಿಡುಗಡೆ, ಗಾಂಧಿ ಬದುಕಿನ ಸಾಕ್ಷ್ಯಚಿತ್ರ ಹಾಗೂ ಛಾಯಾಚಿತ್ರ ಪ್ರದರ್ಶನ ಹಾಗೂ ಖಾದಿ ವಸ್ತುಗಳ ಮಾರಾಟ ಮೇಳದ 'ಗಾಂಧಿ ಲೋಕ'ದಲ್ಲಿ ವಿದ್ಯಾರ್ಥಿಗಳು ವಿಹರಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ರಂಗಕರ್ಮಿ ಪ್ರಸನ್ನ, 'ವಿಶ್ವದಲ್ಲಿ ಎಲ್ಲ ಒಳ್ಳೆಯ ವಿಚಾರಗಳನ್ನು ಸಂಕೇತಗಳನ್ನಾಗಿ ಮಾಡಲಾಗಿದೆ. ಧರ್ಮಗಳು ಕಟ್ಟಡದ ವೇದಿಕೆಗಳಾಗಿವೆ. ಸತ್ಯ ವಿಚಾರಗಳನ್ನು ಹೇಳದೇ ಮಠ, ಮಂದಿರ, ಮಸೀದಿ, ಚರ್ಚುಗಳು ಕೇವಲ ಕಟ್ಟಡಗಳಾದರೆ, ಅವುಗಳನ್ನು ಯುವ ಮನಸ್ಸುಗಳು ತಿರಸ್ಕರಿಸಬೇಕು' ಎಂದರು.

'ಒಳ್ಳೆಯ ವಿಚಾರ- ವ್ಯಕ್ತಿತ್ವಗಳನ್ನು ಸಂಕೇತಗಳನ್ನಾಗಿ ಮಾಡಿದ್ದಲ್ಲದೇ ಫೋಟೊಗಳಲ್ಲಿ ಬಂಧಿಸಲಾಗಿದೆ. ಹಾರಗಳು ಬೀಳುತ್ತಿವೆ. ಊದುಗಳು ಉರಿಯುತ್ತಿವೆ. ಎಲ್ಲವೂ ಮಾರಾಟದ ಸರಕಾಗಿದೆ. ಈ ಮಾರಾಟವನ್ನು ತಪ್ಪಿಸಬೇಕು. ಸತ್ಯ ಅಪ್ರಿಯವಾದರೂ ಧೈರ್ಯವಾಗಿ ಹೇಳಬೇಕು' ಎಂದು ಪ್ರತಿಪಾದಿಸಿದರು.

'ಸ್ಥಾವರಗಳನ್ನು ಕಟ್ಟುತ್ತಲೇ ಇರುವುದರಿಂದ ಬರುವ 100 ವರ್ಷದಲ್ಲಿ ಮನುಕುಲ ನಾಶವಾಗಲಿದೆಯೆಂದು ವಿಜ್ಞಾನಿ ಸ್ಟೀಫನ್ ಹಾಕಿಂಗ್ ಹೇಳಿದ್ದಾರೆ. ಗಾಂಧಿ ಮಾರ್ಗದ ಕಡೆ ಹೊರಳುವ ಕಠಿಣ ಸಮಯವಿದು. ಜೀವನಶೈಲಿ ಬದಲಿಸಿಕೊಳ್ಳಬೇಕಿದೆ. 2 ಮೊಬೈಲ್ ಬದಲು ಒಂದು ಬಳಸಿದರೆ ಸಾಕು. ಅದು ಕೂಡ ಗಾಂಧಿ ಕಡೆಗೆ ಇಡುವ ಒಂದು ಹೆಜ್ಜೆಯಾಗಿದೆ' ಎಂದರು.

'ಜಂಗಮ - ಕ್ರಿಯಾತ್ಮಕ, ಸ್ಥಾವರವೆಂದರೆ ಕಟ್ಟಡ. ಇವೆರಡನ್ನು ಗಾಂಧೀಜಿ ದೃಷ್ಟಿ ಸಂಬಂಧವಾಗಿ ನೋಡಿದರು. ಈ ಎರಡರಲ್ಲೂ ಒಂದು ದೊಡ್ಡದಾದರೆ ಅನಾಹುತ ನಡೆಯುತ್ತದೆ. ಗಾಂಧೀಜಿ ಯಂತ್ರ ವಿರೋಧಿಸುತ್ತಿರಲಿಲ್ಲ. ಇಂದು ಕಂಪ್ಯೂಟರ್‌ನಿಂದ ಕೃತಕ ಬುದ್ಧಿಮತ್ತೆ ಕಾಲಕ್ಕೆ ಬಂದಿದ್ದೇವೆ. ಎಲ್ಲವನ್ನೂ ಒಂದು ಆ್ಯಪ್ ಮಾಡುವುದಾದರೆ ನಮಗೇನು ಕೆಲಸವಿದೆ' ಎಂದು ಪ್ರಶ್ನಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ, ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ. ಜಿ.ಬಿ.ಶಿವರಾಜು, ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ, ಡಾ.ಎನ್. ಆನಂದಗೌಡ, ಹಣಕಾಸು ಅಧಿಕಾರಿ ಖಾದರ್ ಪಾಷಾ, ಶೈಕ್ಷಣಿಕ ಡೀನ್ ಕಾಂಬ್ಳೆ ಅಶೋಕ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಅಧ್ಯಯನ ಕೇಂದ್ರದ ಡೀನ್ ಡಾ.ರಾಮನಾಥಂ ನಾಯ್ಡು, ಮಹಾತ್ಮ ಗಾಂಧಿ ಅಧ್ಯಯನ ಪೀಠ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರಾ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ವಿ. ಆರ್.[illegible], ಡಾ.ಎಸ್.ಆರ್. ಚಂದ್ರೇಗೌಡ, ಪ್ರೊ.ಕೆ.ಎಲ್.ಎನ್. ಮೂರ್ತಿ ಇದ್ದರು.

ಮುಖ್ಯಾಂಶಗಳು

- ಸತ್ಯವನ್ನು ಧೈರ್ಯವಾಗಿ ಹೇಳಿ
- ಸರಳ ಜೀವನಶೈಲಿ ಅಳವಡಿಸಿಕೊಳ್ಳಿ
- ವಿದ್ಯಾರ್ಥಿಗಳಿಗೆ ಪ್ರಸನ್ನ ಸಲಹೆ

ನೆರೆಹೊರೆಯವನ ಧರ್ಮಕ್ಕಿಂತ ತನ್ನ ಧರ್ಮ ದೊಡ್ಡದೆನ್ನುತ್ತಾ ಕಚ್ಚಾಡುತ್ತಿದ್ದೇವೆ. ಪ್ರತಿಮೆ, ಸ್ಥಾವರಗಳನ್ನು ಕಟ್ಟುತ್ತಾ ಮರ-ಗಿಡ ಬೆಳೆಯದಂತೆ ಮಾಡಿದ್ದೇವೆ

ಪ್ರಸನ್ನ, ರಂಗಕರ್ಮಿ



ಮೈಸೂರಿನ ಮುಕ್ತ ಗಂಗೋತ್ರಿಯ ಮಹಾತ್ಮ ಗಾಂಧಿ ಅಧ್ಯಯನ ಪೀಠವು ಮಂಗಳವಾರ ಆಯೋಜಿಸಿದ್ದ 'ಯುವಜನರಿಗಾಗಿ ಗಾಂಧಿ' ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ರಂಗಕರ್ಮಿ ಪ್ರಸನ್ನ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ, ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಪೀಠದ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರಾ ಛಾಯಾಚಿತ್ರ ವೀಕ್ಷಿಸಿದರು

ಗಾಂಧೀಜಿ ಸಕ್ಕರೆ ಪಾಠ!

ಪ್ರಸನ್ನ ಅವರು ಹೇಳಿದ 'ಗಾಂಧೀಜಿ ಸಕ್ಕರೆ ಪಾಠ'ದ ಕಥೆ ವಿದ್ಯಾರ್ಥಿಗಳನ್ನು ಸೆಳೆಯಿತು.

'ಸಾಬರಮತಿ ಆಶ್ರಮಕ್ಕೆ ನೆಹರೂ, ಪಟೇಲ್ ಸೇರಿದಂತೆ ಹಲವು ಮುಖಂಡರು, ನೂರಾರು ಮಹಿಳೆಯರು- ಮಕ್ಕಳೂ ಬಂದಿದ್ದರು. ಮಗುವಿನೊಂದಿಗೆ ಬಂದಿದ್ದ ತಾಯಿಯೊಂದಿಗೆ ಗಾಂಧೀಜಿ 10 ನಿಮಿಷ ಮಾತನಾಡಿದ್ದಲ್ಲದೆ, ಮುಂದಿನ ವಾರ ಬರುವಂತೆ ಹೇಳಿದ್ದರು. ಅದು ಅವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ಅವರಿಗೆ ಹಿಡಿಸಲಿಲ್ಲ. 'ಹಲವು ನಾಯಕರು ಕಾಯುತ್ತಿದ್ದಾರೆ. ನೀವು ಆ ಮಹಿಳೆ-ಮಗು ಜೊತೆ ಮಾತನಾಡುತ್ತಾ ಸಮಯ ಕಳೆದಿರಾ' ಎಂದು ದೇಸಾಯಿ ಅಸಮಾಧಾನ ವ್ಯಕ್ತಪಡಿಸಿದ್ದರು' ಎಂದು ಪ್ರಸನ್ನ ಸ್ಮರಿಸಿದರು.

'ಆಕೆಯ ಮಗು ಹೆಚ್ಚು ಸಕ್ಕರೆ ತಿನ್ನುತ್ತದಂತೆ. ತಪ್ಪಿಸಲು ಉಪಾಯ ಕೇಳಿ ಎಂದು ಕೇಳಿದ್ದಾಳೆ. ಆದರೆ ನನಗೂ ಸಕ್ಕರೆಯೆಂದರೆ ಇಷ್ಟ. ವಾರದ ನಂತರ ಬಂದರೆ ಸಕ್ಕರೆ ಹೇಗೆ ಬಿಡಿಸಬಹುದೆಂದು ಹೇಳುತ್ತೇನೆಂದು ಕಳುಹಿಸಿದ್ದೇನೆ ಎಂದು ಗಾಂಧಿ ಹೇಳಿದಾಗ ದೇಸಾಯಿ ಕಣ್ಣೀರಾಗಿದ್ದರು' ಎಂದು ಹೇಳಿದರು.

'ಯಾವುದೇ ಸಲಹೆ ನೀಡಬೇಕಾದರೂ ಸ್ವ ಅನುಭವ ಇರಬೇಕು. ಜೀವನಶೈಲಿಯಾಗಿಸಿಕೊಳ್ಳದೇ ಉತ್ತರ ನೀಡಬಾರದು. ನುಡಿದಂತೆ ನಡೆಯುವುದೇ ಗಾಂಧಿಮಾರ್ಗವಾಗಿದೆ' ಎಂದರು.

ಉದಯವಾಣಿ ಬೆಂಗಳೂರು
ಸೋಮವಾರ, ಫೆಬ್ರವರಿ 6, 2023

ರಸ್ತೆಗೆ ನಾರಾಯಣರ ಹೆಸರಿಡಿ

ಬೆಂಗಳೂರು: ನಗದ ಯಾವುದಾದರೂ ರಸ್ತೆಗೆ ಹೋರಾಟಗಾರ ನಾಡೋಜ ಡಾ.ಜಿ.ನಾರಾಯಣ ಹೆಸರಿಡಬೇಕು. ಈ ಬಗ್ಗೆ ಶೀಘ್ರದಲ್ಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ನಾಡೋಜ ವೂಡೇ ಪಿ.ಕೃಷ್ಣ ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘವು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ನಾಡೋಜ ಡಾ.ಜಿ.ನಾರಾಯಣ ಜನ್ಮ ಶತಮಾನೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಿ.ನಾರಾಯಣ್ ಅವರ ಹೆಸರಿನಲ್ಲಿ ರಸ್ತೆ, ವೃತ್ತಗಳು ಇಲ್ಲ ಎಂಬುದು ದುರಂತದ ಸ್ಥಿತಿ. ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆಯುವುದಾಗಿ ತಿಳಿಸಿದರು.

ಜನಪದ ಲೋಕದ ಮಾಜಿ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ ಮಾತನಾಡಿ, ಕನ್ನಡಕ್ಕೆ ಹಲವಾರು ಕೊಡುಗೆ ಕೊಟ್ಟಿರುವ ಜಿ.ನಾರಾಯಣ ಪ್ರತಿಮೆಯನ್ನು ಬೆಂಗಳೂರಿನಲ್ಲಿ ನಿರ್ಮಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದರು. ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ್ ಹಾನಗಲ್ಲ, ರಾಮಣ್ಣ ಎಚ್.ಕೋಡಿಹೊಸಹಳ್ಳಿ ಇತರರಿದ್ದರು.



ಪ್ರಜಾವಾಣಿ


ಸೋಮವಾರ • ಫೆಬ್ರವರಿ 6, 2023



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾರಾಯಣ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು (ಎಡದಿಂದ) ಹೋರಾಟಗಾರ ಆರೋಗ್ಯಪ್ಪ, ಶೇಷಾದ್ರಿಪುರಂ ಕಾಲೇಜಿನ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಹೋರಾಟಗಾರ ರಾಮಣ್ಣ ಕೋಡಿಹೊಸಹಳ್ಳಿ, ಫಿಲೋಮಿನ ರಾಜ್ ಅವರಿಗೆ ಪ್ರದಾನ ಮಾಡಲಾಯಿತು — ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಸೋಮವಾರ • ಫೆಬ್ರುವರಿ 6, 2023



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾರಾಯಣ ಸಂಸ್ಮತಿ ದತ್ತಿ ಪ್ರಶಸ್ತಿಯನ್ನು (ಎಡದಿಂದ) ಹೋರಾಟಗಾರ ಆರೋಗ್ಯಪ್ಪ, ಶೇಷಾದ್ರಿಪುರಂ ಕಾಲೇಜಿನ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಹೋರಾಟಗಾರ ರಾಮಣ್ಣ ಕೋಡಿಹೊಸಹಳ್ಳಿ, ಫಿಲೋಮಿನ ರಾಜ್ ಅವರಿಗೆ ಪ್ರದಾನ ಮಾಡಲಾಯಿತು – ಪ್ರಜಾವಾಣಿ ಚಿತ್ರ

ಜನ್ಮ ಶತಮಾನೋತ್ಸವದಲ್ಲಿ ಸಾಧಕರಿಗೆ ದತ್ತಿ ಪುರಸ್ಕಾರ

ಜಿ.ನಾರಾಯಣರ ಪ್ರತಿಮೆ ಸ್ಥಾಪನೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಎದುರು ಮಾಜಿ ಮೇಯರ್ ಡಾ.ಜಿ. ನಾರಾಯಣ ಅವರ ಪ್ರತಿಮೆ ಸ್ಥಾಪಿಸಬೇಕು' ಎಂದು ಜಾನಪದ ಲೋಕದ ಮಾಜಿ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ ಆಗ್ರಹಿಸಿದರು.

ನಗರದಲ್ಲಿ ಭಾನುವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘ ಆಯೋಜಿಸಿದ್ದ ಡಾ.ಜಿ. ನಾರಾಯಣ ಅವರ ಜನ್ಮ ಶತಮಾನೋತ್ಸವದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಹೋರಾಟದಲ್ಲಿ ನಾರಾಯಣರು ಜೈಲು ಸೇರಿದ್ದರು. ದೇಶದ ಅಭಿವೃದ್ಧಿಗೆ ಶ್ರಮಿಸಿದ್ದರು. ನಿಷ್ಠೆ, ಪ್ರಾಮಾಣಿಕತೆಯಿಂದ ಬದುಕಿದ್ದ ಅವರು ಕೊನೆಯವರೆಗೂ ಯಾವುದೇ ಮಾಸಾಶನ ಪಡೆದುಕೊಳ್ಳಲಿಲ್ಲ' ಎಂದರು.

'ಇದುವರೆಗೆ ಆಡಳಿತ ನಡೆಸಿ ರುವ ಸರ್ಕಾರಗಳು, ಅವರನ್ನು ಕಡೆಗಣಿಸಿವೆ. ಯಾವುದೇ ರಸ್ತೆ ಹಾಗೂ ಬಡಾವಣೆಗಳಿಗೂ ಅವರ ಹೆಸರಿಟ್ಟಿಲ್ಲ. ಇದು ನೋವಿನ ಸಂಗತಿ' ಎಂದು ಹೇಳಿದರು.

'ರಾಜಧಾನಿ ಜನರಿಗೆ ಮೊದಲು ಕಾವೇರಿ ನೀರು ಕಲ್ಪಿಸಿದ್ದರು. ಮೇಯರ್ ಆಗಿ ನಗರದ ಸಾಕಷ್ಟು ಬಡಾವಣೆಗಳನ್ನು ಅಭಿವೃದ್ಧಿಗೊಳಿಸಿದ್ದರು. ಜತೆಗೆ, ಪಾಲಿಕೆಯ ಎದುರು ಕೆಂಪೇಗೌಡ ಅವರ ಪ್ರತಿಮೆಯನ್ನು ನಿರ್ಮಿಸಿದ್ದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ' ಎಂದರು.

'ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಕನ್ನಡ ಕಾರ್ಯಕರ್ತರ ಪಡೆ ಕಟ್ಟಿಕೊಂಡು ಕನ್ನಡ ಉಳಿಸಲು ಹೋರಾಟ ನಡೆಸಿದ್ದರು. ಹೊರ ರಾಜ್ಯಗಳಲ್ಲೂ ಸಾಹಿತ್ಯ ಸಮ್ಮೇಳನ ನಡೆಸಿ, ಕನ್ನಡ ಜಾಗೃತಿ ಮೂಡಿಸಿದ್ದರು. ರಾಮನಗರದ ಜಾನಪದ ಲೋಕದ ನಿರ್ಮಾಣಕ್ಕೆ ಸರ್ಕಾರದಿಂದ ₹ 1 ಕೋಟಿ ಅನುದಾನ ತರಲು ಶ್ರಮಿಸಿದ್ದರು. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಶ್ರಮಿಸಿ ಆಡಳಿತದಲ್ಲಿ ಕನ್ನಡ ಜಾರಿಗೆ ಶ್ರಮಿಸಿದ್ದರು' ಎಂದು ಹೇಳಿದರು.

ಧರ್ಮಗುರು ಸೈಮನ್ ಬರ್ತಲೋಮಿಯಾ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲು, ಅಖಿಲ ಕರ್ನಾಟಕ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, ಜಿ.ನಾರಾಯಣ ಪ್ರತಿಷ್ಠಾನದ ಅಧ್ಯಕ್ಷ ನಾ.ಗೋಪಾಲಕೃಷ್ಣ ಇದ್ದರು.

ವಿಜಯ ಕರ್ನಾಟಕ VK

ಸೋಮವಾರ,6 ಫೆಬ್ರವರಿ 2023


ರಸ್ತೆಗೆ ಡಾ.ಜಿ.ನಾರಾಯಣ ಹೆಸರಿಡಲು ಶೀಘ್ರ ಮನವಿ

ಬೆಂಗಳೂರು: ನಗರದ ಯಾವುದಾದರೂ ರಸ್ತೆಗೆ ಹೋರಾಟಗಾರ ನಾಡೋಜ ಡಾ.ಜಿ.ನಾರಾಯಣ ಹೆಸರಿಡಲು ಸರಕಾರಕ್ಕೆ ಶೀಘ್ರ ಮನವಿ ಸಲ್ಲಿಸಲಾಗುವುದು ಎಂದು ನಾಡೋಜ ವೂಡೇ ಪಿ.ಕೃಷ್ಣ ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅಖಿಲ ಕರ್ನಾಟಕ ಕೆಥೋಲಿಕ ಕ್ರೈಸ್ತರ ಕನ್ನಡ ಸಂಘವು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ನಾಡೋಜ ಡಾ.ಜಿ.ನಾರಾಯಣ ಜನ್ಮ ಶತಮಾನೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜನಪದ ಲೋಕದ ಮಾಜಿ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ ಮಾತನಾಡಿ, ''ಕನ್ನಡಕ್ಕೆ ಹಲವಾರು ಕೊಡುಗೆ ಕೊಟ್ಟಿರುವ ಜಿ.ನಾರಾಯಣ ಪ್ರತಿಮೆಯನ್ನು ಬೆಂಗಳೂರಿನಲ್ಲಿ ನಿರ್ಮಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ರಾಜ್ಯದ ಕೆಥೋಲಿಕ್ ಕ್ರೈಸ್ತರು ಕನ್ನಡದಲ್ಲೇ ಪ್ರಾರ್ಥನೆ ಸಲ್ಲಿಸಲು ಹೋರಾಡುತ್ತಿದ್ದರು. ಆಗ ನಾರಾಯಣ ಅವರು ಹೋರಾಟವನ್ನು ಬೆಂಬಲಿಸಿ ನೇರವಾಗಿ ಪೋಪ್‌ಗೆ ಪತ್ರ ಬರೆದು, ಆ ಸಮುದಾಯದ ಬೆಂಬಲಕ್ಕೆ ನಿಂತಿದ್ದರು,'' ಎಂದು ಸ್ಮರಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ್ ಹಾನಗಲ್ಲ, ಕನ್ನಡ ಹೋರಾಟಗಾರ ರಾಮಣ್ಣ ಎಚ್.ಕೋಡಿಹೊಸಹಳ್ಳಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂಜೆ

Sunday 5th February 2023



ನಯನ ಸಭಾಂಗಣದಲ್ಲಿಂದು ನಡೆದ ಮಾಜಿ ಮೇಯರ್ ಡಾ. ಜಿ. ನಾರಾಯಣ ಜನ್ಮ ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಕಾಲೇಜಿನ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ, ಪ್ರೊ. ಪಿ. ಕೃಷ್ಣ ಹಿರಿಯ ಕನ್ನಡ ಹೋರಾಟಗಾರರಾದ ರಾಮಣ್ಣ ಎಚ್. ಕೋಡಿ ಹೊಸಹಳ್ಳಿ, ಆರೋಗ್ಯಪ್ಪ ಪಿಲೋಮಿನ ರಾಜ್ ಅವರಿಗೆ ಜಾನಪದ ಲೋಕದ ಮಾಜಿ ಅಧ್ಯಕ್ಷರಾದ ಡಾ. ಟಿ. ತಿಮ್ಮೇಗೌಡ ಅವರು ಡಾ. ಜಿ. ನಾರಾಯಣ ಸಂಸ್ಕೃತಿ ಪ್ರಶಸ್ತಿ ನೀಡಿ ಗೌರವಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ಲ, ಫಾದರ್ ಸೈಮನ್ ಬರ್ತಲೋಮಿಯೊ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ರಫಾಯಿಲ್‌ರಾಜ್, ಗೋಪಾಲ್‌ಕೃಷ್ಣ ಮತ್ತಿತರರಿದ್ದರು.


ಸಂಜೆವಾಣಿ
ಭಾನುವಾರ 5 ಫೆಬ್ರವರಿ 2023



ನಗರದಲ್ಲಿ ನಡೆದ ಮಾಜಿ ಮೇಯರ್ ನಾಡೋಜ ದಿ.ಡಾ.ಜಿ ನಾರಾಯಣ ಅವರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ.ವೂಡೆ ಪಿ ಕೃಷ್ಣ ಅವರು ಉದ್ಘಾಟಿಸಿದರು,ಹಲವಾರು ಗಣ್ಯರು ಇದ್ದರು.

ಟೈಮ್ಸ್ ಆಫ್ ಕರ್ನಾಟಕ

ಶುಕ್ರವಾರ, ೩ ಫೆಬ್ರವರಿ 2023




ಉದ್ಘಾಟನೆ... ಮಲ್ಲತಹಳ್ಳಿಯ ಕಲಾಗ್ರಾಮದಲ್ಲಿ ಸಪ್ತಗಿರಿ ಗ್ಲೋಬಲ್ ಟ್ರಸ್ಟಿನ ಉದ್ಘಾಟನೆ ಹಾಗೂ ಮಾಘ ಸಾಂಸ್ಕೃತಿಕ ಸಮಾರಂಭ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಬುಧವಾರ ಏರ್ಪಡಿಸಲಾಗಿತ್ತು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸಪ್ತಗಿರಿ ಗ್ಲೋಬಲ್ ಟ್ರಸ್ಟ್ ಉದ್ಘಾಟಿಸಿ ಅಭಿನಂದನೆ ಸಲ್ಲಿಸಿದರು. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪಾವಗಡ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ. ಕೃಷ್ಣ, ಎನ್.ಟಿ.ಪಿ.ಸಿ ಮುಖ್ಯ ಸಲಹೆಗಾರ ಎಂ.ಬಿ.ಜಯರಾಮ್, ಅಬಕಾರಿ ಇಲಾಖೆಯ ಉಪ ಆಯುಕ್ತ ಬಿ.ಆರ್.ಹಿರೇಮಠ್, ಉದ್ಯಮಿ ಎಸ್.ಟಿ.ಉದಯ್ ಕುಮಾರ್, ಪ್ರಬಂಧ ಪ್ರವೀಣ ಅ.ನಾ.ಪ್ರಹ್ಲಾದ ರಾವ್, ವಾಸ್ತುಶಿಲ್ಪ ತಜ್ಞ ಬಿ.ಕೆ. ಮುರಳೀಧರ, ಪಾಲಿಕೆ ಮಾಜಿ ಸದಸ್ಯ ಎ.ಎ.ಸತ್ಯನಾರಾಯಣ, ಅನುಪಮ ಪಂಚಾಕ್ಷರಿ, ಎಂ.ಮುರಳೀಧರ ಹಂಸಜ್ಯೋತಿ, ತೇಜಸ್ವಿನಿ ರಾಜೇಶ್. ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆದಿಚುಂಚನಗಿರಿ

ಸಂಚಿಕೆ : 03 ಫೆಬ್ರವರಿ 2023

ದಿನಾಂಕ 18.1.2023ರಂದು ಬೆಂಗಳೂರಿನ ವಿಜಯನಗರದಲ್ಲಿರುವ ಬಿಜಿಎಸ್ ಕ್ರೀಡಾಂಗಣ ಏರ್ಪಡಿಸಿದ್ದ ಪರಮಪೂಜ್ಯ ಗುರೂಜಿಯವರ 78ನೇ ಜನ್ಮ ದಿನೋತ್ಸವ ಮಹೋತ್ಸವವು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿತು. ಪರಮಪೂಜ್ಯ ಜಗದ್ಗುರು ಡಾ|| ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು. ಪೂಜ್ಯ ಶ್ರೀ ಶ್ರೀ ಸೌಮ್ಯನಾಥಸ್ವಾಮೀಜಿರವರು. ಸಚಿವರಾದ ಶ್ರೀ ವಿ.ಸೋಮಣ್ಣರವರು. ಪದ್ಮಶ್ರೀ ಡಾ. ದೊಡ್ಡರಂಗೇಗೌಡರು. ಶ್ರೀ ವಿ. ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷರಾದ ಶ್ರೀಮತಿ ಶೈಲಜಾ ಸೋಮಣ್ಣರವರು. ನಾಡೋಜ ಡಾ. ವೊಡೇ ಪಿ. ಕೃಷ್ಣರವರು ಮುಂತಾದ ಗಣ್ಯರು ಉಪಸ್ಥಿತರಿದ್ದರು.



ಸಿಎಂ ಬೊಮ್ಮಾಯಿ ಅಭಿಮತ | ಗಾಂಧಿ ಸ್ಮರಣೆ ಗಾಂಧಿ ನಮನ

ಅಹಿಂಸೆ ಪಾಲನೆ ಕಷ್ಟದ ಕೆಲಸ

ಬೆಂಗಳೂರು: ಹೃದಯ ಹೇಳುವುದೇ ಮಹಾತ್ಮಾ ಗಾಂಧಿ ಅವರ ವಿಚಾರವಾಗಿದ್ದರೆ, ಹೃದಯ ಮಾತ ನಾಡುವ ವಿಚಾರವೇ ಅವರ ಆಚಾರವಾಗಿತ್ತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿವೇಕ ಯುಗ ಮತ್ತು ಗಮ್ಯ ಫೌಂಡೇಷನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ ವಿಧಾನಸೌಧದ ಬಳಿ ಆಯೋಜಿಸಿದ್ದ ಗಾಂಧಿ ಸ್ಮರಣೆ ಗಾಂಧಿ ನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಚಾರಗಳೇ ಅವರ ಬದುಕಾಗಿತ್ತು ಎಂದು ಹೇಳಿದರು.

ಅಹಿಂಸೆ ಬಗ್ಗೆ ಗಾಂಧಿ ಗಟ್ಟಿಯಾಗಿ ಪ್ರತಿಪಾದನೆ ಮಾಡಿದ್ದರು. ಹಿಂಸೆ ಅನ್ನೋದು ಅತ್ಯಂತ ಹೇಡಿತನದ ಕೆಲಸ. ಆದರೆ, ಅಹಿಂಸೆಯಿಂದ ನಡೆದುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಗಾಂಧಿ ಅವರು ಬಂದದ್ದೆನ್ನೆಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ ಜನರಿಗೆ ತಿಳಿಹೇಳಿದರು. ಎಲ್ಲವನ್ನೂ ಮೀರಿ ಬದುಕಿ ತೋರಿಸಿದರು. ಒಬ್ಬ ವ್ಯಕ್ತಿಯ ಮೌಲ್ಯಾಧಾರಿತ ವಾಗಿರುವ ಬದುಕು, ಸತ್ಯ ಮತ್ತು ದೇಶ ಪ್ರೇಮದಿಂದ ಕೂಡಿರುವ ಚಿಂತನೆ, ಶ್ರೇಷ್ಠ ಮಾನವತಾವಾದಿ ಮಹಾತ್ಮನ ಸ್ಮರಣೆಯೇ ನಿಜವಾದ ಪೂಜೆ ಎಂದರು.

ದೇಶದ ಅಭಿಪ್ರಾಯ ಬದಲಿಸಿದ ಗಾಂಧಿ: ಗಾಂಧಿ ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪ್ರತಿನಿಧಿಸಿದ ಏಕೈಕ ಆತ್ಮ. ಭಾರತದ ಬಗ್ಗೆ ಅನೇಕ ಅಭಿಪ್ರಾಯಗಳು ಇದ್ದವು. ಎರಡನೇ ವಿಶ್ವ ಯುದ್ಧ ಮುಗಿದು ಎಲ್ಲೆಡೆ ಪ್ರಜಾಪ್ರಭುತ್ವ ಸ್ಥಾಪನೆ ಆಗುತ್ತಿರುವಾಗ ಇಡೀ ವಿಶ್ವವು ಭಾರತದ ಬಗ್ಗೆ ಗೌರವಯುತವಾಗಿ ನಡೆದು ಕೊಳ್ಳುವಂತೆ ಮಾಡಿದ್ದು ಗಾಂಧಿ. ಅವರ ಜೀವನದಲ್ಲಿ ಎಲ್ಲವೂ ಇದೆ. ಪರಿವರ್ತನೆ ಇದೆ, ಬದಲಾವಣೆ ಇದೆ, ತಪ್ಪುಗಳು ಇವೆ, ತಪ್ಪೊಪ್ಪಿ ಕೊಂಡಿರುವುದೂ ಇದೆ. ಅವನ್ನು ಸರಿಪಡಿ ಸಿಕೊಂಡಿದ್ದೂ ಇದೆ. ಅವಮಾನ ಅಪಮಾನ ಇದೆ. ಹಠವೂ ಇದೆ ಜಯವೂ ಇದೆ ಎಂದರು.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿ ಡಾ. ಶಿವರಾಜ್ ಪಾಟೀಲ್, ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ, ಡಿ.ಎಂ. ಹೆಗ್ಡೆ ಮತ್ತಿತರರು ಉಪಸ್ಥಿತರಿದ್ದರು.

ವಿಜಯವಾಣಿ ಚಿತ್ರ



ವಿಧಾನಸೌಧ ಬಳಿ ಬುಧವಾರ ಆಯೋಜಿಸಿದ್ದ ಗಾಂಧಿ ಸ್ಮರಣೆ ಗಾಂಧಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳೊಂದಿಗೆ ಸಿಎಂ ಬೊಮ್ಮಾಯಿ ಮಾತುಕತೆ.

ಸಂಯುಕ್ತ ಕರ್ನಾಟಕ

ಗುರುವಾರ, 2, ಫೆಬ್ರವರಿ, 2023


ಮಹಾತ್ಮಾಗಾಂಧಿ ಶ್ರೇಷ್ಠ ಮಾನವತಾವಾದಿ

ಸಂ.ಕ. ಸಮಾಚಾರ ಬೆಂಗಳೂರು

ಒಬ್ಬ ವ್ಯಕ್ತಿಯ ಮೌಲ್ಯಾಧಾರಿತವಾಗಿರುವ ಬದುಕು, ಸತ್ಯ ಮತ್ತು ದೇಶಪ್ರೇಮದಿಂದ ಕೂಡಿರುವ ಚಿಂತನೆ, ಹಾಗೂ ಶ್ರೇಷ್ಠ ಮಾನವತಾವಾದಿ ಮಹಾತ್ಮನ ಸ್ಮರಣೆಯೇ ನಿಜವಾದ ಪೂಜೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ವಿವೇಕ ಯುಗ ಮತ್ತು ಗಮ್ಯ ಫೌಂಡೇಶನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ ವಿಧಾನಸೌಧದ ಬೃಹತ್ ಮೆಟ್ಟಿಲುಗಳ ಬಳಿ ಆಯೋಜಿಸಿದ್ದ 'ಗಾಂಧೀ ಸ್ಮರಣೆ – ಗಾಂಧೀ ನಮನ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಾಂಧೀಜಿಯನ್ನು ಸ್ಮರಣೆ ಮಾಡಿದರೆ ಗಾಂಧೀಜಿಯನ್ನು ನಮನ ಮಾಡಿದಂತೆಯೇ. ಮನಯಷ್ಯನ ಸ್ಮೃತಿ ಪಟಲ ಒಳ್ಳೆಯದು ಕೆಟ್ಟದ್ದು ಎರಡನ್ನೂ ಹಿಡಿದಿಟ್ಟುಕೊಳ್ಳುತ್ತದೆ. ಅದೇ ಮೆದುಳು ನಮಗೆ ದಾರಿದೀಪವಾಗುವ ಮೌಲ್ಯಗಳನ್ನು ನೆನಪಿಟ್ಟುಕೊಳ್ಳಲು ಮಹತ್ವ ಕೊಟ್ಟರೆ ಅದಕ್ಕೆ ಹೆಚ್ಚು ಸ್ಥಾನ ಸಿಗುತ್ತೆ ಎಂದರು.

ಸೃಷ್ಟಿಕರ್ತನ ನೈಸರ್ಗಿಕವಾಗಿರುವ ಸೃಷ್ಟಿಯಲ್ಲಿ ಏನು ಬೇಕೆಂದು ತಿಳಿದುಕೊಳ್ಳುವ ಬುದ್ಧಿ ಮನುಷ್ಯನಲ್ಲಿ ಮಾತ್ರ ಇದೆ. ಮಹಾತ್ಮಾ ಗಾಂಧೀಜಿ ಅವರಿಗೆ ಮೆದುಳು – ಹೃದಯ ಒಂದೇ ಇತ್ತು. ಹೃದಯ ಹೇಳುವುದೇ ಅವರ ವಿಚಾರ ಆಗಿತ್ತು. ಹೃದಯ ಮಾತಾಡುವ ವಿಚಾರ ಅವರ ಆಚಾರವಾಗಿತ್ತು. ಆ ಆಚಾರ ವಿಚಾರಗಳೇ ಅವರ ಬದುಕಾಗಿತ್ತು. ಅಹಿಂಸೆಯ ಬಗ್ಗೆ ಗಾಂಧೀಜಿ ಗಟ್ಟಿಯಾಗಿ ಪ್ರತಿಪಾದನೆ ಮಾಡಿದ್ದರು. ಹಿಂಸೆ ಅನ್ನೋದು ಅತ್ಯಂತ ಹೇಡಿತನದ ಕೆಲಸ. ಅಹಿಂಸೆಯಿಂದ ನಡೆದುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಗಾಂಧೀಜಿ ಅವರು ಬಂದದ್ದೆನ್ನೆಲ್ಲವನ್ನೂ ಸಮಚಿತ್ತದಿಂಡ ಸ್ವೀಕರಿಸಿ ಜನರಿಗೆ ತಿಳಿಹೇಳಿದರು. ಎಲ್ಲವನ್ನೂ ಮೀರಿ ಬದುಕಿ ತೋರಿಸಿದ್ದು ಗಾಂಧೀಜಿ ಎಂದು ಹೇಳಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗಾಂಧಿ ಸ್ಮರಣ – ಗಾಂಧಿ ನಮನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಗಾಂಧೀಜಿ ಅವರು ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪ್ರತಿನಿಧಿಸಿದ ಏಕೈಕ ಆತ್ಮ. ಅಲ್ಲಿಯವರೆಗೂ ಭಾರತದ ಬಗ್ಗೆ ಅನೇಕ ಅಭಿಪ್ರಾಯಗಳು ಇದ್ದವು. ಎರಡನೇ ವಿಶ್ವಯುದ್ಧ ಮುಗಿದು ಎಲ್ಲೆಡೆ ಪ್ರಜಾಪ್ರಭುತ್ವ ಸ್ಥಾಪನೆ ಆಗುತ್ತಿರುವಾಗ ಇಡೀ ವಿಶ್ವವು ಭಾರತದ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳುವಂತೆ ಮಾಡಿದ್ದು ಮಹಾತ್ಮಾ ಗಾಂಧೀಜಿ ಅವರು. ಅವರ ಜೀವನದಲ್ಲಿಎಲ್ಲವೂ ಇದೆ. ಪರಿವರ್ತನೆ ಇದೆ, ಬದಲಾವಣೆ ಇದೆ, ತಪ್ಪುಗಳು ಇವೆ, ತಪ್ಪೊಪ್ಪಿಕೊಂಡಿರುವುದೂ ಇದೆ. ಅವನ್ನು ಸರಿಪಡಿಸಿಕೊಂಡಿದ್ದೂ ಇದೆ. ಅವಮಾನ ಅಪಮಾನ ಇದೆ. ಹಠವೂ ಇದೆ ಜಯವೂ ಇದೆ ಎಂದರು.

ಕಾರ್ಯಕ್ರಮದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ್ ಪಾಟೀಲ್, ಪ್ರಜಾವಾಣಿ ಮುಖ್ಯ ಸಂಪಾದಕರಾದ ರವೀಂದ್ರ ಭಟ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೆ ಪಿ.ಎಂ. ಕೃಷ್ಣ, ಡಿ ಎಂ ಹೆಗ್ಡೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕನ್ನಡಪ್ರಭ ಗುರುವಾರ 2.2.2023



ಬುಧವಾರ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಬಳಿ ಆಯೋಜಿಸಿದ್ದ 'ಗಾಂಧಿ ಸ್ಮರಣೆ- ಗಾಂಧಿ ನಮನ' ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾ. ಶಿವರಾಜ್ ಪಾಟೀಲ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಪಿ.ವೂಡೆ ಕೃಷ್ಣ, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಇತರರು ಉಪಸ್ಥಿತರಿದ್ದರು.

ಸುದ್ದಿ ಸಿಂಚನ

ಗಾಂಧಿ ಆಶಯದ ವಿರುದ್ಧ ಹೆಜ್ಜೆ ಸಲ್ಲದು: ಚೆನ್ನಸ್ವಾಮಿ

ಬೆಂಗಳೂರು: ಗಾಂಧೀಜಿ ಆಶಯದ ವಿರುದ್ಧವಾಗಿ ಹೆಜ್ಜೆ ಇಡುತ್ತಿರುವ ಸಮಾಜ ಆ ಮೂಲಕ ಪ್ರತಿದಿನ ಅವರನ್ನು ಕೊಲ್ಲುತ್ತಿದೆ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ವಿಷಾದಿಸಿದರು. 'ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ' ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಗಾಂಧಿ, ಅಂಬೇಡ್ಕರ್ ಹಾಗೂ ಕುವೆಂಪು ಕಂಡ ಕನಸಿಗೆ ವಿರುದ್ಧವಾಗಿ ಸಮಾಜ ನಡೆಯುತ್ತಿದೆ. ಕೋಮು ಸೌಹಾರ್ದತೆ ಮರೆಯಾಗಿದ್ದು, ಅನುದಿನವೂ ಗಾಂಧಿ ಕೊಲ್ಲಲ್ಪಡುತ್ತಿದ್ದಾರೆ. ಹಿಂದೆಂದೂ ಇಂತಹ ಪರಿಸ್ಥಿತಿಯನ್ನು ನೋಡಿರಲಿಲ್ಲ. ಸಂವಿಧಾನ ಅಪ್ರಸ್ತುತವಾಗಿರುವ ಸಂದರ್ಭ ಇಂದಿದ್ದು, ಇಂಥ ಪರಿಸ್ಥಿತಿ ಉಂಟಾಗಲು ಹೇಗೆ ಸಾಧ್ಯವಾಯಿತು ಎಂಬ ದೊಡ್ಡ ಪ್ರಶ್ನೆ ಕಾಡುತ್ತಿದೆ ಎಂದರು. ಕವಿ ಸುಬ್ಬು ಹೊಲೆಯಾರ್, ಕವಯತ್ರಿ ಎಚ್.ಎಲ್.ಪುಷ್ಪಾ, ದ್ವಾರನಕುಂಟೆ ಪಾತಣ್ಣ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ। ವೂಡೆ ಪಿ.ಕೃಷ್ಣ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್ ಇದ್ದರು.

'ಗಾಂಧಿ ಬಗ್ಗೆ ತಿಳಿಯದೆ ಪ್ರಶ್ನೆ ಮಾಡುವುದು ಮಹಾಪಾಪ'

ಬೆಂಗಳೂರು: ಮಹಾತ್ಮ ಗಾಂಧೀಜಿ ಅವರನ್ನು ಸಂಪೂರ್ಣವಾಗಿ ಓದಿಕೊಂಡು ಪ್ರಶ್ನಿಸುವುದರಲ್ಲಿ ಅರ್ಥವಿದೆ. ಆದರೆ, ಅವರ ಬಗ್ಗೆ ಓದದೆ, ತಿಳಿದು ಕೊಳ್ಳದೆ ಪ್ರಶ್ನೆ, ಟೀಕೆಗಳನ್ನು ಮಾಡುವುದು ಮಹಾಪಾಪದ ಕೆಲಸ ಎಂದು ಶಿಕ್ಷಣ ತಜ್ಞ ವೂಡೆ ಪಿ. ಕೃಷ್ಣ ಹೇಳಿದರು. ಗಾಂಧೀಜಿ ಹುತಾತ್ಮ ದಿನದ ಅಂಗವಾಗಿ 'ಕರ್ನಾಟಕ ಗಾಂಧಿ ಸ್ಮಾರಕ ನಿಧಿ' ಮತ್ತು 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ' ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ 'ಸರ್ವೋದಯ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್, ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕಿ ಪ್ರೊ.ಎಂ.ಎಸ್.ಆಶಾದೇವಿ, ವಾರ್ತಾ ಇಲಾಖೆಯ ನಿವೃತ್ತ ನಿರ್ದೇಶಕ ವಿಶುಕುಮಾರ್, ಹೋರಾಟಗಾರ ಜಿ.ಎನ್.ನಾಗರಾಜ್, ಚಿಂತಕ ನಟರಾಜ್ ಹುಳಿಯಾರ್ ಉಪಸ್ಥಿತರಿದ್ದರು.

ಪ್ರಜಾವಾಣಿ
ಗುರುವಾರ ● ಫೆಬ್ರುವರಿ 2, 2023


'ನಿಜ ಭಾರತ ಪ್ರತಿನಿಧಿಸಿದ ಏಕೈಕ ಆತ್ಮ ಗಾಂಧೀಜಿ'

'ಗಾಂಧಿ ಸ್ಮರಣೆ – ಗಾಂಧಿ ನಮನ': ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ಬಗೆಗಿನ ಅಭಿಪ್ರಾಯ ಬದಲಿಸಿದ್ದು ಗಾಂಧೀಜಿ. ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪ್ರತಿನಿಧಿಸಿದ ಏಕೈಕ ಆತ್ಮ ಗಾಂಧೀಜಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ವಿವೇಕ ಯುಗ ಮತ್ತು ಗಮ್ಯ ಫೌಂಡೇಷನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ಬುಧವಾರ ವಿಧಾನಸೌಧದ ಮೆಟ್ಟಿಲುಗಳ ಬಳಿ ಆಯೋಜಿಸಿದ್ದ 'ಗಾಂಧಿ ಸ್ಮರಣ-ಗಾಂಧಿ ನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



'ಗಾಂಧಿ ಸ್ಮರಣ–ಗಾಂಧಿ ನಮನ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿದ್ಯಾರ್ಥಿಗಳತ್ತ ಕೈ ಬೀಸಿದರು. ವಿವೇಕಯುಗ ಫೌಂಡೇಷನ್ ಅಧ್ಯಕ್ಷ ಡಾ.ಡಿ.ಎಂ ಹೆಗಡೆ ಇದ್ದರು. —ಪ್ರಜಾವಾಣಿ ಚಿತ್ರ

'ಎರಡನೇ ವಿಶ್ವಯುದ್ಧ ಮುಗಿದು ಎಲ್ಲೆಡೆ ಪ್ರಜಾಪ್ರಭುತ್ವ ಸ್ಥಾಪನೆ ಆಗುತ್ತಿರುವಾಗ ಇಡೀ ವಿಶ್ವವು ಭಾರತದ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳುವಂತೆ ಮಾಡಿದ್ದು ಮಹಾತ್ಮ ಗಾಂಧೀಜಿ' ಎಂದು ಸ್ಮರಿಸಿದರು.

'ಗಾಂಧೀಜಿ ಅವರ ಆಚಾರ-ವಿಚಾರಗಳೇ ಅವರ ಬದುಕಾಗಿತ್ತು. ಮಹಾತ್ಮ ಗಾಂಧೀಜಿ ಅವರಿಗೆ ಮಿದುಳು ಮತ್ತು ಹೃದಯ ಒಂದೇ ಇತ್ತು. ಹೃದಯ ಹೇಳುವುದೇ ಅವರ ವಿಚಾರವಾಗಿತ್ತು. ಹೃದಯ ಮಾತಾಡುವ ವಿಚಾರ ಅವರ ಆಚಾರವಾಗಿತ್ತು. ಆ ಆಚಾರ ವಿಚಾರಗಳೇ ಅವರ ಬದುಕಾಗಿತ್ತು. ಅಹಿಂಸೆಯ ಬಗ್ಗೆ ಗಾಂಧೀಜಿ ಗಟ್ಟಿಯಾಗಿ ಪ್ರತಿಪಾದಿಸಿದ್ದರು. ಹಿಂಸೆ ಅತ್ಯಂತ ಹೇಡಿತನದ ಕೆಲಸ. ಅಹಿಂಸೆಯಿಂದ ನಡೆದುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಗಾಂಧೀಜಿ ಅವರು ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ ಜನರಿಗೆ ತಿಳಿಹೇಳಿದರು. ಎಲ್ಲವನ್ನೂ ಮೀರಿ ಬದುಕಿ ತೋರಿಸಿದ್ದು ಗಾಂಧೀಜಿ' ಎಂದು ವಿವರಿಸಿದರು.

'ಗಾಂಧೀಜಿಯನ್ನು ಸ್ಮರಿಸಿದರೆ ಅವರಿಗೆ ನಮಿಸಿದಂತೆ. ಅವರ ಜೀವನದಲ್ಲಿ ಎಲ್ಲವೂ ಇದೆ. ಪರಿವರ್ತನೆ ಇದೆ. ತಪ್ಪುಗಳಿವೆ. ತಪ್ಪೊಪ್ಪಿಕೊಂಡಿರುವುದೂ ಇದೆ. ಅವನ್ನು ಸರಿಪಡಿಸಿಕೊಂಡಿದ್ದೂ ಇದೆ. ಅವಮಾನ ಇದೆ. ಹಟವೂ ಇದೆ, ಜಯವೂ ಇದೆ' ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲ, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ, ವಿವೇಕಯುಗ ಫೌಂಡೇಷನ್ ಅಧ್ಯಕ್ಷ ಡಿ.ಎಂ. ಹೆಗಡೆ ಇದ್ದರು.

ಉದಯವಾಣಿ

ಗುರುವಾರ, ಫೆಬ್ರವರಿ 2, 2023

ಸೇವೆ ವಾಟ್ಸಾಪ್ ಸ್ಟೇಟಸ್‌ಗೆ ಸೀಮಿತವಾಗದಿರಲಿ

ಬೆಂಗಳೂರು: ಪ್ರಮಾಣ ಪತ್ರ, ಅಂಕಪಟ್ಟಿ ನೀಡುವುದು ಶಿಕ್ಷಣದ ಧ್ಯೇಯೋದ್ದೇಶ ಅಲ್ಲ, ಹತ್ತಾರು ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಸಂಸ್ಕಾರ ತುಂಬಿ ಅವರು ಆದರ್ಶ ಜೀವನ ನಡೆಸಲು ಪ್ರೇರಣೆಯಾಗುವುದೇ ನಿಜವಾದ ಶಿಕ್ಷಣ ಎಂದು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಕೆ.ಎಂ.ನಂಜಪ್ಪನವರ 111ನೇ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ನಮ್ಮ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕು. ವೇಷಭೂಷಣದಲ್ಲಿ ಪಾಶ್ಚಾತ್ಯೀಕರಣ ಆಗಿರುವುದಕ್ಕಿಂದ ನಮ್ಮ ನಂಬಿಕೆಗಳ ಮೇಲೆ ಪಶ್ಚಿಮದ ಪ್ರಭಾವ ಗಾಢವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪರಂಪರೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಶಿಕ್ಷಣ ಸಂಸ್ಥೆಗಳು ಕೈಗೊಳ್ಳಬೇಕು ಎಂದು ತಿಳಿಸಿದರು.



ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಬೃಹತ್ ರಕ್ತದಾನ ಶಿಬಿರವನ್ನು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸಿದರು.

ಮುಂದೆ ಒಬ್ಬರಾದರೂ ನಮ್ಮನ್ನು ಸದಾ ನೆನಪಿಡುವಂತಹ ಕೆಲಸ ಮಾಡಬೇಕು. ಒಳ್ಳೆಯನಾಗಿರು, ಒಳ್ಳೆಯದನ್ನು ಮಾಡು ಎಂಬ ವಿವೇಕಾನಂದರ ವಾಣಿಯಂತೆ ಬದುಕು ರೂಪಿಸಿಕೊಳ್ಳಬೇಕು. ಸೇವೆ ಎಂಬುದು ವಾಟ್ಸಪ್ ಸ್ಟೇಟಸ್‌ಗೆ ಸೀಮಿತ ತೋರಿಕೆಯಾಗದೇ ನಮ್ಮ ಜೀವನದ ಕ್ರಮವಾಗಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿಯ ಮಾಜಿ ಸದಸ್ಯ ನಾಡೋಜ ಡಾ.ವೂಡೇ ಪಿ.ಕೃಷ್ಣ, ರೆಡ್ ಕ್ರಾಸ್‌ನ ರಕ್ತದಾನ ಕಾರ್ಯಕ್ರಮದ ಸಂಯೋಜಕ ರಾಜು ಚಂದ್ರಶೇಖರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಉಪಸ್ಥಿತರಿದ್ದರು.

ಹೊಸ ದಿಗಂತ
02 Feb 2023

ಗಾಂಧೀಜಿ ಸ್ಮರಣೆಯೇ ನಿಜವಾದ ಗೌರವ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಬೆಂಗಳೂರು: ಮಹಾತ್ಮ ಗಾಂಧೀಜಿಯ ಸ್ಮರಣೆಯೇ ಅವರಿಗೆ ಮಾಡುವ ನಿಜವಾದ ಗೌರವ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿವೇಕ ಯೋಗ ಮತ್ತು ಗಮ್ಯ ಫೌಂಡೇಶನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಇವುಗಳ ಸಂಯುಕ್ತ ಆಶ್ರಯದಲ್ಲಿ ವಿಧಾನಸೌಧದಲ್ಲಿ ಆಯೋಜಿಸಿದ್ದ ಗಾಂಧೀ ಸ್ಮರಣೆ -ಗಾಂಧೀ ನಮನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯನ್ನು ಸ್ಮರಣೆ ಮಾಡಿದರೆ ಗಾಂಧೀಜಿಯನ್ನು ನಮನಮಾಡಿದಂತೆಯೇ. ಮೊದಲು ಒಳ್ಳೆಯದು ಹಾಗೂ ಕೆಟ್ಟದನ್ನು ಹಿಡಿದಿಟ್ಟುಕೊಳ್ಳುತ್ತೇವೆ. ಅವುಗಳೇ ನಮಗೆ ದಾರಿ ದೀಪವಾಗುವ ಮೌಲ್ಯಗಳನ್ನು ನೆನಪಿಟ್ಟುಕೊಳ್ಳಲು ಮಹತ್ವ ಕೊಟ್ಟರೆ ಅದಕ್ಕೆ ಹೆಚ್ಚು ಸ್ಥಾನ ಸಿಗುತ್ತದೆ ಎಂದು ಹೇಳಿದರು.


ಗಾಂಧೀಜಿ ಅವರು ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪ್ರತಿನಿಧಿಸಿದ ವ್ಯಕ್ತಿ ಆಗಿ, ಅಲ್ಲಿಯವರೆಗೂ ಭಾರತದ ಬಗ್ಗೆ ಅನೇಕ ಅಭಿಪ್ರಾಯಗಳು ಇದ್ದವು. ಎರಡನೇ ವಿಶ್ವಯುದ್ಧ ಮುಗಿದು ಎಲ್ಲೆಡೆ ಪ್ರಜಾಪ್ರಭುತ್ವಸ್ಥಾಪನೆಯಾಗುತ್ತಿರುವಾಗ ಇಡೀ ವಿಶ್ವವು ಭಾರತದ ಬಗ್ಗೆ ಗೌರವಯುತವಾಗಿ ನೋಡುವಂತೆ ಮಾಡಿದ್ದು ಗಾಂಧೀಜಿಯವರು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ನ್ಯಾಯಮೂರ್ತಿ ಡಾ.ಶಿವರಾಜ್ ಪಾಟೀಲ್, ಪ್ರಜಾವಾಣಿ ಮುಖ್ಯ ಸಂಪಾದಕ ರವೀಂದ್ರ ಭಟ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ, ಡಿ ಎಂ ಹೆಗ್ಡೆ ಉಪಸ್ಥಿತರಿದ್ದರು.



ಸಂಜೆವಾಣಿ

ಗುರುವಾರ 02 ಫೆಬ್ರವರಿ 2023



ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಬೆಂಗಳೂರಿನ ಕಲಾಗ್ರಾಮದಲ್ಲಿ ಸಪ್ತಗಿರಿ ಗ್ಲೋಬಲ್ ಟ್ರಸ್ಟ್
ಉದ್ಘಾಟನೆ ಮಾಡಿದರು. ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಆಶಯಗಳೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ
ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್. ಪಾವಗಡ ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ.
ನಾಡೋಜ ವೂಡೇ ಪಿ.ಕೃಷ್ಣ. ಪಿ.ಆರ್.ಸಿ.ಐ ಸಂಸ್ಥೆಯ ಮುಖ್ಯಸ್ಥ ಎಂ.ಬಿ.ಜಯರಾಂ. ಲೇಖಕ ಅ.ನಾ.ಪ್ರಹ್ಲಾದರಾವ್.
ಟ್ರಸ್ಟಿನ ಜಯರಾಮ್ ಹಾಗೂ ಸುಮತಿ ಜಯರಾಮ್ ಇದ್ದಾರೆ.

ಈ ಸಂಜೆ

ಗುರುವಾರ • ಫೆಬ್ರವರಿ 2, 2023



ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ನಗರದ ಕಲಾಗ್ರಾಮದಲ್ಲಿ ನಿಸಪ್ತಗಿರಿ ಗ್ಲೋಬಲ್ ಟ್ರಸ್ಟ್ ಉದ್ಘಾಟಿಸಿದರು. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಪಾವಗಡ ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ, ನಾಡೋಜ ವೂಡೆ ಪಿ.ಕೃಷ್ಣ, ಪಿಆರ್‌ಸಿಐ ಸಂಸ್ಥೆ ಮುಖ್ಯಸ್ಥ ಎಂ.ಬಿ.ಜಯರಾಂ, ಲೇಖಕ ಅ.ನಾ.ಪ್ರಹ್ಲಾದರಾವ್, ಟ್ರಸ್ಟ್‌ನ ಜಯರಾಮ್, ಸುಮತಿ ಜಯರಾಮ್ ಭಾಗವಹಿಸಿದ್ದರು.

ಪ್ರಜಾ ಪ್ರಗತಿ

Feb 2, 2023

ಜಾತಿ ವ್ಯವಸ್ಥೆ ಘೋರ ಶಾಪ ಎಂಬುದನ್ನು ಬೋಧಿಸಿ

ಶಿಕ್ಷಕರುಗಳಿಗೆ ಹಿರಿಯ ಕವಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಕರೆ

■ ಪ್ರಜಾಪ್ರಗತಿ.ಕಾಂ

ತುಮಕೂರು : ಜಾತಿ ವ್ಯವಸ್ಥೆ ಒಂದು ಘೋರ ಶಾಪ ಎನ್ನುವುದನ್ನು ನಮ್ಮ ಮಕ್ಕಳಿಗೆ ಶಾಲಾ, ಕಾಲೇಜುಗಳಲ್ಲಿ ಬೋಧಿಸಬೇಕೆಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಕವಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಕರೆ ನೀಡಿದರು.

ದ್ಯಾವನಕುಂಟೆ ಬಾಳಣ್ಣ ಪ್ರತಿಷ್ಠಾನವು ಬೆಂಗಳೂರಿನಲ್ಲಿ ಸೋಮವಾರ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಗಾಂಧೀಜಿ, ಅಂಬೇಡ್ಕರ್, ಕುವೆಂಪು ಅವರು ಕಂಡಿದ್ದ ಕನಸುಗಳ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಮಹಾತ್ಮ ಗಾಂಧಿ ಅವರನ್ನು ಪ್ರತಿದಿನ ಕೊಲ್ಲುತ್ತಿದ್ದೇವೆ. ಸಂವಿಧಾನ ಸಮಗ್ರ ಅಪ್ರಸ್ತುತವಾಗುತ್ತಿದೆ. ಎಲ್ಲೆಡೆ ಕ್ರೌರ್ಯ ತಾಂಡವವಾಡುತ್ತಿದೆ. ನಮ್ಮ ಅಂತಃಕರಣ ಸತ್ತು ಹೋಗಿದೆ. ಅನ್ಯ ಜಾತಿಯವನನ್ನು ಪ್ರೇಮಿಸುತ್ತಿದ್ದಾಳೆಂಬ ಕಾರಣಕ್ಕೆ ಸ್ವಂತ ಮಗಳನ್ನೇ ಸುಪಾರಿಕೊಟ್ಟು ಕೊಲ್ಲಿಸುವ ಹೇಯ ಕೃತ್ಯಗಳಿಗೆ ನಾವೆಲ್ಲಾ ಸಾಕ್ಷಿಯಾಗಿದ್ದೇವೆ. ಜಾತಿಗಳ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವುದು ಮಹಾಪಾಪ ಎಂದು ಗಾಂಧೀಜಿ ಮತ್ತು ಅಂಬೇಡ್ಕರ್ ಅವರು ಭಾವಿಸಿದ್ದರು. ಆದರೆ ಈಗಲೂ ಈ ಹೇಯ ಪದ್ಧತಿ ಮುಂದುವರಿಯುತ್ತಲೇ ಇದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಬುದ್ಧ, ಬಸವರೊಡನೆ ಆತ್ಮೀಯತೆ

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಮಾತನಾಡಿ, ಹಿಂದೆಂದಿಗಿಂತಲೂ ಇಂದು ಗಾಂಧೀಜಿ ಮತ್ತು ಅಂಬೇಡ್ಕರ್ ಹೆಚ್ಚು ಪ್ರಸ್ತುತರಾಗುತ್ತಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರೊಡನೆ ನಾವು ಆತ್ಮೀಯ ಭಾವನೆ ಬೆಳೆಸಿಕೊಂಡಿರುತ್ತೇವೆ. ಹೀಗಾಗಿ ಅವರನ್ನು ಏಕವಚನದಲ್ಲೇ ಸಂಬೋಧಿಸುತ್ತೇವೆ. ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಅವರ ಒಂದೊಂದು ಕವನವೂ ಒಂದೊಂದು ಸಂದೇಶ ನೀಡುತ್ತದೆ. ಅಂತಹವರ ಜೊತೆಯಲ್ಲಿ ಅಭಿನಂದಿತಳಾಗಿರುವುದು ನನ್ನ ಸಂತಸ ಹೆಚ್ಚಿಸಿದೆ ಎಂದು ಹೇಳಿದರು.

ದಮನಿತ ದನಿಗಳಿಗಾಗಿ ಲೇಖನಿ: ಅಭಿನಂದನಾ ನುಡಿಗಳನ್ನಾಡಿದ ಕವಿ ಸುಬ್ಬು ಹೊಲೆಯಾರ್, ಇಬ್ಬರು ಲೇಖಕರೂ ಯಾವ ಮಿತಿಗೂ ಒಳಗಾಗದವರು. ಆದಿ ಕುಲದವರು ಚಪ್ಪಲಿ ಮೆಟ್ಟಬಾರದು, ತಲೆ ಬಾಚಿಕೊಂಡು ನಡೆಯಬಾರದು ಎಂಬ ಪರಿಸ್ಥಿತಿ ಇರುವಾಗ, ಅಂತಹ ಕುಲದ ಚಿನ್ನಸ್ವಾಮಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವುದು ಒಂದು ಪವಾಡವೇ ಸರಿ. ಅವರ ನಾನೊಂದು ಚಪ್ಪಲಿಯಾಗಿದ್ದರೆ ಕವನ ಓದಿದ, ಅರಿತ ಅನೇಕರು ಕಣ್ಣೀರಿಟ್ಟಿದ್ದಾರೆ. ಅವರೊಳಗೊಬ್ಬ ಸಂತನಿದ್ದಾನೆ ಎಂಬುದು ಇಂತಹ ಕವನಗಳಿಂದ ಸಾಬೀತಾಗಿದೆ. ಹೆಣ್ಣು ಮಕ್ಕಳಿಗೂ ದುಡಿಯುವ, ಬರೆಯುವ ಧೈರ್ಯ ಕೊಟ್ಟವರು ಅಂಬೇಡ್ಕರ್. ಅದರಿಂದಾಗಿಯೇ ಎಚ್.ಎಲ್.ಪುಷ್ಪ ಅಂತಹ ಅನೇಕರು ಪ್ರವರ್ಧಮಾನಕ್ಕೆ ಬಂದು ಮಹಿಳಾ ಲೋಕವನ್ನು ಜಾಗೃತಿಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಒಬ್ಬ ದಲಿತ ಹೆಣ್ಣು ಮಗಳು ಸಾರ್ವಜನಿಕ ಕೊಳದಲ್ಲಿ ನೀರು ಕುಡಿದದ್ದಕ್ಕೆ, ಒಂದು ಚಿಕ್ಕ ದಲಿತ ಮಗು ದೇವಸ್ಥಾನದೊಳಕ್ಕೆ ಪ್ರವೇಶ ಮಾಡಿದ್ದಕ್ಕೆ ಶಿಕ್ಷಿಸಿದ ಉದಾಹರಣೆಗಳಿವೆ.

ಇಂತಹ ಘಟನೆಗಳನ್ನು ಸಾಹಿತ್ಯದ ಮೂಲಕ ಇವರಿಬ್ಬರೂ ಬಿಂಬಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ನಾವಿಂದು ಅಸ್ಪೃಶ್ಯಲೋಕ, ಸ್ತ್ರೀಲೋಕ ಎರಡೂ ಸಮುದಾಯಗಳನ್ನು ಅಭಿನಂದಿಸಿದ್ದೇವೆ ಎಂದು ಹೇಳಿದರು.

ಬಸ್ ನಿಲ್ದಾಣದಲ್ಲಿ ಓದುವ ವಾತಾವರಣ ನಿರ್ಮಿಸಿದ್ದರು

ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್ ಮಾತನಾಡಿ, ಎಚ್.ಎಲ್.ಪುಷ್ಪ ರಚಿಸಿರುವ ಅಮೃತಮತಿಯ ಸ್ವಗತ ನಾನು ಓದಿರುವ ಅತ್ಯುತ್ತಮ ಕವನಗಳಲ್ಲೊಂದು. ಮೂಡ್ನಾಕೂಡು ಚಿನ್ನಸ್ವಾಮಿ ಅವರು ರಾಜ್ಯ ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಯಾಗಿ ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಿನ ಬಸ್ ನಿಲ್ದಾಣದಲ್ಲಿ ವಾಚನಾಲಯ ಮತ್ತು ಗ್ರಂಥ ಭಂಡಾರ ಸ್ಥಾಪಿಸಿದ್ದರು. ಮಾನವೀಯ ಹೃದಯದ ಇವರಿಬ್ಬರನ್ನು ಅಭಿನಂದಿಸುವುದರ ಮೂಲಕ ನಮ್ಮನ್ನು ನಾವೇ ಅಭಿನಂದಿಸಿಕೊಳ್ಳುತ್ತಿದ್ದೇವೆ ಎಂದರು.

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹತ್ಯೆಯಾಗಿ 75 ವರ್ಷಗಳಾಗಿರುವುದನ್ನು ಪ್ರಸ್ತಾಪಿಸಿ, ಗಾಂಧೀಜಿ ಹತ್ಯೆಯಾಗಿರಬಹುದು, ಅವರ ವಿಚಾರಗಳು ಜೀವಂತವಾಗಿವೆ. ಅವರ ಉನ್ನತ ಆಲೋಚನೆಗಳನ್ನು ತಮ್ಮ ಸಾಹಿತ್ಯದಲ್ಲಿ ಬಿಂಬಿಸುತ್ತಿರುವ ಇಬ್ಬರು ಗಾಂಧಿ ಮನಸ್ಕರನ್ನು ಅಭಿನಂದಿಸುವುದರ ಮೂಲಕ ನಾವಿಂದು ಗಾಂಧೀಜಿ ಅವರನ್ನೇ ಅಭಿನಂದಿಸಿದಂತಾಗಿದೆ.

-ಡಾ.ವೂಡೇ ಪಿ.ಕೃಷ್ಣ, ಶಿಕ್ಷಣತಜ್ಞ

ಎಲುಬಿನ ಹಂದರದೊಳಗೆ ಕವಿತಾ ಪ್ರಸ್ತುತಿ : ಈರೇಗೌಡ ಬಸವರಾಜು ನಿರೂಪಿಸಿದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ದ್ಯಾವನಕುಂಟೆ ಬಾಳಣ್ಣ ಸ್ವಾಗತ ಭಾಷಣ ಮಾಡಿದರು. ಟಿ.ಪಿ.ರಘುನಾಥ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಅವರು ರಚಿಸಿರುವ ನನ್ನ ಎಲುಬಿನ ಹಂದರದೊಳಗೊಂದು ಮಸೀದಿ ಇದೆ, ಅಲ್ಲಿದ್ದಾನೆ ರಾಮ, ಅಲ್ಲಿದ್ದಾನೆ ಈಶ ಎಂಬ ಗೀತೆಯನ್ನು ಸಭೆಯಲ್ಲಿ ಪ್ರಸ್ತುತ ಪಡಿಸಲಾಯಿತು. ಡಾ.ನ್ಯಾಮಂಗಲ ಮಹಾದೇವ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾದ ಸಮಾರಂಭದಲ್ಲಿ ಸಾಹಿತಿಗಳಾದ ಆರ್.ಜಿ.ಹಳ್ಳಿ ನಾಗರಾಜ್, ಸಿದ್ಧಲಿಂಗಯ್ಯ ಬಸ್ತಂಗಾಡಿ, ಪತ್ರಕರ್ತ ಕೆ.ಎಲ್.ನಟರಾಜ್, ಎನ್.ವೇಣುಗೋಪಾಲ್, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೋಟಿಬಾರ್ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಬುಧವಾರ • ಫೆಬ್ರುವರಿ 1, 2023

ಎಂ. ನರಸಿಂಹಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ'

'ಬೇಂದ್ರೆ ಕಾವ್ಯದಲ್ಲಿ ನೆಲ ಮುಟ್ಟುವ ಪ್ರೀತಿ'

ಪ್ರಜಾವಾಣಿ ವಾರ್ತೆ


ಮುಖ್ಯಾಂಶಗಳು

- ವಿಮರ್ಶಕ ಜಿ. ಕೃಷ್ಣಪ್ಪ ಅವರ ಕೃತಿಗಳ ಬಿಡುಗಡೆ
- ವಿಮರ್ಶಾ ಲೇಖನ ಸ್ಪರ್ಧೆ: ಬಹುಮಾನ ವಿತರಣೆ

ಬೆಂಗಳೂರು: 'ಬೇಂದ್ರೆ ಅವರ ಕಾವ್ಯದಲ್ಲಿ ನೆಲ ಮುಟ್ಟುವ ಪ್ರೀತಿ ಎದ್ದು ಕಾಣುತ್ತದೆ. ಚೌಕಟ್ಟು ಅಳವಡಿಸಿಕೊಂಡಿರುವ ಸಾಹಿತ್ಯ ವಿಮರ್ಶಕರು, ಅವರ ಕಾವ್ಯವನ್ನು ಸೀಮಿತಗೊಳಿಸಿ ವಿಮರ್ಶಿಸಿದರು' ಎಂದು ವಿಮರ್ಶಕ ಚಂದ್ರಶೇಖರ ನಂಗಲಿ ಹೇಳಿದರು.

ದ.ರಾ. ಬೇಂದ್ರೆ ಕಾವ್ಯಕೂಟ ನಗರದಲ್ಲಿ ಮಂಗಳವಾರ ಆಯೋಜಿಸಿದ ಸಮಾರಂಭದಲ್ಲಿ ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ ಅವರಿಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ವಿಮರ್ಶಕ ಜಿ. ಕೃಷ್ಣಪ್ಪ ಅವರ 'ಬರೆಹದಲ್ಲಿ ಬೇಂದ್ರೆಯವರ ಬದುಕು', 'ಕರ್ಣಚೈತ್ರನ ಪರ್ಣಶಾಲೆ' ಕೃತಿಗಳನ್ನು ಲೋಕಾರ್ಪಣೆ ಮಾಡಿದರು.

'1919ರಲ್ಲಿ ಪ್ರಕಟಗೊಂಡ ಅವರ 'ಚಂದ್ರ' ಕವಿತೆಯು ವಿಮರ್ಶಕರ ಕಣ್ಣಿಗೆ ಅಜ್ಞಾತವಾಗಿ ಉಳಿಯಿತು. ಅವರ ಕಾವ್ಯದಲ್ಲಿ ಬೌದ್ಧ ತಾತ್ವಿಕತೆಯನ್ನು ಗುರುತಿಸಬಹುದಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯಕ್ಕೂ ಅವರ ಕಾವ್ಯದ ಮೂಲಕ ಉದಾಹರಣೆ ನೀಡಬಹುದು.



ಸಮಾರಂಭದಲ್ಲಿ ಎಂ. ನರಸಿಂಹ ಅವರಿಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ದ.ರಾ.ಬೇಂದ್ರೆ ಕಾವ್ಯಕೂಟದ ಉಪಾಧ್ಯಕ್ಷ ಶ್ರ.ದೇ.ಪಾರ್ಶ್ವನಾಥ್, ಅಧ್ಯಕ್ಷ ಜಿ.ಕೃಷ್ಣಪ್ಪ, ಬಿ. ಚಂದ್ರಶೇಖರ ನಂಗಲಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಇದ್ದಾರೆ. – ಪ್ರಜಾವಾಣಿ ಚಿತ್ರ

ನಮ್ಮ ಸಾಹಿತ್ಯ ವಿಮರ್ಶೆ ಹಾಗೂ ಸಂಶೋಧನೆಗಳು ಚೌಕಟ್ಟನ್ನು ಅಳವಡಿಸಿಕೊಂಡಿವೆ. ನಿಸರ್ಗ ಮತ್ತು ಪ್ರಕೃತಿಯ ನಡುವೆ ಸೃಷ್ಟಿ ವಿರೋಧವನ್ನು ಬೇಂದ್ರೆ ಅವರ ಕಾವ್ಯದಲ್ಲಿ ಕಾಣುತ್ತೇವೆ' ಎಂದು ಹೇಳಿದರು.

'ಭಾಷೆಯಿಂದಲೇ ಗುಲಾಮಿತನ ಉಂಟಾಗುತ್ತದೆ. ಭಾಷೆಯನ್ನು ಕಲಿಯುವಾಗ ಜಾತಿ, ಧರ್ಮವೆಂದು ಅಂಕುಶಮತಿ ಆಗುತ್ತೇವೆ. ಎಷ್ಟೋ ನಾಗರಿಕರು ಮನಸ್ಸಿಗೆ ಮೂಗುದಾರ ಹಾಕಿಕೊಂಡು ಇಕ್ಕಟ್ಟಿಗೆ ಒಳಗಾಗುತ್ತಾರೆ. ಜೀವನವು ಒಂದು ಪ್ಯಾಕೇಜ್ ರೀತಿಯಾಗಿದೆ. ಪ್ಯಾಕೇಜ್ ಎಂದರೆ ವಾಸ್ತವದಲ್ಲಿ ಸುಳ್ಳನ್ನು ಸೃಷ್ಟಿಸುವುದು. ಧರ್ಮದಲ್ಲಿ ಹಲವು ಪ್ಯಾಕೇಜ್‌ಗಳಿವೆ. ಬೇಂದ್ರೆ ಪ್ಯಾಕೇಜ್‌ಗಳ ಕವಿಯಲ್ಲ, ಬದಲಾಗಿ, ಪ್ರಕ್ರಿಯೆಗಳ ಕವಿಯಾಗಿದ್ದಾರೆ. ಮೊದಲ ಮೂರು ತಲೆಮಾರು ಅವರಿಗೆ ನ್ಯಾಯ ಒದಗಿಸಿಲ್ಲ' ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಂ. ನರಸಿಂಹ, 'ಬೇಂದ್ರೆ ವಿಶ್ವದ ಕವಿ. ಅವರ ಕಾವ್ಯ ಕಬ್ಬಿಣದ ಕಡಲೆಯಾಗಿದ್ದು, ಕಾವ್ಯದಲ್ಲಿ ಬೆಂದವರು ಮಾತ್ರ ಅವರನ್ನು ಅರ್ಥ ಮಾಡಿಕೊಳ್ಳುತ್ತಾರೆ' ಎಂದರು.


ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡ ಅವರು, 'ಕುಪ್ಪರೆಡ್ಡಿಯೂರು ಗ್ರಾಮದ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದೆ. ತಂದೆ-ತಾಯಿ ಬೆಳಗಿನ ಜಾವ ಮೂರು ಗಂಟೆಗೆ ನೇಗಿಲು ಮತ್ತು ಬಾನೆಯೊಂದಿಗೆ ಹೊಲಕ್ಕೆ ಹೋಗುತ್ತಿದ್ದರು. ತಾಯಿಯು ಬರಡು ಬಾವಿಗಿಳಿದು, ಸಂಗ್ರಹವಾಗಿರುವ ನೀರನ್ನು ಬಾನೆಗೆ ತುಂಬುತ್ತಿದ್ದರು' ಎಂದು ಕಣ್ಣೀರು ಹಾಕಿದರು.

ದ.ರಾ.ಬೇಂದ್ರೆ ಸ್ಮೃತಿ ವಿಮರ್ಶಾ ಲೇಖನ ಸ್ಪರ್ಧೆಯ ವಿಜೇತರಾದ ಅನಿತಾ ಕೆ.ಎ., ಶೈಲಜಾ ಹೆಗ್ಡೆ ಹಾಗೂ ಕೃಪಾ ಎಚ್.ವಿ. ಅವರಿಗೆ ಬಹುಮಾನ ವಿತರಿಸಲಾಯಿತು.

ಈ ಸಂಜೆ

Mar 9, 2023

ಮಹಾತ್ಮಗಾಂಧೀಜಿಯವರ ವಿಚಾರಧಾರೆಗಳನ್ನು ಅಧ್ಯಯನ ಮಾಡಿ:ವೂಡೇ ಪಿ.ಕೃಷ್ಣ



ವಿಜಯಪುರ, ಮಾ. ೯- ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳನ್ನು ಅಧ್ಯಯನ ಮಾಡಿ ಎಂದು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು.

ಪಟ್ಟಣ ಸಮೀಪದ ಚಿಕ್ಕಮರಳ್ಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ಆವರಣದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಶ್ರಮದಾನ ಶಿಬಿರದ ಸಮಾರೋಪ ಭಾಷಣದಲ್ಲಿ ಮಾತನಾಡಿ, ' ನಮ್ಮ ಕೆಲಸವನ್ನು ಇನ್ನೊಬ್ಬರೊಂದಿಗೆ ಮಾಡಿಸಿಕೊಂಡರೆ ಅದು ಬಹುದೊಡ್ಡ ಶೋಷಣೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ಹೇಳಿದರು.

'ಪ್ರತಿ ದಿನ ನಾವು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವುದು ಅದು ನಮ್ಮ ಬಹುದೊಡ್ಡ ಗುಣ ಅಂದರೆ ನಮ್ಮ ಶೌಚಾಲಯ,ದಿನ ನಿತ್ಯ ಬಳಸುವ ನಮ್ಮ ಉಡುಗೆ ಮತ್ತು ತೊಡುಗೆಗಳು, ಊಟ ಮಾಡಿದ ತಟ್ಟೆ ನಮ್ಮ ಮನೆ ಹಾಗೂ ಮನೆಯ ಸುತ್ತ ಮುತ್ತಲಿನ ಪರಿಸರವನ್ನು ನಾವೇ ಶುಚಿ ಮಾಡಿಕೊಳ್ಳಬೇಕು , ಇಂತಹ ಶ್ರಮದಾನಗಳ ಮೂಲಕ ಈ ಜಗತ್ತಿನಲ್ಲಿ ನಾವೆಲ್ಲರೂ ಬಹು ದೊಡ್ಡ ಬದಲಾವಣೆಯನ್ನು ಕಾಣಬಹುದು' ಎಂದು ಹೇಳಿದರು.

ಭಾರತ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಸಚಿವಾಲಯ ದಕ್ಷಿಣ ವಲಯ, ನೆಹರು ಯುವ ಕೇಂದ್ರ ಸಂಘಟನೆಯ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್ ಮಾತನಾಡಿ, ದೇಶದಲ್ಲಿ ಎಲ್ಲಾ ರೀತಿಯ ಜಾತಿ,ಧರ್ಮ, ಸಂಸ್ಕೃತಿ ಹಾಗೂ ವಿವಿಧ ಪಂಗಡಗಳ ಜನರು ವಾಸಿಸುತ್ತಿದ್ದಾರೆ ಇವರು ಇಂದಿಗೂ 65% ಮಂದಿ ದೇಶದ ವಿವಿಧ ಹಳ್ಳಿಗಳಲ್ಲಿ ವಾಸವಿದ್ದಾರೆ ಆದ್ದರಿಂದ ಇಂದಿನ ಯುವಜನತೆ ಗ್ರಾಮಗಳ,ಬಡವರ ಹಾಗೂ ರೈತರ ಪರ ಆಲೋಚನೆ ಮಾಡಬೇಕು ಆದ್ದರಿಂದ ಗ್ರಾಮೀಣ ಅಭಿವೃದ್ಧಿಯೇ ಈ ದೇಶದ ಬಹುದೊಡ್ಡ ಅಭಿವೃದ್ಧಿ ಎಂದು ತಿಳಿಸಿದರು.

ಚಿಕ್ಕಮರಳ್ಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ವಿ.ವಿಶ್ವಾಸ್ ರಾಜ್ಯ ಮಟ್ಟದ ಈ ಶ್ರಮದಾನ ಶಿಬಿರದಲ್ಲಿ ತಮ್ಮ ವರದಿಯನ್ನು ಮಂಡಿಸಿದರು.

ಶಿಬಿರಾರ್ಥಿಗಳಿಂದ ಅನಿಸಿಕೆ ಹಾಗೂ ಎನ್.ಎಸ್.ಎಸ್ ಸ್ವಯಂ ಸೇವಕರಿಗೆ ವಿಶ್ವವಿದ್ಯಾನಿಲಯ ಮಟ್ಟದ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಆರ್ .ಗೀತಾ, ಚಿಕ್ಕಮರಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ಪ್ರಾಂಶುಪಾಲೆ ಡಾ.ಎನ್ .ಆನಂದಮ್ಮ ಆಡಳಿತಾಧಿಕಾರಿ ಸುಧಾಕರ ಕುಲಕರ್ಣಿ, ಹೊಸಕೋಟೆ ತಾಲ್ಲೂಕಿನ ಯುವ ಪರಿವರ್ತಕ ವಿ. ಪ್ರವೀಣ್ ಮುಂತಾದವರು ಹಾಜರಿದ್ದರು.

ಪ್ರಜಾವಾಣಿ ಬುಧವಾರ • ಮಾರ್ಚ್ 1, 2023



ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್. ಜಗದೀಶ್ ಕೊಪ್ಪ ಅವರಿಗೆ 'ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಯನ್ನು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು, ಅಧ್ಯಕ್ಷ ಬೈರಮಂಗಲ ರಾಮೇಗೌಡ ಹಾಗೂ ಪತ್ರಕರ್ತೆ ಆರ್. ಪೂರ್ಣಿಮಾ ಇದ್ದಾರೆ. – ಪ್ರಜಾವಾಣಿ ಚಿತ್ರ

ಉದಯವಾಣಿ
ಬುಧವಾರ • ಮಾರ್ಚ್ 1, 2023

ಇಂದಿನಿಂದ ರಾಜ್ಯಮಟ್ಟದ ಎನ್‌ಎಸ್‌ಎಸ್ ಶಿಬಿರ

ವಿಜಯಪುರ: ಎನ್‌ಎಸ್ ಎಸ್ ಸೇರಿ ಮೌಲ್ಯಾಧಾರಿತ ಜೀವನ ರೂಪಿಸಿಕೊಳ್ಳಿ ಎಂದು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ವಿ.ವಿಶ್ವಾಸ್ ತಿಳಿಸಿದರು. ಪಟ್ಟಣ ಸಮೀಪದ ಚಿಕ್ಕಮರಳಿಯ ನಾಗಾರ್ಜುನ ಕಾಲೇಜು ಸಭಾಂಗಣದಲ್ಲಿ ನಡೆದ ರಾಜ್ಯಮಟ್ಟದ ರಾಷ್ಟ್ರೀಯ ಸೇವಾ ಯೋಜನೆ ಶ್ರಮದಾನ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾ.3ರಿಂದ 7ರವರೆಗೆ ಐದು ದಿನ ಚಿಕ್ಕಮರಳಿಯ ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಆವರಣದಲ್ಲಿ ಎನ್‌ಎಸ್ ಎಸ್ ಶ್ರಮದಾನ ಶಿಬಿರ ಆಯೋಜಿಸಲಾಗಿದ್ದು, ಈ ಶಿಬಿರದ ಪ್ರಧಾನ ನಿರ್ದೇಶಕರಾಗಿ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರ ಕೃಷ್ಣಪ್ಪ, ಸಲಹೆಗಾರರಾಗಿ ಪ್ರಾಂಶುಪಾಲೆ ಡಾ.ಎನ್. ಆನಂದಮ್ಮ ನಿರ್ದೇಶನದಲ್ಲಿ ಈ ರಾಜ್ಯಮಟ್ಟದ ಶಿಬಿರವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ಶುಕ್ರವಾರ ಬೆಳಗ್ಗೆ ರಾಜ್ಯಮಟ್ಟದ ಎನ್‌ಎಸ್ ಎಸ್ ಶ್ರಮದಾನ ಶಿಬಿರವನ್ನು ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಕೋಶದ ಎನ್‌ಎಸ್ ಎಸ್ ರಾಜ್ಯಾಧಿಕಾರಿ ಪ್ರತಾಪ್ ಲಿಂಗಯ್ಯ ಶಿಬಿರವನ್ನು ಉದ್ಘಾಟಿಸಲಿದ್ದು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮುನಿವೆಂಕಟಪ್ಪ ಅವರು ಸನ್ಮಾನ ಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ.ಎನ್.ಎ. ಆದಿನಾರಾಯಣಪ್ಪ, ಆಡಳಿತಾಧಿಕಾರಿ ಸುಧಾಕರ ಕುಲಕರ್ಣಿ ಮೊದಲಾದವರು ಆಗಮಿಸಲಿದ್ದು, ಈ ಶಿಬಿರದಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು ಭಾಗವಹಿಸಲಿದ್ದಾರೆ ಎಂದು ಶಿಬಿರಾಧಿಕಾರಿ ಡಾ.ವಿ.ಪ್ರಶಾಂತ ತಿಳಿಸಿದರು.


ಜಾತಿ ವ್ಯವಸ್ಥೆ ಒಂದು ಘೋರ ವಿಷ ಎಂಬುದನ್ನು ಮಕ್ಕಳಿಗೆ ಬೋಧಿಸಬೇಕು

'ಗಾಂಧೀಜಿ, ಅಂಬೇಡ್ಕರ್, ಕುವೆಂಪು ಅವರು ಕಂಡಿದ್ದ ಕನಸುಗಳ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಮಹಾತ್ಮ ಗಾಂಧಿ ಅವರನ್ನು ಪ್ರತಿದಿನ ಕೊಲ್ಲುತ್ತಿದ್ದೇವೆ. ಸಂವಿಧಾನ ನಮಗೆ ಅಪ್ರಸ್ತುತವಾಗುತ್ತಿದೆ. ಎಲ್ಲೆಡೆ ಕ್ರೌರ್ಯ ತಾಂಡವವಾಡುತ್ತಿದೆ. ನಮ್ಮ ಅಂತಃಸಾಕ್ಷಿ ಸತ್ತು ಹೋಗಿದೆ. ಅನ್ಯ ಜಾತಿಯವನನ್ನು ಪ್ರೇಮಿಸುತ್ತಿದ್ದಾಳೆಂಬ ಕಾರಣಕ್ಕೆ ಸ್ವಂತ ಮಗಳನ್ನೇ ಸುಫಾರಿಕೊಟ್ಟು ಕೊಲ್ಲಿಸುವ ಹೇಯ ಕೃತ್ಯಗಳಿಗೆ ನಾವೆಲ್ಲಾ ಸಾಕ್ಷಿಯಾಗಿದ್ದೇವೆ. ಜಾತಿಗಳ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವುದು ಮಹಾಪಾಪ ಎಂದು ಗಾಂಧೀಜಿ ಮತ್ತು ಅಂಬೇಡ್ಕರ್ ಅವರು ಭಾವಿಸಿದ್ದರು. ಆದರೆ ಈಗಲೂ ಈ ಹೇಯ ಪದ್ಧತಿ ಮುಂದುವರೆಯುತ್ತಲೇ ಇದೆ. ಜಾತಿ ವ್ಯವಸ್ಥೆ ಒಂದು ಘೋರ ಶಾಪ ಎನ್ನುವುದನ್ನು ನಮ್ಮ ಮಕ್ಕಳಿಗೆ ಶಾಲಾ, ಕಾಲೇಜುಗಳಲ್ಲಿ ಬೋಧಿಸಬೇಕು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಕರೆ ನೀಡಿದರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ 30-01-2023ರಂದು ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರು ರಚಿಸಿರುವ 'ನನ್ನ ಎಲುಬಿನ ಹಂದರದೊಳಗೊಂದು ಮಸೀದಿ ಇದೆ, ಅಲ್ಲಿದ್ದಾನೆ ರಾಮ, ಅಲ್ಲಿದ್ದಾನೆ ಈಶ' ಎಂಬ ಗೀತೆಯನ್ನು ಸಭೆಯಲ್ಲಿ ಪ್ರಸ್ತುತ ಪಡಿಸಲಾಯಿತು.

ಡಾ. ಮೂಡ್ನಾಕೂಡು ಅವರ ಜೊತೆಯಲ್ಲೇ ಅಭಿನಂದನೆಗೆ ಭಾಜನರಾದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಹೆಚ್.ಎಲ್. ಪುಷ್ಪ 'ಹಿಂದೆಂದಿಗಿಂತಲೂ ಇಂದು ಗಾಂಧಿಜಿ ಮತ್ತು ಅಂಬೇಡ್ಕರ್ ಹೆಚ್ಚು ಪ್ರಸ್ತುತರಾಗುತ್ತಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರೊಡನೆ ನಾವು ಆತ್ಮೀಯ ಭಾವನೆ ಬೆಳೆಸಿಕೊಂಡಿರುತ್ತೇವೆ. ಹೀಗಾಗಿ ಅವರನ್ನು ಏಕವಚನದಲ್ಲೇ ಸಂಬೋಧಿಸುತ್ತೇವೆ. ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಒಂದೊಂದು ಕವನವೂ ಒಂದೊಂದು ಸಂದೇಶ ನೀಡುತ್ತದೆ. ಅಂತಹವರ ಜೊತೆಯಲ್ಲಿ ಅಭಿನಂದಿತಳಾಗಿರುವುದು ನನ್ನ ಸಂತಸ ಹೆಚ್ಚಿಸಿದೆ' ಎಂದು ಹೇಳಿದರು.

ಅಭಿನಂದನಾ ನುಡಿಗಳನ್ನಾಡಿದ ಕವಿ ಸುಬ್ಬು ಹೊಲೆಯಾರ್ 'ಇಬ್ಬರು ಲೇಖಕರೂ ಯಾವ ಮಿತಿಗೂ ಒಳಗಾಗದವರು. ಆದಿ ಕುಲದವರು ಚಪ್ಪಲಿ ಮೆಟ್ಟಬಾರದು, ತಲೆ ಬಾಚಿಕೊಂಡು ನಡೆಯಬಾರದು ಎಂಬ ಪರಿಸ್ಥಿತಿ ಇರುವಾಗ, ಅಂತಹ ಕುಲದ ಚಿನ್ನಸ್ವಾಮಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವುದು ಒಂದು ಪವಾಡವೇ ಸರಿ. ಅವರ ನಾನೊಂದು ಚಪ್ಪಲಿಯಾಗಿದ್ದರೆ ಕವನ ಓದಿದ, ಆಲಿಸಿದ ಅನೇಕರು ಕಣ್ಣೀರಿಟ್ಟಿದ್ದಾರೆ. ಅವರೊಳಗೊಬ್ಬ ಸಂತನಿದ್ದಾನೆ ಎಂಬುದು



ಬೆಂಗಳೂರು ನಗರದ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ವತಿಯಿಂದ ಹಿರಿಯ ಸಾಹಿತಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಲೇಖಕಿ ಡಾ. ಹೆಚ್.ಎಲ್. ಪುಷ್ಪಾ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯಯ ಪತ್ರಕರ್ತ ಬಿ.ಎಂ. ಹನೀಫ್, ಲೇಖಕ ಟಿ.ಹ. ರಘುನಾಥ, ಸಾಹಿತಿಗಳಾದ ಡಾ. ಸತ್ಯಮಂಗಲ ಮಹಾದೇವ್, ದ್ವಾರನಕುಂಟೆ ಪಾತಣ್ಣ ಆರ್. ಜಿ. ಹಳ್ಳಿನಾಗರಾಜ್, ಸಿದ್ದಲಿಂಗಯ್ಯ ಬನ್ನಂಗಾಡಿ ಇದ್ದರು.

ಇಂತಹ ಕವನಗಳಿಂದ ಸಾಬೀತಾಗಿದೆ. ಹೆಣ್ಣು ಮಕ್ಕಳಿಗೂ ದುಡಿಯುವ, ಬರೆಯುವ ಧೈರ್ಯ ಕೊಟ್ಟವರು ಅಂಬೇಡ್ಕರ್. ಇದರಿಂದಾಗಿಯೇ ಹೆಚ್.ಎಲ್. ಪುಷ್ಪರಂತಹ ಅನೇಕರು ಪ್ರವರ್ಧಮಾನಕ್ಕೆ ಬಂದು ಮಹಿಳಾ ಲೋಕವನ್ನು ಜಾಗೃತಿಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಒಬ್ಬ ದಲಿತ ಹೆಣ್ಣು ಮಗಳು ಸಾರ್ವಜನಿಕ ಕೊಳದಲ್ಲಿ ನೀರು ಕುಡಿದುದಕ್ಕೆ, ಒಂದು ಚಿಕ್ಕ ದಲಿತ ಮಗು ದೇವಸ್ಥಾನದೊಳಕ್ಕೆ ಪ್ರವೇಶ ಮಾಡಿದ್ದಕ್ಕೆ ಶಿಕ್ಷಿಸಿದ ಉದಾಹರಣೆಗಳಿವೆ.

ಇಂತಹ ಘಟನೆಗಳನ್ನು ಸಾಹಿತ್ಯದ ಮೂಲಕ ಇವರಿಬ್ಬರೂ ಖಂಡಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ನಾವಿಂದು ಅಸ್ಪೃಶ್ಯಲೋಕ, ಸ್ತ್ರೀಲೋಕ ಎರಡೂ ಸಮುದಾಯಗಳನ್ನು ಅಭಿನಂದಿಸಿದ್ದೇವೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಶಿಕ್ಷಣ ತಜ್ಞ, ನಾಡೋಜ ಡಾ. ವೂಡೇ ಪಿ. ಕೃಷ್ಣ ರಾಷ್ಟ್ರಪಿತ ಮಹಾತ್ಮಗಾಂಧಿಯವರ ಹತ್ಯೆಯಾಗಿ 75 ವರ್ಷಗಳಾಗಿರುವುದನ್ನು ಪ್ರಸ್ತಾಪಿಸಿ, 'ಗಾಂಧೀಜಿ ಹತ್ಯೆಯಾಗಿರಬಹುದು, ಅವರ ವಿಚಾರಗಳು ಜೀವಂತವಾಗಿವೆ. ಅವರ ಉನ್ನತ ಆಲೋಚನೆಗಳನ್ನು ತಮ್ಮ ಸಾಹಿತ್ಯದಲ್ಲಿ ಬಿಂಬಿಸುತ್ತಿರುವ ಇಬ್ಬರು ಗಾಂಧಿ ಮನಸ್ಕರನ್ನು ಅಭಿನಂದಿಸುವುದರ ಮೂಲಕ ನಾವಿಂದು ಗಾಂಧೀಜಿ ಅವರನ್ನೇ ಅಭಿನಂದಿಸಿದಂತಾಗಿದೆ' ಎಂದು ಅಭಿಪ್ರಾಯಪಟ್ಟರು.

'ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ 'ಎಚ್.ಎಲ್. ಪುಷ್ಪ ರಚಿಸಿರುವ ಅಮೃತಮತಿಯ ಸ್ವಗತ ನಾನು ಓದಿರುವ ಅತ್ಯುತ್ತಮ ಕವನಗಳಲ್ಲೊಂದು. ಮೂಡ್ನಾಕೂಡು ಚಿನ್ನಸ್ವಾಮಿ ಅವರು ರಾಜ್ಯ ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಯಾಗಿ ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಿನ ಬಸ್ ನಿಲ್ದಾಣದಲ್ಲಿ ವಾಚನಾಲಯ ಮತ್ತು ಗ್ರಂಥ ಭಂಡಾರ ಸ್ಥಾಪಿಸಿದ್ದರು. ಮಾನವೀಯ ಹೃದಯದ ಇವರಿಬ್ಬರನ್ನು ಅಭಿನಂದಿಸುವುದರ ಮೂಲಕ ನಮ್ಮನ್ನು ನಾವೇ ಅಭಿನಂದಿಸಿಕೊಳ್ಳುತ್ತಿದ್ದೇವೆ' ಎಂದರು.

ಈರೇಗೌಡ ಬಸವರಾಜು ನಿರೂಪಿಸಿದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ದ್ವಾರನಕುಂಟೆ ಪಾತಣ್ಣ ಸ್ವಾಗತ ಭಾಷಣ ಮಾಡಿದರು. ಟಿ.ಹ. ರಘುನಾಥ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಡಾ. ಸತ್ಯಮಂಗಲ ಮಹಾದೇವ್ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಆರ್.ಜಿ. ಹಳ್ಳಿನಾಗರಾಜ್ ಮತ್ತು ಸಿದ್ದಲಿಂಗಯ್ಯ ಬನ್ನಂಗಾಡಿ, ಪತ್ರಕರ್ತ ಕೆ.ಎಲ್. ನಟರಾಜ್ ಮತ್ತು ಎಸ್.ವೇಣುಗೋಪಾಲ್, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ. ನೋಟಕಾರ್ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

-ರು. ಬಸಪ್ಪ

ಕಸ್ತೂರಿ ಪ್ರಭ

ಫೆಬ್ರವರಿ, ೨೦೨೩



ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಬಿ.ಜಿ.ಎಸ್ ಆಟದ ಮೈದಾನದಲ್ಲಿ ಆಯೋಜಿಸಲಾದ ಪದ್ಮಭೂಷಣ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ೭೮ನೇ ಜಯಂತ್ಯೋತ್ಸವ ಕಾರ್ಯಕ್ರಮ ಮತ್ತು ಸನ್ಮಾನ ಸಮಾರಂಭವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ, ಪದ್ಮಶ್ರೀ ಡಾ. ದೊಡ್ಡರಂಗೇಗೌಡ, ಶ್ರೀ ವಿ. ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷರಾದ ಶ್ರೀಮತಿ ಶೈಲಜಾ ಸೋಮಣ್ಣ, ನಾಡೋಜ ಡಾ. ವೊಡೇ ಪಿ. ಕೃಷ್ಣ, ಡಾ. ಎಂ.ಜಿ. ನಾಗರಾಜ್, ಡಾ. ಬಾನಂದೂರು ಕೆಂಪಯ್ಯ, ಸಾಹಿತಿ ಶ್ರೀ ಸಿ.ವಿ. ಶಿವಶಂಕರ್, ಡಾ. ಎಸ್.ಜಿ. ಸುಶೀಲಮ್ಮ, ಡಾ. ನವೀನ್ ಸೋಮಣ್ಣ, ಶ್ರೀಮತಿ ಬಿ.ಎಸ್. ದಿವ್ಯ ಹಾಗೂ ಪಾಲನೇತ್ರ ಉಪಸ್ಥಿತರಿದ್ದರು.

ಕಸ್ತೂರಿ ಪ್ರಭ

ಫೆಬ್ರವರಿ, ೨೦೨೪

ರೋಟಿ, ಕಪಡಾ, ಮಕಾನ್‌ಗೆ ಕೊಟ್ಟಷ್ಟೇ ಪ್ರಾಮುಖ್ಯವನ್ನು ಉನ್ನತ ಆಲೋಚನೆಗಳಿಗೂ ನೋಡಿ; ೧೯೪ನೇ ಮಾಘೋತ್ಸವದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ



'ಇತರರಲ್ಲಿರುವ ದೋಷಗಳನ್ನು ಕಂಡು ಸಂತಸಪಡುವುದರ ಬದಲು' ನಿಮ್ಮಲ್ಲಿರುವ ದೋಷಗಳನ್ನು ಕಂಡು ಅವುಗಳನ್ನು ದೂರ ಮಾಡಲು ಪ್ರಯತ್ನಿಸಿ. ನಾಲಗೆಯ ಮೇಲೆ ಹತೋಟಿ ಇರಿಸಿಕೊಳ್ಳಿ, ನುಡಿ-ನಡೆಗಳನ್ನು ಒಂದಾಗಿಸಿಕೊಳ್ಳಿ. ಸತ್ಸಂಗ, ಶಿಸ್ತು, ಧ್ಯಾನ ನಿಮ್ಮ ಬದುಕಿನ ಅಂಗವಾಗಿರುವಂತೆ ನೋಡಿಕೊಳ್ಳಿ. ಮಾಘೋತ್ಸವದಂತಹ ಸತ್ಸಂಗ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸಿ, ಅಂತಹ ಕಾರ್ಯಕ್ರಮಗಳಿಗೆ ಮಕ್ಕಳನ್ನು ಕರೆದೊಯ್ಯಿರಿ. ಇತರರ ಸಂತೋಷಕ್ಕೆ ಹೊಟ್ಟೆಕಿಚ್ಚು ಪಡುವುದರ ಬದಲು ನೀವೂ ಅವರ ಸಂತೋಷದಲ್ಲಿ ಭಾಗಿಯಾಗಿ. ನಿಮಗೆ ಯಾರೇ ಕೇಡು ಬಯಸಿದರೂ ಅದನ್ನು ಮರೆತು ಅವರನ್ನು ಕ್ಷಮಿಸುವ ಮನೋಭಾವ ಬೆಳೆಸಿಕೊಳ್ಳಿ. ನೈತಿಕ ಮೌಲ್ಯಗಳಿಗೆ ಆದ್ಯತೆ ನೀಡಿ. ಅಸಂಗ್ರಹ ನೀತಿ ಪಾಲಿಸಿ, ಸರಳ ಜೀವನ ನಿಮ್ಮದಾಗಿರಲಿ. ಬಾಹ್ಯ ಶ್ರೀಮಂತಿಕೆಗಿಂತಲೂ ಆಂತರಿಕ ಶ್ರೀಮಂತಿಕೆಯೇ ನಿಜವಾದ ಶ್ರೀಮಂತಿಕೆ ಎಂಬುದನ್ನು ಮರೆಯಬೇಡಿ. ಕೇವಲ ನಾವು ಚೆನ್ನಾಗಿದ್ದರೆ ಸಾಕು ಎಂಬ ಸ್ವಾರ್ಥ ಮನೋಭಾವ ಬೆಳೆಸಿಕೊಳ್ಳಬೇಡಿ. ರೋಟಿ, ಕಪಡಾ, ಮಕಾನ್‌ಗೆ ಕೊಟ್ಟಷ್ಟೇ ಪ್ರಾಮುಖ್ಯವನ್ನು ಉನ್ನತ ವಿಚಾರಗಳಿಗೂ ನೀಡಿ' ಎಂದು ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಕರೆ ನೀಡಿದರು.

ಇತ್ತೀಚೆಗೆ ಬ್ರಹ್ಮಮಂದಿರದಲ್ಲಿ ಏರ್ಪಾಡಾಗಿದ್ದ ೧೯೪ನೇ ಮಾಘೋತ್ಸವದಲ್ಲಿ ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿ 'ಆನಂದ, ಶಾಂತಿ, ಸಂತೃಪ್ತಿ ಮತ್ತು ಸಂತಸ' ಈ ವಿಷಯವಾಗಿ ಮಾತನಾಡಿದ ಅವರು ಆದಿಶಂಕರಾಚಾರ್ಯರು, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ ಮತ್ತಿತರರ ಆಣಿಮುತ್ತುಗಳನ್ನು ಉಲ್ಲೇಖಿಸಿದರು.

ಇದೇ ಕಾರ್ಯಕ್ರಮದಲ್ಲಿ ಹಿರಿಯ ಲೇಖಕಿ ಡಾ. ರಾಣಿ ಗೋವಿಂದರಾಜು ಅವರು ವಿದ್ಯಾರ್ಥಿಗಳಿಗಾಗಿ ರಾಜಾರಾಮ ಮೋಹನ್‌ರಾಯ್ ಬಗೆಗೆ ಕನ್ನಡದಲ್ಲಿ ಬರೆದು ಪ್ರೊ. ಎ. ಶ್ರೀಲತಾ ಅವರು ಇಂಗ್ಲಿಷಿಗೆ ಅನುವಾದಿಸಿರುವ ಕಿರುಹೊತ್ತಿಗೆಯನ್ನು ಲೋಕಾರ್ಪಣೆಗೊಳಿಸಲಾಯಿತು.

ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಡಾ|| ಅಶೋಕ ಗುರುದಾಸ್ ಸ್ವಾಗತಿಸಿದರು. ಜ್ಯೋತಿರ್ಮಯಿ ಅವರು ಉಪಾಸನೆ ನಡೆಸಿಕೊಟ್ಟರು. ಆನಂದ್ ಸಮಾಗಮ ತಂಡದವರು ಸುಗಮವಾಗಿ ಬ್ರಹ್ಮ ಸಂಗೀತ ನಡೆಸಿಕೊಟ್ಟರು. ವೂಡೇ ಕುಟುಂಬದವರು ಪ್ರೀತಿ ಭೋಜನದ ವ್ಯವಸ್ಥೆ ಮಾಡಿದ್ದರು.

ಪ್ರಜಾವಾಣಿ
ಬುಧವಾರ ● ಫೆಬ್ರುವರಿ 1, 2023


'ಜಾತಿ ವ್ಯವಸ್ಥೆ ಒಂದು ಘೋರ ವಿಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ವ್ಯವಸ್ಥೆ ಘೋರ ವಿಷ ಎಂಬುದನ್ನು ಮಕ್ಕಳಿಗೆ ಬೋಧಿಸುವ ಕೆಲಸವಾಗಬೇಕು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಗಾಂಧೀಜಿ, ಅಂಬೇಡ್ಕರ್, ಕುವೆಂಪು ಅವರು ಕಂಡಿದ್ದ ಕನಸುಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದು, ಗಾಂಧೀಜಿ ಅವರನ್ನು ಪ್ರತಿದಿನ ಕೊಲ್ಲುತ್ತಿದ್ದೇವೆ. ಸಂವಿಧಾನ ನಮಗೆ ಅಪ್ರಸ್ತುತವಾಗುತ್ತಿದ್ದು, ಎಲ್ಲೆಡೆ ಕ್ರೌರ್ಯ ತಾಂಡವವಾಡುತ್ತಿದೆ. ಜಾತಿಯ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಣೆ ಈಗಲು ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, 'ಹಿಂದೆಂದಿಗಿಂತಲೂ ಇಂದು ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಪ್ರಸ್ತುತರಾಗುತ್ತಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರೊಡನೆ ನಾವು ಆತ್ಮೀಯ ಸಂಬಂಧ ಬೆಳೆಸಿಕೊಂಡಿರುತ್ತೇವೆ. ಹೀಗಾಗಿ ಅವರನ್ನು ಏಕವಚನದಲ್ಲೇ ಸಂಬೋಧಿಸುತ್ತೇವೆ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಒಂದೊಂದು ಕವನವೂ ಒಂದೊಂದು ಸಂದೇಶ ನೀಡುತ್ತದೆ' ಎಂದರು.



ಶೇಷಾದ್ರಿಪುರ ಕಾಲೇಜಿನಲ್ಲಿ ಸೋಮವಾರ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮೂಡ್ನಾಕೂಡು ಚಿನ್ನಸ್ವಾಮಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅವರನ್ನು ಸನ್ಮಾನಿಸಲಾಯಿತು.

ಕವಿ ಸುಬ್ಬು ಹೊಲೆಯಾರ್ ಮಾತನಾಡಿ, 'ಒಬ್ಬ ದಲಿತ ಹೆಣ್ಣುಮಗಳು ಸಾರ್ವಜನಿಕ ಕೊಳದಲ್ಲಿ ನೀರು ಕುಡಿದುದಕ್ಕೆ, ಚಿಕ್ಕ ದಲಿತ ಮಗು ದೇವಸ್ಥಾನದೊಳಕ್ಕೆ ಪ್ರವೇಶ ಮಾಡಿದ್ದಕ್ಕೆ ಶಿಕ್ಷಿಸಿದ ಉದಾಹರಣೆಗಳಿವೆ. ಇಂತಹ ಘಟನೆಗಳನ್ನು ಸಾಹಿತ್ಯದ ಮೂಲಕ ಇವರಿಬ್ಬರೂ ಖಂಡಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಸ್ಪೃಶ್ಯಲೋಕ, ಸ್ತ್ರೀಲೋಕ ಎರಡೂ ಸಮುದಾಯಗಳನ್ನು ಅಭಿನಂದಿಸಿದ್ದೇವೆ' ಎಂದು ಹೇಳಿದರು.

ಪ್ರೊ.ಕೆ.ಪಿ. ಕೃಷ್ಣ, ಪತ್ರಕರ್ತ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಸಾಹಿತಿ ದ್ವಾರನಕುಂಟೆ ಪಾತಣ್ಣ, 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಸತ್ಯಮಂಗಲ ಮಹಾದೇವ್, ಆರ್.ಜಿ.ಹಳ್ಳಿ ನಾಗರಾಜ್, ಸಿದ್ದಲಿಂಗಯ್ಯ ಬನ್ನಂಗಾಡಿ ಇದ್ದರು.


ಉದಯವಾಣಿ

ಬುಧವಾರ, ಫೆಬ್ರವರಿ 1, 2023

ಬೇಂದ್ರೆ ಬರಹಗಳಲ್ಲಿ ಎದ್ದು ಕಾಣುವ ಪ್ರೀತಿ

ಬೆಂಗಳೂರು: ದ. ರಾ. ಬೇಂದ್ರೆ ಅವರ ಬರಹಗಳ ವಸ್ತು, ವಿಷಯ, ವಿನ್ಯಾಸ, ಛಂದಸ್ಸುಗಳಲ್ಲಿ ನೆಲ ಮುಟ್ಟುವ ಪ್ರೀತಿ ಎದ್ದು ಕಾಣುತ್ತದೆ ಎಂದು ವಿಮರ್ಶಕ ಡಾ. ವಿ. ಚಂದ್ರಶೇಖರ ನಂಗಲಿ ಹೇಳಿದ್ದಾರೆ.

ನಯನ ಸಭಾಂಗಣದಲ್ಲಿ ದ. ರಾ. ಬೇಂದ್ರೆ ಕಾವ್ಯಕೂಟ ಆಯೋಜಿಸಿದ್ದ ವರಕವಿ ದ. ರಾ. ಬೇಂದ್ರೆ ಅವರ 127ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೇಂದ್ರೆಯವರು ಪ್ಯಾಕೇಜ್ ಕವಿಯಲ್ಲ, ಪ್ಯಾಕೇಜ್ ಎಂದರೆ ಸುಳ್ಳು ಸೃಷ್ಟಿ. ಇಂದು ನಮ್ಮ ಜೀವನವೇ ಪ್ಯಾಕೇಜ್ ರೂಪಕ್ಕೆ ಇಳಿದಿದೆ. ಧರ್ಮ, ರಾಜಕೀಯ, ಆಹಾರಗಳೆಲ್ಲವೂ ಪ್ಯಾಕೇಜ್ ರೂಪದಲ್ಲಿವೆ. ಆದರೆ ಬೇಂದ್ರೆಯವರು ಪ್ರಕ್ರಿಯೆ (ನಿಸರ್ಗ)ಗಳ ಕವಿ, ಜೀವನ ಪ್ರವಾಹಗಳ ಕವಿ ಎಂದು ಬಣ್ಣಿಸಿದರು.



ನಯನ ಸಭಾಂಗಣದಲ್ಲಿ ದ. ರಾ. ಬೇಂದ್ರೆ ಹುಟ್ಟುಹಬ್ಬ ಕಾರ್ಯಕ್ರಮ ನಡೆಯಿತು.

ಪ್ರಸ್ತಾವಿಕವಾಗಿ ಮಾತನಾಡಿದ ಕಾವ್ಯಕೂಟದ ಉಪಾಧ್ಯಕ್ಷ ಶ್ರ. ದೇ. ಪಾರ್ಶ್ವನಾಥ್, ಬೇಂದ್ರೆಯವರ ಬರಹಗಳ ಬಗ್ಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದೆವು. ಆದರೆ ಸೂಕ್ತ ಸಂಖ್ಯೆಯಲ್ಲಿ ಬರಹಗಳು ಬರಲಿಲ್ಲ. ಈ ಹಿನ್ನೆಲೆಯಲ್ಲಿ ನಾವು ದ. ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿಯನ್ನು ನೀಡುತ್ತಿದ್ದೇವೆ. ಇದು ಒಂದೆಡೆ ದುಃಖ ಇನ್ನೊಂದೆಡೆ ಸಂತೋಷ ತಂದಿದೆ ಎಂದು ಹೇಳಿದರು.

ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ, ವಿಶ್ವಕವಿ, ವರಕವಿ ದ. ರಾ. ಬೇಂದ್ರೆ ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು ನನ್ನ ಪುಣ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಜಿ. ಕೃಷ್ಣಪ್ಪ ಅವರ 'ಬರೆಹದಲ್ಲಿ ಬೇಂದ್ರೆಯವರ ಬದುಕು', 'ಕರ್ಣಚೈತ್ರನ ಪರ್ಣಶಾಲೆ' ಕೃತಿಗಳನ್ನು ಬಿ. ಎಂ. ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ ನಾಡೋಜ ಡಾ. ಜಿ. ಕೃಷ್ಣಪ್ಪ, ಕಾವ್ಯಕೂಟದ ಕಾರ್ಯದರ್ಶಿ ಸಮಿಉಲ್ಲಾಖಾನ್ ಮುಂತಾದವರು ಉಪಸ್ಥಿತರಿದ್ದರು.

ವಿಶ್ವವಾಣಿ

01.02.2023 ಬುಧವಾರ
vishwavani.news

ಜಾತಿ ಒಂದು ಘೋರ ವಿಷ ಎಂಬುದನ್ನು ಬೋಧಿಸಲಿ



ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಹಿರಿಯ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್, ಕವಿ ಸುಬ್ಬು ಹೊಲೆಯಾರ್, ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ, ಈರೇಗೌಡ ಬಸವರಾಜು, ಹಿರಿಯ ಸಾಹಿತಿ ದ್ವಾರನಕುಂಟೆ ಪಾತಣ್ಣ, ಚ.ಹ.ರಘುನಾಥ ಮತ್ತಿತರರು ಇದ್ದರು.

ಬೆಂಗಳೂರು: ಜಾತಿ ವ್ಯವಸ್ಥೆ ಒಂದು ಘೋರ ಶಾಪ ಎನ್ನುವುದನ್ನು ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಬೋಧಿಸಬೇಕು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದ್ದಾರೆ.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಗಾಂಧೀಜಿ, ಅಂಬೇಡ್ಕರ್, ಕುವೆಂಪು ಕಂಡಿದ್ದ ಕನಸಿನ ವಿರುದ್ಧ ದಿಕ್ಕಿನಲ್ಲಿ ನಾವು ಸಾಗುತ್ತಿದ್ದೇವೆ, ಮಹಾತ್ಮಾ ಗಾಂಧಿ ಅವರನ್ನು ಪ್ರತಿ ದಿನ ಕೊಲ್ಲುತ್ತಿದ್ದೇವೆ. ನಮಗೆ ಸಂವಿಧಾನ ಅಪ್ರಸ್ತುತವಾಗುತ್ತಿದೆ. ನಮ್ಮ ಅಂತಃಸಾಕ್ಷಿ ಸತ್ತು ಹೋಗುತ್ತಿದೆ. ಅನ್ಯ ಜಾತಿಯವರನ್ನು ಪ್ರೀತಿಸಿದಳೆಂಬ ಕಾರಣಕ್ಕೆ ಸ್ವಂತ ಮಗಳನ್ನೇ ಸುಪಾರಿ ಕೊಟ್ಟು ಕೊಲೆ ಮಾಡಿಸುವ ಹೇಯ ಕೃತ್ಯಗಳಿಗೆ ನಾವೆಲ್ಲಾ ಸಾಕ್ಷಿಯಾಗಿದ್ದೇವೆ. ಜಾತಿ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವುದು ಹೇಯ ಕೃತ್ಯ ಎಂದು ಗಾಂಧಿ ಮತ್ತು ಅಂಬೇಡ್ಕರ್ ಭಾವಿಸಿದ್ದರು ಆದರೆ ಈಗಲೂ ಈ ಹೇಯ ಪದ್ಧತಿ ಚಾಲ್ತಿಯಲ್ಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ರಚಿಸಿದ ನನ್ನ ಎಲುಬಿನ ಹಂದರದೊಳಗೊಂದು ಮಸೀದಿ ಇದೆ. ಅಲ್ಲಿದ್ದಾನೆ ರಾಮ, ಅಲ್ಲಿದ್ದಾನೆ ಈಶ ಗೀತೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಕವಿ ಸುಬ್ಬು ಹೊಲೆಯಾರ್, ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ, ಈರೇಗೌಡ ಬಸವರಾಜು, ಹಿರಿಯ ಸಾಹಿತಿ ದ್ವಾರನಕುಂಟೆ ಪಾತಣ್ಣ, ಚ.ಹ.ರಘುನಾಥ, ಸಾಹಿತಿ ಆರ್.ಜಿ. ಹಳ್ಳಿನಾಗರಾಜ್ ಇದ್ದರು.

ಇಂದು ಸಂಜೆ
INDU SANJE

01 Feb 2023


POWERED BY.
KHUSHI HOST



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ವಿವೇಕ ಯುವ ಮತ್ತು ಗಮ್ಯ ಫೌಂಡೇಶನ್, ಕೈಗಾರಿಕೆ & ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರುಗಳ ಸಹಯೋಗದೊಂದಿಗೆ ವಿಧಾನಸೌಧದ ಬೃಹತ್ ಮೆಟ್ಟಿಲುಗಳ ಬಳಿ ಆಯೋಜಿಸಿರುವ 'ಗಾಂಧಿ ಸ್ಮರಣ, ಗಾಂಧಿ ನಮನ' ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳು ಹಾಗೂ ರಾಜ್ಯ ಗಡಿ ಹಾಗೂ ನದಿ ರಕ್ಷಣಾ ಆಯೋಗದ ಅಧ್ಯಕ್ಷ ನ್ಯಾ.ಶಿವರಾಜ್ ವಿ.ಪಾಟೀಲ, ಪ್ರಜಾವಾಣಿ ಮುಖ್ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ನಾಡೋಜ , ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ: ವೂಡೇ ಪಿ.ಕೃಷ್ಣ, ವಿವೇಕ ಯುಗ ಪ್ರತಿಷ್ಠಾನದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಈ ಸಂಜೆ

ಬುಧವಾರ • ಫೆಬ್ರುವರಿ 1, 2023




ವಿವೇಕಾ ಯುಗ ಮತ್ತು ಗಮ್ಯ ಫೌಂಡೇಶನ್, ಕೈಗಾರಿಕಾ ವಾಣಿಜ್ಯ ಇಲಾಖೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ವಿಧಾನಸೌಧದ ಬೃಹತ್ ಮೆಟ್ಟಲುಗಳ ಮುಂಭಾಗ ಆಯೋಜಿಸಿದ್ದ ಗಾಂಧಿ ಸ್ಮರಣ-ಗಾಂಧಿ ನಮನ ಕಾರ್ಯಕ್ರಮವನ್ನು ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.
ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್, ನಾಡೋಜ ವೂಡೇಪಿ ಕೃಷ್ಣ ಹಲವು ಮುಖಂಡರು ಉಪಸ್ಥಿತರಿದ್ದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ

ಈ ಸಂಜೆ

ಬುಧವಾರ • ಫೆಬ್ರುವರಿ 1, 2023



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ, ಶಿಕ್ಷಣ ತಜ್ಞ ನಾಡೋಜ ಡಾ. ವೋಡೇ ಪಿ. ಕೃಷ್ಣ ಅವರ 60 ನೇ ವರ್ಷದ ಹುಟ್ಟುಹಬ್ಬಕ್ಕೆ ಕರ್ನಾಟಕ ವಿಚಾರ ವೇದಿಕೆಯ ಅಧ್ಯಕ್ಷ ಪಾಲನೇತ್ರ, ಕನ್ನಡ ಕೃಷ್ಣ, ಎಂ.ಬಿ. ಮಂಜುಳ, ತುಕಾರಾಂ ಶಾಸ್ತ್ರಿ ಉದಯ್ ಕುಮಾರ್ ಸೇರಿದಂತೆ ಹಲವು ಮುಖಂಡರು ಶುಭಕೋರಿದರು.

ವಿಶ್ವವಾಣಿ

ಬುಧವಾರ 01.02.2023

ಜಾತಿ ಒಂದು ಘೋರ ವಿಷ ಎಂಬುದನ್ನು ಬೋಧಿಸಲಿ

ಬೆಂಗಳೂರು: ಜಾತಿ ವ್ಯವಸ್ಥೆ ಒಂದು ಘೋರ ಶಾಪ ಎನ್ನುವುದನ್ನು ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಬೋಧಿಸಬೇಕು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದ್ದಾರೆ.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಗಾಂಧೀಜಿ, ಅಂಬೇಡ್ಕರ್, ಕುವೆಂಪು ಕಂಡಿದ್ದ ಕನಸಿನ ವಿರುದ್ಧ ದಿಕ್ಕಿನಲ್ಲಿ ನಾವು ಸಾಗುತ್ತಿದ್ದೇವೆ, ಮಹಾತ್ಮಾ ಗಾಂಧಿ ಅವರನ್ನು ಪ್ರತಿದಿನ ಕೊಲ್ಲುತ್ತಿದ್ದೇವೆ. ನಮಗೆ ಸಂವಿಧಾನ ಅಪ್ರಸ್ತುತವಾಗುತ್ತಿದೆ. ನಮ್ಮ ಅಂತಃಸಾಕ್ಷಿ ಸತ್ತು ಹೋಗುತ್ತಿದೆ. ಅನ್ಯ ಜಾತಿಯವರನ್ನು ಪ್ರೀತಿಸಿದಳೆಂಬ ಕಾರಣಕ್ಕೆ ಸ್ವಂತ ಮಗಳನ್ನೇ ಸುಪಾರಿ ಕೊಟ್ಟು ಕೊಲೆ ಮಾಡಿಸುವ ಹೇಯ ಕೃತ್ಯಗಳಿಗೆ ನಾವೆಲ್ಲಾ ಸಾಕ್ಷಿಯಾಗಿದ್ದೇವೆ. ಜಾತಿ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವುದು ಹೇಯ ಕೃತ್ಯ ಎಂದು ಗಾಂಧಿ ಮತ್ತು ಅಂಬೇಡ್ಕರ್ ಭಾವಿಸಿದ್ದರು ಆದರೆ ಈಗಲೂ ಈ ಹೇಯ ಪದ್ಧತಿ ಚಾಲ್ತಿಯಲ್ಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ರಚಿಸಿದ ನನ್ನ ಎಲುಬಿನ ಹಂದರದೊಳಗೊಂದು ಮಸೀದಿ ಇದೆ. ಅಲ್ಲಿದ್ದಾನೆ ರಾಮ, ಅಲ್ಲಿದ್ದಾನೆ ಈಶ ಗೀತೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಕವಿ ಸುಬ್ಬು ಹೊಲೆಯಾರ್, ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ, ಈರೇಗೌಡ ಬಸವರಾಜು, ಹಿರಿಯ ಸಾಹಿತಿ ದ್ವಾರನಕುಂಟೆ ಪಾತಣ್ಣ, ಚ.ಹ.ರಘುನಾಥ, ಸಾಹಿತಿ ಆರ್.ಜಿ. ಹಳ್ಳಿನಾಗರಾಜ್ ಇದ್ದರು.



ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಹಿರಿಯ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್, ಕವಿ ಸುಬ್ಬು ಹೊಲೆಯಾರ್, ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ, ಈರೇಗೌಡ ಬಸವರಾಜು, ಹಿರಿಯ ಸಾಹಿತಿ ದ್ವಾರನಕುಂಟೆ ಪಾತಣ್ಣ, ಚ.ಹ.ರಘುನಾಥ ಮತ್ತಿತರರು ಇದ್ದರು.

ಪ್ರಜಾವಾಣಿ

ಮಂಗಳವಾರ • ಜನವರಿ 31, 2023

ನಗರದಲ್ಲಿ ಇಂದು

ದ.ರಾ. ಬೇಂದ್ರೆ ಜಯಂತಿ ಮತ್ತು ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಪ್ರೊ. ಪಿ. ಕೃಷ್ಣ, ಉದ್ಘಾಟನೆ: ವಿ. ಚಂದ್ರಶೇಖರ ನಂಗಲಿ, ಪ್ರಶಸ್ತಿ ಪುರಸ್ಕೃತರು: ಎಂ. ನರಸಿಂಹ, ಕೃತಿಗಳ ಬಿಡುಗಡೆ: ಬೈರಮಂಗಲ ರಾಮೇಗೌಡ, ಬಹುಮಾನ ವಿತರಣೆ: ಜಿ. ಕೃಷ್ಣಪ್ಪ, ಆಯೋಜನೆ: ದ.ರಾ. ಬೇಂದ್ರೆ ಕಾವ್ಯಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಈ ಸಂಜೆ

ಮಂಗಳವಾರ • ಜನವರಿ 31, 2023



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ವಿದ್ಯಾರ್ಥಿಗಳಿಗೆ ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರಹೆಗಡೆ ಕಾಗೇರಿ ಅವರು ಪ್ರಮಾಣ ಪತ್ರ ವಿತರಿಸಿದರು. ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ನಾಡೋಜ ಡಾ.ವೂಡೇ ಪಿ.ಕೃಷ್ಣ, ರೆಡ್ ಕ್ರಾಸ್ ಸಂಸ್ಥೆ ರಾಜ್ಯ ಸಂಯೋಜಕ ರಾಜು ಚಂದ್ರಶೇಖರ್ ಸೇರಿವಂತೆ ಮತ್ತಿತರರು ಹಾಜರಿದ್ದರು.

ಸಂಯುಕ್ತ ಕರ್ನಾಟಕ

ಮಂಗಳವಾರ, 31, ಜನವರಿ, 2023

ಬೆಂಗಳೂರು | BENGALURU

ಗಾಂಧೀಜಿ ವಿಚಾರಧಾರೆಗಳ ಮರು ಚಿಂತನೆ ಅಗತ್ಯ



ಬೆಂಗಳೂರಿನ ಗಾಂಧಿ ಭವನದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ಸಮಬಾಳಿನ ಸರ್ವೋದಯ ದಿನಾಚರಣೆ ಕಾರ್ಯಕ್ರಮವನ್ನು ಸಾಹಿತಿ ಬಿ.ಆರ್.ಪೊಲೀಸ್ ಪಾಟೀಲ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ಸಿ.ನಾರಾಯಣಸ್ವಾಮಿ, ಲೇಖಕಿ ಡಾ.ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ, ಜೀರಿಗೆ ಲೋಕೇಶ್, ಜಿ.ಬಿ.ಲೋಕೇಶ್ ಸೇರಿ ಮತ್ತಿತರರು ಇದ್ದರು.

ಬೆಂಗಳೂರು: ಗಾಂಧೀಜಿಯವರ ಚಿಂತನೆಗಳು ಇಂದು ಮುಂದು ಮತ್ತು ಎಂದೆಂದಿಗೂ ಪ್ರಸ್ತುತವಾಗಿದ್ದು, ಸದ್ಯ ಮಹಾತ್ಮನ ವಿಚಾರಧಾರೆಗಳ ಮರು ಚಿಂತನೆ ಅಗತ್ಯವಾಗಿದೆ ಎಂದು ಜಾನಪದ ಸಾಹಿತಿ ಪ್ರೊ.ಬಿ.ಆರ್.ಪೊಲೀಸ್ ಪಾಟೀಲ್ ಹೇಳಿದರು.

ಮಹಾತ್ಮಾ ಗಾಂಧೀಜಿಯವರ ಪುಣ್ಯ ಸ್ಮರಣೆ ಅಂಗವಾಗಿ ಗಾಂಧಿ ಭವನದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ಸಮಬಾಳಿನ ಸರ್ವೋದಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಮೇರು ಪುರುಷ ಮಹಾತ್ಮ ಗಾಂಧಿ ತಮಗಾಗಿ ಒಂದು ಮನೆಯನ್ನೂ ಕಟ್ಟಲಿಲ್ಲ. ಬರೀ ತುಂಡುಡುಗೆಯಲ್ಲಿದ್ದುಕೊಂಡು ಕಾಲ್ನಡಿಗೆಯಲ್ಲೇ ದೇಶ ಸುತ್ತುವುದರೊಂದಿಗೆ ಎಲ್ಲ ಮನಸ್ಸುಗಳನ್ನು ಒಂದು ಮಾಡಿದ ಧೀಮಂತ ಸಂತನೆಂದು ಬಣ್ಣಿಸಿದರು.ಸರಳತೆಯ ಸಾಕಾರ ಮೂರ್ತಿ ಗಾಂಧೀಜಿಯವರನ್ನು ಸ್ಮರಿಸದಿದ್ದರೆ ನಾವೆಲ್ಲ ಕೃತಘ್ನರೆನ್ನಿಸಿಕೊಳ್ಳುತ್ತೇವೆ. ಗಾಂಧೀಜಿ ಅಪ್ಪಟ ದೇಶಿಯ ನಾಯಕರಾಗಿದ್ದರು: ತತ್ವಾದರ್ಶಗಳನ್ನು ಇಂದಿನ ಪೀಳಿಗೆ ಅಳವಡಿಸಿಕೊಳ್ಳಬೇಕೆಂದು ಅವರು ಮನವಿ ಮಾಡಿದರು.

ಲೇಖಕಿ ಡಾ.ವಸುಂಧರಾ ಭೂಪತಿ ಮಾತನಾಡಿ, ಆಗಾಗ ಉಪವಾಸ ಮಾಡುವುದರಿಂದ ನಮ್ಮ ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಹಾಕಲು ಸಹಾಯವಾಗುತ್ತದೆ. ಈ ನಿಟ್ಟಿನಲ್ಲಿ ತಮ್ಮ ತಾಯಿಯ ಪ್ರೇರಣೆಯಿಂದ ಉಪವಾಸ ವ್ರತಾಚರಣೆ ಮಾಡುತ್ತಿದ್ದ ಗಾಂಧಿಜಿಯವರು, ಆ ದಿನಗಳಲ್ಲೇ ಉಪವಾಸದಿಂದಾಗುವ ಪ್ರಯೋಜನಗಳನ್ನು ತಿಳಿಸಿಕೊಟ್ಟಂಥವರು ಎಂದರು.

ಇದಕ್ಕೂ ಮುನ್ನ ಮಾತನಾಡಿದ ವೇದಿಕೆಯ ಮೇಲಿದ್ದ ವಿವಿಧ ಗಣ್ಯರು, ಗಾಂಧೀಜಿಯವರು ಬಡವರ ಪರ ರೈತರ ಪರ ನೀತಿ ನಿರೂಪಿಸಬೇಕೆಂದು ಹೇಳುತ್ತಿದ್ದರು. ಸತ್ಯ ಅಹಿಂಸೆಯ ಆರಾಧಕರಾಗಿದ್ದರು. ಗಾಂಧೀಜಿಯವರೂ ಕೂಡ ಅನೇಕ ಬಾರಿ ತಪ್ಪುಗಳನ್ನು ಮಾಡಿದ್ದರು. ಬಳಿಕ ತಮ್ಮ ತಪ್ಪಿನ ಅರಿವಾದಾಗ ಆ ಬಗ್ಗೆ ಪಶ್ಚಾತಾಪ ಪಡುತ್ತಿದ್ದರು ಎಂದು ಗುಣಗಾನ ಮಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ ಕೃಷ್ಣ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿಜಿಯವರು ಈ ದೇಶಕ್ಕೆ ಬರೀ ನನ್ನೊಬ್ಬನಿಂದ ಸ್ವಾತಂತ್ರ್ಯ ಬಂದಿಲ್ಲ. ಬದಲಾಗಿ ನನ್ನೊಂದಿಗೆ ಲಕ್ಷೋಪಲಕ್ಷ ಮಂದಿ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಮಾಡಿದವರಿದ್ದಾರೆಂದು ಹೇಳುವ ಮೂಲಕ ದೊಡ್ಡತನ ಮೆರೆಯುತ್ತಿದ್ದರು ಎಂದರು. ಮಾಜಿ ಸಂಸದ ಸಿ.ನಾರಾಯಣಸ್ವಾಮಿ, ಗಾಂಧಿ ಭವನದ ಅಧಿಕಾರಿ ಇಂದಿರಾ ಕೃಷ್ಣಪ್ಪ, ಜಿ.ಬಿ.ಶಿವರಾಜ್, ಜೀರಿಗೆ ಲೋಕೇಶ್, ವರ್ಧಾ ಆಶ್ರಮದ ವಿನೋದ್ ಭಾಯಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಮಂಗಳವಾರ • ಜನವರಿ 31, 2023

'ಸರ್ವೋದಯ ದಿನಾಚರಣೆ': ನಿವೃತ್ತ ನ್ಯಾ. ನಾಗಮೋಹನ್ ದಾಸ್ ಅಭಿಮತ

'ಯುವಜನರಿಗೆ ಗಾಂಧಿ ಪ್ರೇರಕ ಶಕ್ತಿ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಮುವಾದ, ಭ್ರಷ್ಟಾಚಾರ, ಸರ್ವಾಧಿಕಾರ, ಅಪರಾಧೀಕರಣದ ವಿರುದ್ಧ ಜನರನ್ನು ಎತ್ತಿಕಟ್ಟುವ ಗಾಂಧೀಜಿ ಎಂಬ ಪ್ರೇರಕ ಶಕ್ತಿ ಯುವಸಮೂಹಕ್ಕೆ ಬೇಕಾಗಿದೆ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಹಯೋಗದಲ್ಲಿ ಸೋಮವಾರ ನಡೆದ '75ನೇ ವರ್ಷದ ಸರ್ವೋದಯ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. 'ಗಾಂಧೀಜಿ ಅವರ ಸತ್ಯನುಡಿ, ಸತ್ಯದ ದಾರಿ, ಮತ್ತು ಅವರ ಮಾರ್ಗವನ್ನು ಅನುಸರಿಸಿಕೊಂಡು ದೇಶ ಮುನ್ನಡೆಸುವುದನ್ನು ಈ ಸಂದರ್ಭದಲ್ಲಿ ಯುವ ಸಮೂಹ ಕಲಿಯಬೇಕಾಗಿದೆ' ಎಂದರು.



ನಗರದಲ್ಲಿ ಸೋಮವಾರ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ (ಎಡದಿಂದ) ಪಿಜಿಆರ್ ಸಿಂಧ್ಯ, ಎನ್‌.ಆರ್‌. ವಿಶುಕುಮಾರ್‌, ಎಚ್‌.ಎನ್ ನಾಗಮೋಹನ್ ದಾಸ್ ಮತ್ತು ಪ್ರೊ. ಪಿ. ಕೃಷ್ಣ ಗಾಂಧೀಜಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜನರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟಿದ್ದಕ್ಕೆ, ಕಾನೂನು ಉಲ್ಲಂಘನೆ ಎಂಬ ಹಲವು ಪ್ರಕರಣಗಳಲ್ಲಿ ಗಾಂಧೀಜಿ ಅವರನ್ನು ಬಂಧಿಸಲಾಗಿತ್ತು. ಆದರೆ, ಅವರು ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳ ಮುಂದೆ ಆ ಎಲ್ಲಾ ತಪ್ಪುಗಳನ್ನು ತಾವೇ ಮಾಡಿರುವುದಾಗಿ ಒಪ್ಪಿಕೊಂಡರು. ಹೀಗಾಗಿ 2,332 ದಿನಗಳ ಜೈಲು ಶಿಕ್ಷೆ ಅನುಭವಿಸಿದರು. ಆದರೆ ಇವತ್ತು ಕೋರ್ಟ್‌ನ ಹೊರಗಡೆ ಬಾಬರಿ ಮಸೀದಿಯ ಧ್ವಂಸ, ಗೋಧ್ರಾ ಹತ್ಯಾಕಾಂಡವನ್ನು ತಾನೇ ಮಾಡಿದ್ದು ಎಂದು ಮೀಸೆ ತಿರುಗಿಸಿ ಹೇಳುತ್ತಾರೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಪ್ರತಿಯೊಬ್ಬರೂ ಸರ್ವೋದಯ ಪಾತ್ರೆ ಎಂಬ ಒಂದು ಹುಂಡಿಯನ್ನು ಪ್ರಾರಂಭಿಸಿ, ಅದರಲ್ಲಿ ನಿತ್ಯ ಹಣ ಸಂಗ್ರಹಿಸಬೇಕು. ಸರ್ವೋದಯ ದಿನದಂದು ಬಡವರಿಗೆ ದೀನದಲಿತರ ಶ್ರೇಯೋಭಿವೃದ್ಧಿಗೆ ಆ ಹಣವನ್ನು ವಿನಿಯೋಗಿಸಬೇಕು. ನಾನು 2006ರಿಂದ ಇದುವರೆಗೂ ಆ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದೇನೆ' ಎಂದು ಅವರು ಹೇಳಿದರು.

ಗಾಂಧಿ ಸ್ಮಾರಕದ ಉಪಾಧ್ಯಕ್ಷ ಎನ್. ಆರ್. ವಿಶುಕುಮಾರ್, ಪ್ರೊ.ಪಿ. ಕೃಷ್ಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಎಂ.ಎಸ್. ಆಶಾದೇವಿ, ನಟರಾಜ್ ಹುಳಿಯಾರ್ ಇದ್ದರು.

ಪಾಪು-ಬಾಪುವನ್ನು ನಾಟಕವನ್ನು ಪ್ರದರ್ಶನ ಮಾಡಲಾಯಿತು.

ಸಂಜೆವಾಣಿ

ಸೋಮವಾರ 30 ಜನವರಿ 2023



ವೀಡಿಯೋಗಾಗಿ ಸ್ಕ್ಯಾನ್ ಮಾಡಿ

ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ಸಬಲೀಕರಣ ಇಲಾಖೆ ಆಶ್ರಯದಲ್ಲಿ ನಗರದ ಗಾಂಧೀ ಭವನದಲ್ಲಿ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಮುಬಾಳಿನ ಸರ್ವೋದಯ ದಿನಾಚರಣೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕೋಶಾಧ್ಯಕ್ಷ ಎಚ್.ಬಿ. ದಿನೇಶ್ ಚಾಲನೆ ನೀಡಿದರು.

30/01/2023



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆಯಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್, ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯಾಧಿಕಾರಿ ಪ್ರತಾಪ್ ಲಿಂಗಯ್ಯ, ಎ.ಎಸ್. ತಿಪ್ಪನಗೌಡ ಮತ್ತಿತರರಿದ್ದರು.

ಕನ್ನಡ ದಿನಪತ್ರಿಕೆ
VIJAYAVANI BENGALURU

ಸೋಮವಾರ 23 ಜನವರಿ 2023
23 JANUARY 2023

ವಿಜಯವಾಣಿ ಚಿತ್ರ



ಹರಿದಾಸ ಕೀರ್ತನ ಬಳಗದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಹಮ್ಮಿಕೊಂಡಿದ್ದ 2ನೇ ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳವನ್ನು ಶ್ರೀ ಶಿವರುದ್ರ ಸ್ವಾಮೀಜಿ ಉದ್ಘಾಟಿಸಿದರು. ಹರಿದಾಸ ವಿದ್ವಾಂಸ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ಕಾರ್ಯದರ್ಶಿ ಎಚ್.ಬಿ. ಲಕ್ಷ್ಮೀನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ ಭಾನುವಾರ ೨೨ ಜನವರಿ 2023 | Sunday 22 January 2023



ಹರಿದಾಸ ಕೀರ್ತನ ಬಳಗ ಆಯೋಜಿಸಿರುವ 2ನೇ ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನಕ್ಕೆ, ಗಿಡಕ್ಕೆ ನೀರೆರೆಯುವ ಮೂಲಕ ಬೇಲಿ ಮಠದ ಶಿವರುದ್ರ ಸ್ವಾಮೀಜಿ ಚಾಲನೆ ನೀಡಿದರು.

ಈ ಸಂಜೆ


Jan 22, 2023



ಹರಿದಾಸ ಕೀರ್ತನ ಬಳಗದ ವತಿಯಿಂದ ನಗರದಲ್ಲಿಂದು ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ ಉದ್ಘಾಟಿಸಿದರು. ಹರಿದಾಸ ವಿದ್ವಾಂಸ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಡಾ.ವೂಡೆ ಪಿ.ಕೃಷ್ಣ, ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ವಿದ್ವಾನ್ ಎಚ್.ಬಿ.ಲಕ್ಷ್ಮಿನಾರಾಯಣ್, ಲೇಖಕ ಡಾ.ಆರ್.ವಾದಿರಾಜು ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಈ ಸಂಜೆ

Jan 21, 2023



ಗಾಂಧಿಭವನದಲ್ಲಿಂದು ಹಮ್ಮಿಕೊಂಡಿದ್ದ ದಕ್ಷಿಣ ಪ್ರಾಂತ್ಯ ಗಾಂಧಿ ಸ್ಮಾರಕ ನಿಧಿ ಕಾರ್ಯಕರ್ತರ ಸಮಾವೇಶದಲ್ಲಿ ಗಾಂಧಿಸ್ಮಾರಕ ನಿಧಿಯ ದೆಹಲಿ ಘಟಕದ ಅಧ್ಯಕ್ಷ ರಾಮಚಂದ್ರರಾಯ್, ಚಿಂತಕ ಪ್ರಸನ್ನ ಹೆಗ್ಗೋಡು, ನಾಡೋಜ ಹಂಪ ನಾಗರಾಜಯ್ಯ , ದೆಲ್ಲಿ ಕಾರ್ಯದರ್ಶಿ ಸಂಜಯ್‌ಸಿಂಗ್, ಡಾ.ವೂಡೆ ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.


ಪ್ರಜಾ ಪ್ರಗತಿ

Jan 21, 2023

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ವತಿಯಿಂದ ಕ್ಯಾಂಪಸ್ ಸಭಾಂಗಣ ಉದ್ಘಾಟನೆ

ಸ್ವತಂತ್ರ ಬದುಕು ನಿರ್ವಹಣೆಯ ಶಿಕ್ಷಣದ ಪ್ರತಿಪಾದನೆ

■ ಪ್ರಜಾಪ್ರಗತಿ.ಕಾಂ



ತುಮಕೂರು: ರಾಜ ತನ್ನ ದೇಶದಲ್ಲಿ ಮಾತ್ರ ಗೌರವವನ್ನು ಹೊಂದಿರುತ್ತಾನೆ. ಆದರೆ ವಿದ್ಯಾವಂತನಾದ ಜ್ಞಾನಿಯು ಇಡೀ ವಿಶ್ವದಲ್ಲಿ ಗೌರವವನ್ನು ಹೊಂದುವಂತಾಗುತ್ತಾನೆ ಎಂದು ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ನಗರದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆದ ತುಮಕೂರಿನ ಕಿಶೋರ ಭಾರತಿ, ಚೈತನ್ಯ ಭಾರತಿ ಮತ್ತು ವಿಕಾಸ ಭಾರತಿ ಕ್ಯಾಂಪಸ್ ಸಭಾಂಗಣಗಳ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಅವರು ಮಾತನಾಡಿದರು.

ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ವಿವೇಕಾನಂದರು ವಿದೇಶದಿಂದ ಮರಳಿದಾಗ ನಮ್ಮ ದೇಶದ ಅಭಿವೃದ್ಧಿಗೆ ತಮ್ಮ ಸಲಹೆ ಏನು ಎಂದು ಕೇಳಿದ ಸಂದರ್ಭದಲ್ಲಿ ಅವರು ಶಿಕ್ಷಣದಿಂದಲೇ ಅದು ಸಾಧ್ಯ ಎಂದು ಹೇಳಿದ್ದರು. ಇಂದಿನ ಶಿಕ್ಷಣವು ಮೌಲ್ಯ ರಹಿತವಾಗಿದ್ದು, ಅದು ಕೇವಲ ಹೊರಗಡೆ ಹೊಸ ಬಟ್ಟೆಯನ್ನು ಧರಿಸುವ ವ್ಯಕ್ತಿಗಳನ್ನು ನಿರ್ಮಾಣ ಮಾಡುವುದರಲ್ಲೇ ನಿರತವಾಗಿದೆ ಎಂದು ವಿಷಾದಿಸಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಸರ್ಕಾರ ಕೊಡುವ ಸೌಲಭ್ಯಕ್ಕೆ ಕಾಯುವಂತಾಗಿದೆ. ಕೇವಲ ಪ್ರಜೆಗಳ ಉತ್ಪಾದಕರಷ್ಟೇ ನಾವಾಗದೆ ಸ್ವತಂತ್ರವಾದ ಜೀವನ ನಿರ್ವಹಣೆಗೆ ಬೇಕಾದ ಶಿಕ್ಷಣವನ್ನು ಪಡೆದು ನಾವು ಸ್ವಾವಲಂಬಿಗಳಾಗಬೇಕು. ವಿವೇಕಾನಂದರ ಚಿಂತನೆಗಳು ಸಹಕಾರಿ ಹಾಗೂ ಪ್ರೇರಣಾದಾಯಕವಾಗಿದೆ ಎಂದರು.

ಇಂದಿನ ಯುವ ಪೀಳಿಗೆಗೆ ವಿವೇಕಾನಂದರ ಅಧ್ಯಯನ ಮಾಡುವ ಅನಿವಾರ್ಯ ಇದೆ. ಹಾಗಾಗಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ವಿವೇಕಾನಂದರ ಜೀವನ ಮತ್ತು ಸಂದೇಶವನ್ನು ಅಧ್ಯಯನ ಮಾಡುವಂತಾಗಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಜೀವನದ ಮೌಲ್ಯವು ತಿಳಿಯುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ತಿಳಿಸಿದ್ದೇನೆ. ಅವರು ಸಹ ಇದಕ್ಕೆ ಅನುಮತಿಯನ್ನು ನೀಡಿದ್ದಾರೆ ಎಂದರು.

ಪ್ರಸ್ತುತ ದಿನಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಪರಾವಲಂಬನೆಯನ್ನು ಬಿಟ್ಟು, ಸರ್ವಶ್ರೇಷ್ಠ ಭಾರತದ ಸ್ವಾವಲಂಬಿಗಳಾದ ಶ್ರೇಷ್ಠ ಪ್ರಜೆಗಳು ನಾವಾಗೋಣ. ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಶೇಷಾದ್ರಿ ಶಿಕ್ಷಣ ಸಂಸ್ಥೆಯು ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಅವರು, ನಮ್ಮ ಸಂಸ್ಥೆಯ ಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ವಿಭಾಗಗಳ ಸಭಾಂಗಣದ ಉದ್ಘಾಟನೆಯು ಮೂರು ಕಡೆಗಳಲ್ಲಿ ಒಂದೇ ದಿನ ನೆರವೇರಿರುವುದು ಸಂತಸ ತಂದಿದೆ ಎಂದರು.

ತುಮಕೂರಿನಲ್ಲಿ ಎರಡೂವರೆ ಸಾವಿರ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಥೆ ಶಿಕ್ಷಣ ನೀಡುತ್ತಿದೆ. ಈ ಭವನದ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ನಮ್ಮ ಶಾಲೆಯ ಮತ್ತು ಕಾರ್ಯಕ್ರಮದ ಯಶಸ್ಸು ಪ್ರಾಂಶುಪಾಲರಾದ ನಂದಾರಾಜು ಅವರಿಗೆ ಸಲ್ಲಬೇಕು ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಎನ್. ಪಂಡಿತಾರಾಧ್ಯ ಮಾತನಾಡಿ, ನಮ್ಮ ಸಂಸ್ಥೆಯು ಉತ್ತಮ ಹೆಸರು ಸಂಪಾದಿಸಿದ್ದು, ಅದನ್ನು ಉಳಿಸಿ ಬೆಳೆಸುವಲ್ಲಿ ಶಿಕ್ಷಕರು, ಮಕ್ಕಳು ಹಾಗೂ ಪೋಷಕರ ಸಹಕಾರ ಅತ್ಯಂತ ಪ್ರಮುಖವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲ ನಂದಾರಾಜು ಮತ್ತಿತರರು ಉಪಸ್ಥಿತರಿದ್ದರು.



ವಿದ್ಯಾವಂತ ಜ್ಞಾನಿಯು ನಮ್ಮ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲಿಯೂ ತನ್ನ ಜ್ಞಾನಮಟ್ಟಕ್ಕೆ ತಕ್ಕಂತೆ ಗೌರವ ಹೊಂದಿರುತ್ತಾನೆ. ಆದ್ದರಿಂದಲೇ ನ ಹಿ ಜ್ಞಾನೇನ ಸದೃಶಂ ಎಂಬ ಮಾತು ಬಂದಿರುವುದು. ಪ್ರಸ್ತುತ ದಿನಗಳಲ್ಲಿ ಪೋಷಕರು ಶಾಲೆಗಳನ್ನು ಪರಿಶೀಲಿಸಿ, ಅಲ್ಲಿನ ವ್ಯವಸ್ಥೆಯನ್ನು ನೋಡಿದ ಬಳಿಕವಷ್ಟೇ ಮಕ್ಕಳನ್ನು ಶಾಲೆಗಳಿಗೆ ದಾಖಲಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಸುಸಜ್ಜಿತವಾದ ಸಭಾಂಗಣವನ್ನು ನಿರ್ಮಿಸಿದ್ದು, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿದೆ.

■ ಶ್ರೀ ಸಿದ್ಧಲಿಂಗ ಸ್ವಾಮೀಜಿ

ಬುದ್ಧ ಬಸವ ಗಾಂಧೀಜಿ ತತ್ತ್ವಗಳನ್ನು ಅವಳಡಿಸಿಕೊಂಡಿರುವ ಕೆ.ಎಂ. ರೇವಣ್ಣ ೮೦ : ಆತ್ಮೀಯ ಅಭಿನಂದನೆ



'ಸದ್ದುಗದ್ದಲವಿಲ್ಲದೆ, ೫೦ ಕೃತಿಗಳನ್ನು ರಚಿಸಿ ಹಿರಿಯ ಸಾಹಿತಿ ಎನಿಸಿಕೊಂಡಿದ್ದರೂ ವಿಶ್ರಾಂತ ತಹಸಿಲ್ದಾರ್ ಆಗಿದ್ದರೂ ರೇವಣ್ಣನವರಿಗೆ ಕೊಂಚವೂ ಗರ್ವವಿಲ್ಲ. ಶರಣರ ವಚನಗಳು, ಸರ್ವಜ್ಞ ವಚನ, ಜನಪದ ಗೀತೆಗಳು ಇವುಗಳ ಸಾರವನ್ನೆಲ್ಲಾ ಅವಳಡಿಸಿಕೊಂಡು 'ಯಶಸಸ್ಸಿನ ಸೂತ್ರಗಳು' ಕೃತಿಯನ್ನು ರಚಿಸಿದ್ದಾರೆ' ಎಂದು ಇತ್ತೀಚೆಗೆ ತಾನೇ ನಾಡೋಜ ಗೌರವಕ್ಕೆ ಭಾಜನರಾದ ಖ್ಯಾತ ಸಾಹಿತಿ, ಅಂಕಣಕಾರ ಎಸ್. ಷಡಕ್ಷರಿ ತಿಳಿಸಿದರು.

'ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಪ್ರತಿಷ್ಠಾನ' ೨೦-೧೨-೨೦೨೨ರಂದು ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಹಿರಿಯ ಸಾಹಿತಿ, ಸಂಸ್ಕೃತಿ ಚಿಂತಕ ಕೆ.ಎಂ. ರೇವಣ್ಣ ಅವರಿಗೆ ೮೦ ಅಭಿನಂದನೆ ಹಾಗೂ ಅವರ 'ಯಶಸ್ಸಿನ ಸೂತ್ರಗಳು' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಮಂಗಳ ಮತ್ತು ರೇವಣ್ಣ ದಂಪತಿಗಳನ್ನು ಅಭಿನಂದಿಸಿ ಷಡಕ್ಷರಿ ಅವರು ಮಾತನಾಡಿದರು.

ಕೃತಿ ಲೋಕಾರ್ಪಣೆ ಮಾಡಿದ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ. ವೂಡೆ ಪಿ. ಕೃಷ್ಣ, ಖ್ಯಾತ ನಟ ಕಮಲಹಾಸನ್ ಅವರನ್ನು ಹೋಲುತ್ತಿದ್ದಾರೆ ಎಂದು ತಮಾಷೆಯಾಗಿ ಹೇಳಿದರು.

ಸಮಾರಂಭ ಉದ್ಘಾಟಿಸಿದ ಬಹುಶ್ರುತ ವಿದ್ವಾಂಸರು, ಶಾಸ್ತ್ರಿ ಚೂಡಾಮಣಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಎನಗಿಂತ ಕಿರಿಯರಿಲ್ಲ ಎಂಬ ಉದಾತ್ತ ಭಾವನೆ ಬೆಳೆಸಿಕೊಂಡಿರುವ ರೇವಣ್ಣ ಶ್ರೇಷ್ಠ ಸಾಹಿತ್ಯ ಪರಿಚಾರಕರು. ಯಾರನ್ನೂ ದ್ವೇಷಿಸಬೇಡ, ಹೆಚ್ಚಿನದನ್ನು ಅಪೇಕ್ಷಿಸಬೇಡ, ಮೊಲದಾದ ಸೂತ್ರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ಇಂತಹವರ ಸಂತತಿ ಸಾವಿರವಾಗಲಿ' ಎಂದು ಹಾರೈಸಿದರು.

ಕೆ.ಎಂ. ರೇವಣ್ಣನವರ ಯಶಸ್ಸಿನಲ್ಲಿ ಅವರ ಪತ್ನಿ ಮಂಗಳಮ್ಮನವರ ಪಾತ್ರ ದೊಡ್ಡದು ಎಂದು ಅಭಿಪ್ರಾಯಪಟ್ಟ ಡಾವ. ವೂಡೆ ಪಿ. ಕೃಷ್ಣ 'ಗಾಂಧಿ ಮನಸ್ಕರಾದ ರೇವಣ್ಣ ಬುದ್ಧ, ಬಸವ, ಬಸವಣ್ಣ ಮುಂತಾದವರ ತತ್ತ್ವಗಳನ್ನು ಅಳವಡಿಸಿಕೊಂಡಿದ್ದಾರೆ. ವಿವೇಕಾನಂದರು ಹೇಳಿದಂತೆ, ತಮ್ಮ ಪಾಲಿಗೆ ಬಂದದ್ದನ್ನು ಸ್ವೀಕರಿಸಿ ನಡೆಯುತ್ತಿದ್ದಾರೆ. ಈ ಮಹಾನ್ ವ್ಯಕ್ತಿಗಳ ಚಿಂತನೆಗಳನ್ನು ಆಧರಿಸಿ 'ಯಶಸ್ಸಿನ ಸೂತ್ರಗಳು' ಕೃತಿಯನ್ನು ರಚಿಸಿದ್ದಾರೆ' ಎಂದು ಹೇಳಿದರು.

ಸಮಾರಂಭದಲ್ಲಿ ರೇವಣ್ಣನವರ ಜೊತೆಗೆ ಅಭಿನಂದಿತರಾದ ಅವರ ಪತ್ನಿ ಮಂಗಳ ಅವರು ಮಾತನಾಡಿ, 'ಅನೇಕ ವರ್ಷಗಳಿಂದ 'ನನ್ನ ಪತಿ ಹಗಲು-ರಾತ್ರಿ ಬರೆಯುತ್ತಿರುತ್ತಾರೆ. ಗೃಹ ಕೃತ್ಯದ ವಿಷಯವಾಗಿ ನಾವು ಎಂದಿಗೂ ಅವರಿಗೆ ತೊಂದರೆ ಕೊಟ್ಟಿಲ್ಲ' ಎಂದು ಹೇಳಿದರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಬುದ್ಧ ಬಸವ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಸಿಸಿರಾ 'ಮುಂದಿನ ಏಪ್ರಿಲ್ ತಿಂಗಳಿಗೆ ಪ್ರತಿಷ್ಠಾನ ಸ್ಥಾಪನೆಯಾಗಿ ೨೫ ವರ್ಷಗಳಾಗುತ್ತವೆ. ಪ್ರತಿಷ್ಠಾನದ ಅವಿಭಾಜ್ಯ ಅಂಗವಾಗಿರುವ ರೇವಣ್ಣ ೮೦ರಲ್ಲಿ ಪಾದಾರ್ಪಣೆ ಮಾಡುತ್ತಿರುವ ಹಾಗೂ ಎಲ್ಲರ ಬದುಕಿಗೆ ಅನ್ವಯವಾಗುವಂತಹ ಯಶಸ್ಸಿನ ಸೂತ್ರಗಳನ್ನು ಕೃತಿ ರೂಪದಲ್ಲಿ ನೀಡಿರುವ ಅವರನ್ನು ಅಭಿನಂದಿಸಲು ಅತ್ಯಂತ ಸಂತಸವಾಗಿದೆ' ಎಂದರು.

ಕವಯತ್ರಿ ಜಯಶ್ರೀ ರಾಜು ನಿರೂಪಿಸಿದ ಕಾರ್ಯಕ್ರಮ ಆಶಾ ಪಾರ್ವತಿ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಹಿರಿಯ ಲೇಖಕಿ ಶಾಂತಿ ವಾಸು ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಇಂದಿರಾ ಕೃಷ್ಣಪ್ಪ, ಸಿ.ಕೆ. ರಾಮೇಗೌಡ, ದಿಬ್ಬೂರು ಗಿರೀಶ್, ವ.ಚ. ಚನ್ನೇಗೌಡ, ಪಾಸ್ಕಂ ನಟರಾಜ್, ಹನುಮಂತರಾಯ, ಎಸ್.ಎಸ್. ಪಡಶೆಟ್ಟಿ, ಮಹಮದ್ ಮುನಾಫ್, ಬಾಪುಗೌಡ ಪಾಟೀಲ, ಡಾ. ಹೆಚ್.ಎಸ್.ಎಂ. ಪ್ರಕಾಶ್, ನಾ. ಶ್ರೀಧರ, ಬಿ. ಶೃಂಗೇಶ್ವರ ಮತ್ತಿತರರು ಉಪಸ್ಥಿತರಿದ್ದರು.

ಸುಂದರ ಸಂಜೆಯ ಸಮಾರಂಭದಲ್ಲಿ ಹಲವು ಪ್ರಶಸ್ತಿಗಳ ಪ್ರದಾನ



ಕನ್ನಡ ಗೆಳೆಯರ ಬಳಗ ಇತ್ತೀಚೆಗೆ ಕರ್ನಾಟಕ ಕಾರ್ಮಿಕ ಲೋಕ ಪತ್ರಿಕಾ ಬಳಗದ ಸಹಯೋಗದಲ್ಲಿ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸುಂದರ ಸಂಜೆಯ ಸಮಾರಂಭದಲ್ಲಿ ಪ್ರೊ. ಲಕ್ಷ್ಮಣ ತೆಲಗಾವಿ, ಡಾ. ದೇವರಕೊಂಡಾ ರೆಡ್ಡಿ ಮತ್ತು ಡಾ. ಹೆಚ್.ಎಸ್. ಗೋಪಾಲರಾವ್ ಅವರಿಗೆ ಕ್ರಮವಾಗಿ 2020, 2021 ಮತ್ತು 2022ರ ಸಾಲಿನ ನಾಡೋಜ ಡಾ. ಎಂ. ಚಿದಾನಂದಮೂರ್ತಿ ಪ್ರಶಸ್ತಿಗಳನ್ನು, ತುಮಕೂರಿನ ಕನ್ನಡಪರ ಚಿಂತಕಿ, ಹೋರಾಟಗಾರ್ತಿ ಬಾ.ಹ. ರಮಾಕುಮಾರಿ ಅವರಿಗೆ ಬೆಳಗಾವಿಯ ಅರವಿಂದ ಜೋಶಿ ನೆನಪಿನ 'ಕನ್ನಡ ಅರವಿಂದ ಪ್ರಶಸ್ತಿ' ಮತ್ತು ಫಾದರ್ ಸೈಮನ್ ಬಾರ್ತಲೋಮಿಯೋ ಅವರಿಗೆ ಆಲ್ಲ ಚಿರಂಜೀವಿ ನೆನಪಿನ 'ಕನ್ನಡ ಚಿರಂಜೀವಿ' ಪ್ರಶಸ್ತಿಗಳನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ವಿದುಷಿ ಡಾ. ಶ್ಯಾಮಲಾ ಪ್ರಕಾಶ್ ಅವರ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ ಕೃತಿಗೆ 'ಹಾ.ಮಾ.ನಾ.' ಕನ್ನಡ ಜಾಗೃತಿ ಪುಸ್ತಕ ಬಹುಮಾನವನ್ನು, ಶಶಿಧರ ಹಾಲಾಡಿ ಅವರು 'ಚಿತ್ತ ಹರಿದತ್ತ' ಮತ್ತು ಜ್ಞಾನಶ್ರೀ ಅವರ 'ಭವ್ಯ ಭಾರತದ ವೀರರಾಣಿಯರು' ಕೃತಿಗಳಿಗೆ ಸಮಾಧಾನಕರ ಬಹುಮಾನಗಳನ್ನು ಮತ್ತು ರು. ಬಸಪ್ಪ ಅವರ 'ಕನ್ನಡ ಚಳುವಳಿಯ ನೆನಪಿನ ಪುಟಗಳಿಂದ' ಕೃತಿಗೆ ವಿಶೇಷ ಬಹುಮಾನ ನೀಡಿ ಪುರಸ್ಕರಿಸಲಾಯಿತು.

'ಸರ್ಕಾರಿ' ಶಾಲೆ ಹೇಗಿರಬೇಕು ಎಂಬುದಕ್ಕೆ ಉತ್ತಮ ಉದಾಹರಣೆಯಂತಿರುವ ಕೂಡ್ಲಿಗಿ ತಾಲ್ಲೂಕಿನ ನಾಗಲಾಪುರ ಸರ್ಕಾರಿ ಶಾಲೆಗೆ 20,000/– ರೂ.ಗಳ ಆರ್ಥಿಕ ನೆರವು ನೀಡಲಾಯಿತು. 2021–22ರ 10ನೇ ತರಗತಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಕನ್ನಡ ಮಾಧ್ಯಮದ ಎಂ. ವರ್ಷಿಣಿ, ಎ. ಜ್ಯೋತಿ, ಎಸ್. ಮಣಿ, ಹೆಚ್.ಎಸ್. ವಂದನ, ಎನ್. ಕೋಮಲ, ಎಂ. ರಕ್ಷಿತ, ಟಿ.ಪಿ. ಲಕ್ಷ್ಮೀ, ಹೆಚ್.ಎಸ್. ದೀಕ್ಷಿತ್, ಬಿ. ಶೃತಿ ಮತ್ತು ಎಂ. ಶಿವರಾಜು ಹಾಗೂ ಆಂಗ್ಲ ಮಾಧ್ಯಮದಲ್ಲಿ ಓದಿ ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಟಿ. ಕವಿತ, ರಾಜರಾಜೇಶ್ವರಿ ಮಹಾಲ, ಪ್ರೇರಣಾ ಸಾಳುಂಕೆ, ಧನುಶ್ರೀ, ಬಿ.ಎನ್. ಲಿಖಿತ,ಎನ್. ಸುಶ್ಮಿತ, ಜಿ. ಚಿರಾಗ್, ಪಿ. ಉತ್ತಮ್, ಅಹ್ಮದ್ ಯಾಸೀನ್ ಮತ್ತು ಮಝುರ್ ಬಾನಿ ಇವರುಗಳಿಗೆ ನಗದು ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಫಾತಿಮ ಮತ್ತು ನೇತ್ರಾವತಿ ಈ ವಿದ್ಯಾರ್ಥಿನಿಯರಿಗೆ ಆರ್ಥಿಕ ನೆರವನ್ನು ವಿತರಿಸಲಾಯಿತು.

ಎ. ಪ್ರಭಾಕರ್ ನಿರೂಪಿಸಿದ ಕಾರ್ಯಕ್ರಮ ಟಿ.ಎನ್. ನಂಜುಂಡಪ್ಪ ಅವರ ನಾಡಗೀತೆ ಗಾಯನದಿಂದ ಆರಂಭವಾಯಿತು. ಬಾ.ಹ. ಉಪೇಂದ್ರ ಸ್ವಾಗತಿಸಿದರು. ಕನ್ನಡ ಗೆಳೆಯರ ಬಳಗದ ಪ್ರಧಾನ ಸಂಚಾಲಕ ರಾ.ನಂ. ಚಂದ್ರಶೇಖರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಳಗದ ಕಾರ್ಯಕ್ರಮಗಳನ್ನು ಮೆಚ್ಚಿ ಸ್ಕಾಟ್ಲೆಂಟ್ ದೇಶದ ಕನ್ನಡ ಬಳಗ 10,000/– ರೂ.ಗಳ ದೇಣಿಗೆ ನೀಡಿರುವುದನ್ನು ಅವರು ಪ್ರಕಟಿಸಿದರು.

ಹಿರಿಯ ಸಾಹಿತಿ, ನಾಡೋಜ ಡಾ. ಗೊ.ರು. ಚನ್ನಬಸಪ್ಪ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಸಂಶೋಧಕ ಡಾ. ಆರ್. ಶೇಷಶಾಸ್ತ್ರಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಉಪಆಯುಕ್ತ ಡಾ. ಕೆ. ಮುರಳೀಧರ ಮುಖ್ಯ ಅತಿಥಿಗಳಾಗಿದ್ದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಸದಾ ಕನ್ನಡಪರ ಚಿಂತನೆ ಮಾಡುವ ರಾ.ನಂ. ಚಂದ್ರಶೇಖರ ಅವರ ಸಾರಥ್ಯದ ಕನ್ನಡ ಗೆಳೆಯರ ಬಳಗ ಇತರ ಮತ್ತಿತರರು ನೀಡಿದ ಉಪನ್ಯಾಸಗಳು ಯಾವುದೇ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣಗಳಿಗೆ ಕಡಿಮೆ ಇಲ್ಲದಂತಿದ್ದವು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮ. ಚಂದ್ರಶೇಖರ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಹೆಚ್.ಎನ್. ರಮೇಶ್ ಬಾಬು, ಬಿ.ವಿ. ರವಿಕುಮಾರ್, ಆರ್. ರಾಮಮೂರ್ತಿ, ಡಾ. ಸ್ಮಿತಾರೆಡ್ಡಿ, ಸಂಜೀವರತ್ನೆ, ಕೆ. ಜಯಚಂದ್ರು, ಡಾ. ರುದ್ರೇಶ್ ಅದರಂಗಿ, ಬಿ.ಎಸ್. ಜಯಪ್ರಕಾಶ್ ನಾರಾಯಣ, ವ.ಚ. ಚನ್ನೇಗೌಡ, ರಫಾಯಿಲ್ ರಾಜ್, ನಾ. ಶ್ರೀಧರ್, ಹನುಮಂತಯ್ಯ, ಗಾಯತ್ರಿ ರಾ.ನಂ. ಚಂದ್ರಶೇಖರ, ಜಲಜಾಮ ಚಂದ್ರಶೇಖರ ಮತ್ತಿತರರು ಉಪಸ್ಥಿತರಿದ್ದರು. –ರು. ಬಸಪ್ಪ

ಗಾಂಧೀಜಿ, ಅರವಿಂದರು ಮತ್ತು ಠಾಗೋರರಿಂದ ಸ್ಫೂರ್ತಿ ಪಡೆದಿದ್ದವರು ಬೇಂದ್ರೆ

ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಕಾರ್ಯಕ್ರಮದಲ್ಲಿ ನಾಡೋಜ ಡಾ. ಜಿ. ಕೃಷ್ಣಪ್ಪ



'1992ರಲ್ಲಿ ಬ್ರಿಟೀಷರು ಸ್ವಾತಂತ್ರ್ಯ ಕಲಿಗಳ ಮೇಲೆ ಗೋಲಿಬಾರ್ ಮಾಡಿದಾಗ ಅದನ್ನು ಖಂಡಿಸಿ ಹಾಗೂ ಸತ್ಯಾಗ್ರಹಿಗಳನ್ನು ಉತ್ತೇಜಿಸಿ ಕವನಗಳನ್ನು ಬರೆದವರು ಬೇಂದ್ರೆ 1930ರಲ್ಲಿ ಅವರು ನರಬಲಿ ಕವನ ರಚಿಸಿ ತಮ್ಮ ದೇಶ ಪ್ರೇಮ ಮೆರೆದರು. ಅಂದಿನ ಕಾಲಘಟ್ಟದಲ್ಲಿ ಇಂತಹ ತೀವ್ರ ಕವನಗಳನ್ನು ಇನ್ಯಾವ ಕವಿಯೂ ಬರೆಯಲಿಲ್ಲ. ಈ ಕವನ ಬರೆದಾಗ ಅವರನ್ನು ಬ್ರಿಟಿಷ್ ಸರ್ಕಾರ ಹಿಂಡಲಗಾ ಜೈಲಿಗೆ ದೂಡಿತು. ಕೆಲವು ತಿಂಗಳುಗಳ ಕಾಲ ಗೃಹಬಂಧನದಲ್ಲಿಯೂ ಇರಿಸಿತ್ತು. ಬಾಳು ಬಾಳೆಲೇ ಜಗದಲಿ ಪ್ರೇಮದಿಂದ ಬಾಳು ಇದೇ ಗಾಂಧೀಜಿಯವರ ತತ್ತ್ವವಾಗಿತ್ತು. ಈ ತತ್ತ್ವವೇ ಬೇಂದ್ರೆ ಅವರ ಬಾಳಿನ ಮಂತ್ರವಾಗಿತ್ತು. ಅವರ ಅನೇಕ ಕವನಗಳು ದಮನಿರತ ಪರವಾಗಿದ್ದವು. ಬಡತನದ ಸಸಿಯ ಬೆಳೆಯಬೇಡಿ ಎನ್ನುವಂತಹ ಕವನಗಳನ್ನು ಅವರು ಬರೆದಿದ್ದಾರೆ. ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ–ಈ ಕವನ ಜಗತ್ತಿನ ಸರ್ವ ಶ್ರೇಷ್ಠ ಕವನಗಳಲ್ಲೊಂದು. ಗಾಂಧೀಜಿಯವರು, ಅರವಿಂದ ಮಹರ್ಷಿಗಳು ಮತ್ತು ವಿಶ್ವ ಕವಿ ರವೀಂದ್ರನಾಥ ಠಾಗೋರರಿಂದ ಸ್ಫೂರ್ತಿ ಪಡೆದು ಅನೇಕ ಕವಿತೆಗಳನ್ನು ಬರೆದಿದ್ದಾರೆ' ಎಂದು ಇತ್ತೀಚೆಗೆ ತಾನೇ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಗೌರವಕ್ಕೆ ಭಾಜನರಾಗಿರುವ ಹಾಗೂ ಬೇಂದ್ರೆ ಕೃಷ್ಣಪ್ಪ ಎಂದೇ ಖ್ಯಾತರಾಗಿರುವ ಹಿರಿಯ ವಿದ್ವಾಂಸರಾದ ಡಾ. ಜಿ. ಕೃಷ್ಣಪ್ಪ ತಿಳಿಸಿದರು.

ಡಿಸೆಂಬರ್ 24ರಂದು ಗಾಂಧಿ ಭವನದ ಶ್ರೀ ಮೈಲಾರ ಮಹಾದೇವ ಸಭಾಂಗಣದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ನಿಧಿ, ಶೇಷಾದ್ರಿಪುರಂ ಸಂಜೆ ಕಾಲೇಜು ಮತ್ತು ವೂಡೇ ಪ್ರತಿಷ್ಠಾನ – ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ 'ಬ್ರಹ್ಮ ಸಮಾಜದ ಮುಖಂಡರು ಹಾಗೂ ಗಾಂಧೀವಾದಿ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಡಾ. ಜಿ. ಕೃಷ್ಣಪ್ಪ 'ಬೇಂದ್ರೆ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಮತ್ತು ಗಾಂಧೀಜಿ' ಕುರಿತು ವಿದ್ವತ್ಪೂರ್ಣ ಉಪನ್ಯಾಸ ನೀಡಿದರು.

ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಇಡೀ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಸಂಜೆ ಕಾಲೇಜಿನ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ದೀಪಿಕಾ ನಿರೂಪಿಸಿದರು. ನಾಡಗೀತೆಯ ನಂತರ ಅನುಷಾ ನಾಡಿಗೇರ 'ಸತ್ಯಮೇವ ಜಯತೆ' ಗೀತೆ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ಪಂದನ ಸ್ವಾಗತ ಭಾಷಣ ಮಾಡಿದರು.

ಆಶಯ ನುಡಿಗಳನ್ನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ 'ನಮ್ಮ ತಾತನವರಾಗಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಬೆಂಗಳೂರು ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಅವರ ಹೆಸರಿನಲ್ಲಿ 37 ವರ್ಷಗಳಿಂದ ಈ ಕಾರ್ಯಕ್ರಮ ನಡೆದುಕೊಂಡು ಬಂದಿದೆ' ಎಂದು ಹೇಳಿದರು.

ಸಮಾರಂಭದಲ್ಲಿ ಡಬ್ಲ್ಯೂ.ಹೆಚ್. ಹನುಮಂತಪ್ಪ ಅವರು ರಚಿಸಿದ್ದ 'ಬ್ರಹ್ಮ ಧರ್ಮ–ಗಾಯತ್ರಿ' ಕಿರು ಪುಸ್ತಕವನ್ನು ಲೋಕಾರ್ಪಣೆ ಮಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು 'ಬ್ರಹ್ಮ ತತ್ತ್ವ ಎಂದರೆ ತಾನೇ ತಾನಾಗಿ ಎತ್ತರಕ್ಕೆ ಹೋಗುವುದು. ಈ ವಿಷಯ ಕುರಿತು ಹನುಮಂತಪ್ಪನವರು ಬಹಳ ಸರಳವಾಗಿ ಬರೆದಿದ್ದಾರೆ. ಸಾಧನೆ ಮಾಡುವವರಿಗೆ ಈ ಪುಸ್ತಕ ಒಂದು ಕೈಪಿಡಿ' ಎಂದು ಅಭಿಪ್ರಾಯಪಟ್ಟರು.

ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ನೋಟಕಾರ್ ಸತೀಶ್, ದತ್ತಿದಾನಿಗಳ ಪ್ರತಿನಿಧಿಯಾಗಿ ವೂಡೇ ಪ್ರತಿಷ್ಠಾನದ ಡಬ್ಲ್ಯೂ.ಡಿ. ಅಶೋಕ್, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಮತ್ತಿತರರು ಉಪಸ್ಥಿತರಿದ್ದರು.

ವರದಿ : ರು. ಬಸಪ್ಪ



ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಸುವರ್ಣ ಮಹೋತ್ಸವ ಮತ್ತು ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವನ್ನು ಖ್ಯಾತ ಸಾಹಿತಿಗಳಾದ ನಾಡೋಜ ಡಾ. ಹಂಪ ನಾಗರಾಜಯ್ಯ, ನಾಡೋಜ ಡಾ. ಕಮಲಾ ಹಂಪನಾ ದಂಪತಿಗಳು ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲರಾದ ಪ್ರೊ. ಮಂಜುನಾಥ್, ಆರ್.ವಿ. ಸಂಸ್ಥೆಯ ಧರ್ಮದರ್ಶಿಗಳಾದ ಹೆಚ್. ಹೆಂಜಾರಪ್ಪ, ಹೆಚ್.ಕೆ. ನಟರಾಜ್, ಕೆ. ಕೃಷ್ಣಸ್ವಾಮಿ, ಬಿ.ಎ. ಅನಂತರಾಮ್, ಎನ್.ಪಿ. ಕಾರ್ತಿಕ್ ಚಿತ್ರದಲ್ಲಿದ್ದಾರೆ.

ವಿಜಯ ಕರ್ನಾಟಕ
ಗುರುವಾರ, 19 ಜನವರಿ 2023

ಬಾಲಗಂಗಾಧರನಾಥ ಸ್ವಾಮೀಜಿ ಜಯಂತ್ಯುತ್ಸವ

ವಿಕ ಸುದ್ದಿಲೋಕ ವಿಜಯನಗರ

ವಿ. ಸೋಮಣ್ಣ ಪ್ರತಿಷ್ಠಾನವು ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ಬಿಜಿಎಸ್ ಆಟದ ಮೈದಾನದಲ್ಲಿ ಪದ್ಮಭೂಷಣ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇ ಜಯಂತ್ಯುತ್ಸವ ಮತ್ತು ಸನ್ಮಾನ ಸಮಾರಂಭವನ್ನು ಆಯೋಜಿಸಿತ್ತು.

ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ವಸತಿ ಸಚಿವ ವಿ. ಸೋಮಣ್ಣ, ಸಾಹಿತಿ ಡಾ. ದೊಡ್ಡರಂಗೇಗೌಡ, ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ವಿ. ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷರಾದ ಶೈಲಜಾ ಸೋಮಣ್ಣ, ಪಾಲನೇತ್ರ ಅವರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿರವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ತಂದೆ-ಮಗನ ಸಂಬಂಧದಂತೆ: ಸಚಿವ ವಿ. ಸೋಮಣ್ಣ ಮಾತನಾಡಿ, '' ಆದಿಚುಂಚನಗಿರಿ ಮಠದ ಪರಮಭಕ್ತ ನಾನು. ಸ್ವಾಮೀಜಿ ಮತ್ತು ನನ್ನ ನಡುವಿನ ಸಂಬಂಧ ತಂದೆ, ಮಗನ ರೀತಿಯಿತ್ತು. ಗೋವಿಂದರಾಜನಗರ, ವಿಜಯನಗರ ಭಾಗದಲ್ಲಿ ಶಿಕ್ಷಣ ಕ್ಷೇತ್ರ ಅಭಿವೃದ್ಧಿಪಡಿಸಲು ಶ್ರೀಗಳು ಕಾರಣ,'' ಎಂದರು.

ಸಾಹಿತಿ ದೊಡ್ಡರಂಗೇಗೌಡ ಮಾತನಾಡಿ, ''ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಸಮಾಜಸೇವಾ ಕಾರ್ಯ ಅಪಾರ. ಬಡಕುಟುಂಬದಲ್ಲಿ ಜನಿಸಿದ ಶ್ರೀಗಳು ಸಮಾಜಸೇವೆ ಮಾಡುವುದರ ಮೂಲಕವೇ ಎಲ್ಲರಿಗೂ ಪ್ರೀತಿಪಾತ್ರರಾದರು,'' ಎಂದರು.

ಆದಿಚುಂಚನಗಿರಿ ಮಠದ ವಿಜಯನಗರ ಶಾಖೆಯ ಶ್ರೀ ಸೌಮ್ಯನಾಥ ಸ್ವಾಮೀಜಿ, ಎಡೆತೂರು ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ದರಾಮ ಸ್ವಾಮೀಜಿ, ಪ್ರತಿಷ್ಠಾನದ ಡಾ. ನವೀನ್ ಸೋಮಣ್ಣ, ದಿವ್ಯಾ ಅವಿನಾಶ್, ಮಂಡಲ ಅಧ್ಯಕ್ಷರಾದ ವಿಶ್ವನಾಥಗೌಡ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷ ಡಾ. ಎಂ.ಜಿ. ನಾಗರಾಜ್, ಗಾಯಕ ಡಾ. ಬಾನಂದೂರು ಕೆಂಪಯ್ಯ, ಚಲನಚಿತ್ರ ಸಾಹಿತಿ ಸಿ.ವಿ. ಶಿವಶಂಕರ್, ಸುಮಂಗಲಿ ಸೇವಾ ಆಶ್ರಮದ ಸಂಸ್ಥಾಪಕರಾದ ಡಾ. ಎಸ್.ಜಿ. ಸುಶೀಲಮ್ಮ ಅವರನ್ನು ಗೌರವಿಸಲಾಯಿತು.



ಜಯಂತ್ಯುತ್ಸವದ ಅಂಗವಾಗಿ ಬಾಲಗಂಗಾಧರನಾಥ ಸ್ವಾಮೀಜಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು.

ಸಂಯುಕ್ತ ಕರ್ನಾಟಕ
ಗುರುವಾರ, 19, ಜನವರಿ, 2023
ಬೆಂಗಳೂರು I BENGALURU

ಶ್ರೀಗಳ 78ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ದೊಡ್ಡರಂಗಗೌಡರ ಅಭಿಮತ

ಬಾಲಗಂಗಾಧರನಾಥ ಶ್ರೀಗಳು ಆಧುನಿಕ ಯೋಗಿ

ಬೆಂಗಳೂರು: ಅನ್ನ ಆರೋಗ್ಯ ಅಕ್ಷರಗಳೆಂಬ ತ್ರಿವಿಧ ದಾಸೋಹದ ಮೂಲಕ ಬಡ ಭಕ್ತರ ಬಾಳಿಗೆ ಆಸರೆಯಾಗಿದ್ದ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರು ಆಧುನಿಕ ಕಾಲದ ಯೋಗಯೋಗಿ ಎಂದು ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡ ಅವರು ಹೇಳಿದರು.

ವಿಜಯನಗರದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀಮಠದ ಅಭ್ಯುದಯಕ್ಕಾಗಿ ಅಂದು ಸ್ವಾಮೀಜಿಯವರು ಸ್ವತಃ ಜೋಳಿಗೆ ಹಿಡಿದು ಭಕ್ತರ ಬಳಿಗೆ ಬಂದವರು. ಸ್ವಾಮೀಜಿಯವರ ಕರೆಗೆ ಓಗೊಟ್ಟ ಭಕ್ತರು ಎತ್ತಿನ ಬಂಡಿಯಲ್ಲಿ ಶ್ರೀಮಠಕ್ಕೆ ಸಾಕೆನ್ನಿಸುವಷ್ಟು ಧವಸ-ಧಾನ್ಯ ತಂದು ಸುರಿದ ಪರಿಣಾಮ ಮಠವು ಸಂಪದ್ಭರಿತವಾಯಿತು ಎಂದು ಸ್ಮರಿಸಿಕೊಂಡರು.

ಲೋಕ ಕಲ್ಯಾಣಕ್ಕಾಗಿ ಶ್ರೀಗಳು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಭಕ್ತರ ಪಾಲಿಗೆ ದೇವರೆನ್ನಿಸಿದ್ದ ಬಾಲಗಂಗಾಧರನಾಥ ಸ್ವಾಮೀಜಿಯಂಥವರು ಸಾವಿರಕ್ಕೊಬ್ಬರಾಗಿದ್ದು, ನಾನು ಕೂಡ ಅವರ ಮಾನಸ ಪುತ್ರ ಎಂದು ನುಡಿ ನಮನ ಸಲ್ಲಿಸಿದರು.



ಡಾ.ಬಾಲಗಂಗಾಧರನಾಥ ಶ್ರೀಗಳ 78ನೇ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡರು ಉದ್ಘಾಟಿಸಿದರು. ಸಚಿವ ವಿ.ಸೋಮಣ್ಣ, ತೋಂಟದ ಶ್ರೀ ಸಿದ್ದರಾಮ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ಮೇಲ್ಮನೆ ಸದಸ್ಯ ಅ.ದೇವೇಗೌಡ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಇದ್ದರು.

ಇದಕ್ಕೂ ಮುನ್ನ ಮಾತನಾಡಿದ ವಸತಿ ಸಚಿವ ವಿ.ಸೋಮಣ್ಣ ಅವರು, ಸ್ವಾಮೀಜಿಯವರು ನಮ್ಮಂಥ ರಾಜಕಾರಣಿಗಳಿಗೆ ಸಂಸ್ಕೃತಿ ಮತ್ತು ಸಂಸ್ಕಾರ ತುಂಬಿದವರು. ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಮತ್ತು ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಕೃಪಾಶೀರ್ವಾದದಿಂದ ನಾನು ರಾಜಕೀಯದಲ್ಲಿ ಈ ಮಟ್ಟಕ್ಕೇರಿದ್ದು, ಇಂದು ನಮ್ಮೊಂದಿಗಿಲ್ಲದಿದ್ದರೂ ನಮ್ಮ ಹೃದಯದಲ್ಲಿ ಸದಾ ತುಂಬಿಕೊಂಡಿದ್ದಾರೆ. ಲಕ್ಷಾಂತರ ಮಕ್ಕಳಿಗೆ ಈ ಇಬ್ಬರೂ ಮಹನೀಯರು ವಿದ್ಯೆ ದಾನ ಮಾಡಿದ್ದಾರೆ ಎಂದು ಹೇಳಿದರು.

ಎಂ.ಸಿ.ಲೇಔಟ್‌ನ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದ ಈ ಜಾಗ ಈ ಮುನ್ನ ಬೇರೆ ಉದ್ದೇಶಕ್ಕೆಂದು ಬಳಸಲು ನಿರ್ಧರಿಸಲಾಗಿತ್ತು. ಆದರೆ, ಇಲ್ಲಿನ ಮಕ್ಕಳಿಗೆ ಆಟದ ಕೇಂದ್ರವಾಗಬೇಕೆಂದು ಅಂದು ಶ್ರೀಗಳು ಸೂಚಿಸಿದ ಕಾರಣ ಇಲ್ಲಿ ಸಾರ್ವಜನಿಕ ಕ್ರೀಡಾಂಗಣ ಮೈದಳೆಯುವಂತೆ ಮಾಡಿದೆ ಎಂದು ಅವರು ತಿಳಿಸಿದರು.

ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಐವರು ಮಹನೀಯರನ್ನು ಇದೇ ಸಂದರ್ಭದಲ್ಲಿ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಶಿಕ್ಷಣ ತಜ್ಞ ಪ್ರೊ.ಡೇ ಪಿ.ಕೃಷ್ಣ, ಚಲನಚಿತ್ರ ರಂಗದ ನಟ, ನಿರ್ಮಾಪಕ ನಿರ್ದೇಶಕ ಸಿ.ವಿ.ಶಿವಶಂಕರ್, ಇತಿಹಾಸ ತಜ್ಞ ಡಾ.ಎಂ.ಜಿ.ನಾಗರಾಜ್, ಜಾನಪದ ವಿದ್ವಾಂಸ ಡಾ.ಬಾನಂದೂರು ಕೆಂಪಯ್ಯ, ಸುಮಂಗಲಿ ಸೇವಾಶ್ರಮದ ಡಾ.ಎಸ್.ಜಿ.ಸುಶೀಲಮ್ಮ ಅವರನ್ನು ಡಾ.ದೊಡ್ಡರಂಗೇಗೌಡ ಅವರು ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ತೋಂಟದ ಶ್ರೀ ಸಿದ್ಧರಾಮ ಸ್ವಾಮೀಜಿ ಅವರು ಸಾನಿಧ್ಯ ವಹಿಸಿದ್ದರು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಮೇಲ್ಮನೆ ಸದಸ್ಯ ಅ.ದೇವೇಗೌಡ ಸೇರಿ ಮತ್ತಿತರರು ಉಪಸ್ಥಿತರಿದ್ದರು.

ಎಂ.ಸಿ.ಲೇಔಟ್‌ನ ಅಗ್ರಹಾರ ದಾಸರಹಳ್ಳಿಯಲ್ಲಿ 150 ಕೋಟಿ ರೂ.ಗಳ ವೆಚ್ಚದಲ್ಲಿ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಲೋಕಾರ್ಪಣೆಗೆ ಸಿದ್ಧಗೊಂಡಿದ್ದು, ಫೆಬ್ರವರಿ 29ರಂದು ಉದ್ಘಾಟನೆಯಾಗಲಿದೆ. ವಿಕ್ಟೋರಿಯಾ, ಕೆ.ಸಿ.ಜನರಲ್ ಆಸ್ಪತ್ರೆಗಳ ಮಾದರಿಯಲ್ಲಿ ಅತ್ಯಾಧುನಿಕ ಸೇವಾ ಸೌಲಭ್ಯಗಳಿರುವ ಈ ಬೃಹತ್ ಆಸ್ಪತ್ರೆ ಕಟ್ಟಡಕ್ಕೆ ಡಾ.ಬಾಲಗಂಗಾಧರನಾಥ ಸಂಸ್ಮರಣಾ ಭವನವೆಂದು ನಾಮಕರಣ ಮಾಡಲಾಗುವುದು ಎಂದು ಸಚಿವ ವಿ.ಸೋಮಣ್ಣ ಇದೇ ಸಂದರ್ಭದಲ್ಲಿ ತಿಳಿಸಿದರು.

ಪ್ರಜಾವಾಣಿ
ಗುರುವಾರ ● ಜನವರಿ 19, 2023

ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಅಭಿಮತ

'ಗುರುವಿಗಿಂತ ಶ್ರೇಷ್ಠ ಇನ್ನೊಬ್ಬರಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರಾಕಾರ, ನಿರ್ಗುಣ ಸ್ವರೂಪಿಯಾದ ಭಗವಂತನನ್ನು ನೋಡಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಈ ಜಗತ್ತಿನಲ್ಲಿ ಗುರುವಿಗಿಂತ ಶ್ರೇಷ್ಠರು ಇನ್ನೊಬ್ಬರಿಲ್ಲ' ಎಂದು ಗದಗದ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ, ಹೇಳಿದರು.

ವಿ. ಸೋಮಣ್ಣ ಪ್ರತಿಷ್ಠಾನ ನಗರದಲ್ಲಿ ಬುಧವಾರ ಹಮ್ಮಿಕೊಂಡ ಬಾಲಗಂಗಾಧರನಾಥ ಸ್ವಾಮೀಜಿ ಅವರ 78ನೇ ಜಯಂತ್ಯುತ್ಸವದಲ್ಲಿ ಸಾನ್ನಿಧ್ಯ ವಹಿಸಿ, ಮಾತನಾಡಿದರು.

'ಭಾರತೀಯ ಪರಂಪರೆಯಲ್ಲಿ ಗುರುವಿಗೆ ವಿಶೇಷ ಸ್ಥಾನವಿದೆ. ಭಗವಂತನ ಸಾಕಾರರೂಪ ಗುರುವಾಗಿದ್ದಾನೆ. ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಇದಕ್ಕೆ ಉತ್ತಮ ಉದಾಹರಣೆ. ಅವರ ಆದರ್ಶ ಬದುಕು ನಮ್ಮ ಕಣ್ಣ ಮುಂದೆ ಸದಾ ಇರಬೇಕು'. ಎಂದು ಹೇಳಿದರು.

'ಪ್ರೀತಿಗಿಂತ ಮಿಗಿಲಾದದ್ದು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಪ್ರೀತಿಯಿಂದ ಎಲ್ಲರ ಹೃದಯವನ್ನೂ ಗೆಲ್ಲಲು ಸಾಧ್ಯ ಎನ್ನುವುದನ್ನು ಬಾಲಗಂಗಾಧರನಾಥ ಸ್ವಾಮೀಜಿ ತೋರಿಸಿಕೊಟ್ಟು ಹೋಗಿದ್ದಾರೆ' ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ (ಎಡದಿಂದ) ವಿ. ಸೋಮಣ್ಣ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಪಾಲನೇತ್ರ, ದೊಡ್ಡರಂಗೇಗೌಡ, ವಿ. ಸೋಮಣ್ಣ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ. ಸೋಮಣ್ಣ, ಎಸ್.ಜಿ. ಸುಶೀಲಮ್ಮ ಮತ್ತು ತೋಂಟದ ಸಿದ್ಧರಾಮ ಸ್ವಾಮೀಜಿ ಅವರು ಬಾಲಗಂಗಾಧರನಾಥ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

ವಸತಿ ಸಚಿವರೂ ಆಗಿರುವ ಸ್ಥಳೀಯ ಶಾಸಕ ವಿ. ಸೋಮಣ್ಣ, 'ಬಾಲಗಂಗಾಧರನಾಥ ಸ್ವಾಮೀಜಿ ದೂರದೃಷ್ಟಿ ಹೊಂದಿದ್ದರು. 1996ರಲ್ಲಿಯೇ ವಿಜಯನಗರದಲ್ಲಿ ಶ್ರೀಕಾಲಭೈರವೇಶ್ವರಸ್ವಾಮಿ ಆಯುರ್ವೇದ ಆಸ್ಪತ್ರೆ ಮತ್ತು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸಿದ್ದರು. ದಾಸರಹಳ್ಳಿಯಲ್ಲಿ 300 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಅವರೇ ಪ್ರೇರಣೆ ಆಗಿದ್ದಾರೆ. ಆದ್ದರಿಂದ ಆ ಆಸ್ಪತ್ರೆಗೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೆಸರನ್ನು ನಾಮಕರಣ ಮಾಡಲಾಗುವುದು' ಎಂದರು.

ಸಾಹಿತಿ ದೊಡ್ಡರಂಗೇಗೌಡ, 'ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಬಾಲಗಂಗಾಧರನಾಥ ಸ್ವಾಮೀಜಿ, ತಮ್ಮ ಅಸಾಮಾನ್ಯ ಕಾಯಕಗಳಿಂದ ಮಹಾಪುರುಷರಾದರು. ಭೈರವನ ಭಕ್ತರಿಗಷ್ಟೇ ಸೀಮಿತವಾಗಿದ್ದ ಆದಿಚುಂಚನಗಿರಿ ಕ್ಷೇತ್ರವನ್ನು, ಕೇವಲ ಮೂರೂವರೆ ದಶಕದಲ್ಲಿ ಮಹಾಕ್ಷೇತ್ರವನ್ನಾಗಿಸಿದ್ದು ವಿಶೇಷ' ಎಂದರು.

ಆದಿಚುಂಚನಗಿರಿ ಸಂಸ್ಥಾನ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಉಪಸ್ಥಿತರಿದ್ದರು.

ಐವರಿಗೆ ಗೌರವ ಸಮರ್ಪಣೆ

ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐದು ಮಂದಿಯನ್ನು ಗೌರವಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷ ಎಂ.ಜಿ. ನಾಗರಾಜ್, ಚಲನಚಿತ್ರ ಸಾಹಿತಿ ಸಿ.ವಿ. ಶಿವಶಂಕರ್, ಜಾನಪದ ಕಲಾವಿದ ಬಾನಂದೂರು ಕೆಂಪಯ್ಯ ಹಾಗೂ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ ಅವರಿಗೆ ಗೌರವ ಸಮರ್ಪಿಸಲಾಯಿತು.

ವಸತಿ ಸಚಿವ ವಿ. ಸೋಮಣ್ಣ ಹೇಳಿಕೆ ಬಾಲಗಂಗಾಧರನಾಥ ಶ್ರೀಗಳ ಜಯಂತಿ

ಶೈಕ್ಷಣಿಕ ಅಭಿವೃದ್ಧಿಗೆ ಸ್ವಾಮೀಜಿ ಕಾರಣಕರ್ತರು

ಗೋವಿಂದರಾಜನಗರ: ವಿಜಯನಗರ ಹಾಗೂ, ಗೋವಿಂದರಾಜನಗಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕಾರಣಕರ್ತರು ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದ್ದಾರೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಬಿಜಿಎಸ್ ಆಟದ ಮೈದಾನದಲ್ಲಿ ಆಯೋಜಿಸಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ 78ನೇ ಜಯಂತಿ ಆಚರಣೆ ಸಮಾರಂಭದಲ್ಲಿ ಮಾತನಾಡಿದರು.

ಪಾಳುಬಿದ್ದ ಜಾಗ ಮತ್ತು ಭೂಕಬಳಿಕೆದಾರರ ವಿರುದ್ಧ ಸತತ ಹೋರಾಟ ನಡೆಸಿ ನ್ಯಾಯಲಯದ ತೀರ್ಮಾನ ನಮ್ಮ ಪರವಾದ ಕಾರಣ ಸುಸಜ್ಜಿತ ಕ್ರೀಡಾಂಗಣ ಅಭಿವೃದ್ಧಿ ಮಾಡಲಾಗಿದೆ. ದಾಸರಹಳ್ಳಿಯಲ್ಲಿ ನಿರ್ಮಿಸಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಬಾಲಗಂಗಾಧರನಾಥ ಸ್ವಾಮೀಜಿ ಪ್ರೇರಣೆಯಾಗಿದ್ದಾರೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ ಪರಿಗಣಿಸಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷ ಡಾ. ಎಂ.ಜಿ. ನಾಗರಾಜ್, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಬಾನಂದೂರು ಕೆಂಪಯ್ಯ, ಸಿನಿಮಾ ಗೀತರಚನೆಕಾರ ಸಿ.ವಿ. ಶಿವಶಂಕರ್, ಸುಮಂಗಲಿ ಸೇವಾಶ್ರಮದ ಡಾ. ಸುಶೀಲಮ್ಮ ಅವರನ್ನು ಸನ್ಮಾನಿಸಲಾಯಿತು.

ವಿ. ಸೋಮಣ್ಣ ಪ್ರತಿಷ್ಠಾನದ ಉಪಾಧ್ಯಕ್ಷ ಡಾ. ನವೀನ್ ಸೋಮಣ್ಣ, ಬಿಜೆಪಿ ಮಂಡಲದ ಅಧ್ಯಕ್ಷ ವಿಶ್ವನಾಥ ಗೌಡ, ಪಾಲಿಕೆ ಮಾಜಿ ಸದಸ್ಯರಾದ ಕೆ. ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ದಾಸೇಗೌಡ, ಗಂಗಭೈರಯ್ಯ ಇತರರಿದ್ದರು.

ವಿಜಯವಾಣಿ



ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಜಯಂತಿ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಕರಾದ ಡಾ: ವೊಡೇ ಪಿ. ಕೃಷ್ಣ, ಡಾ.ಎಂ.ಜಿ. ನಾಗರಾಜ್, ಡಾ.ಬಾನಂದೂರು ಕೆಂಪಯ್ಯ, ಸಿ.ವಿ. ಶಿವಶಂಕರ್, ಡಾ.ಎಸ್.ಜಿ. ಸುಶೀಲಮ್ಮ ಅವರನ್ನು ಸನ್ಮಾನಿಸಲಾಯಿತು. ವಿ. ಸೋಮಣ್ಣ, ಡಾ.ನವೀನ್ ಸೋಮಣ್ಣ, ವಿಶ್ವನಾಥ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ ಗುರುವಾರ 19.1.2023



ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ಬಿಜಿಎಸ್ ಆಟದ ಮೈದಾನದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ನಡೆದ ದಿವಂಗತ ಬಾಲಗಂಗಾಧರನಾಥ ಸ್ವಾಮೀಜಿ ಅವರ 78ನೇ ಜಯಂತ್ಯುತ್ಸವದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ। ವೂಡೇ ಕೃಷ್ಣ ಸೇರಿದಂತೆ ಇತರೆ ಗಣ್ಯರನ್ನು ವಸತಿ ಸಚಿವ ವಿ.ಸೋಮಣ್ಣ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳಾದ ಶೈಲಜಾ ಸೋಮಣ್ಣ, ಡಾ। ನವೀನ್ ಸೋಮಣ್ಣ, ದಿವ್ಯಾ ಅವಿನಾಶ್, ಬಿಜೆಪಿ ಮುಖಂಡರಾದ ವಿಶ್ವನಾಥಗೌಡ, ರವೀಂದ್ರ, ಗಂಗಭೈರಯ್ಯ, ರಾಮಪ್ಪ, ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ದಾಸೇಗೌಡ, ರೂಪಾ ಲಿಂಗೇಶ್ವರ್ ಪಾಲ್ಗೊಂಡಿದ್ದರು.

ಬಾಲಗಂಗಾಧರನಾಥ ಸ್ವಾಮೀಜಿ ಜಯಂತ್ಯುತ್ಸವದಲ್ಲಿ ಸಚಿವ

ಶ್ರೀಗಳ ಕೃಪಾಶೀರ್ವಾದದಿಂದ ರಾಜಕೀಯ



ಬೆಂಗಳೂರು: ಶ್ರೀಗಳ ಕೃಪಾಶೀರ್ವಾದದಿಂದ ರಾಜಕೀಯ ರಂಗದಲ್ಲಿ ನನಗೆ ಶಕ್ತಿ ಬಂದಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಬಿಜಿಎಸ್ ಆಟದ ಮೈದಾನದಲ್ಲಿ ಪದ್ಮಭೂಷಣ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಾಲಗಂಗಾಧರನಾಥ ಸ್ವಾಮೀಜಿಯವರು 78ನೇ ಜಯಂತ್ಯುತ್ಸವ ಶುಭ ದಿನವಾಗಿದೆ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹಸ್ತ ನಮಗೆ ತಂದೆ, ಮಗನ ಸಂಬಂಧವಂತೆ ಇತ್ತು. ಶ್ರೀಗಳ ಕೃಪಾ ಆಶೀರ್ವಾದದಿಂದ ರಾಜಕೀಯ ರಂಗದಲ್ಲಿ ನನಗೆ ಶಕ್ತಿ ಬಂದಿದೆ. ಗೋವಿಂದರಾಜನಗರ, ವಿಜಯನಗರ ಭಾಗದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಪಡಿಸಲು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಕಾರಣವಾಗಿದೆ. ಆದಿಚುಂಚನಗಿರಿ ಮತ್ತು ಸಿದ್ಧಗಂಗಾ ಮಠ ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ನೀಡಿ, ವಿದ್ಯಾವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗಿದೆ ಎಂದರು.

ಹಾಸನದಲ್ಲಿ 300 ಹಾಸಿಗೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಬಾಲಗಂಗಾಧರನಾಥ ಸ್ವಾಮೀಜಿ ಅವರು ಪ್ರೇರಣೆಯಾಗಿದ್ದಾರೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಬಾಲಗಂಗಾಧರನಾಥ ಸ್ವಾಮೀಜಿ ಹೆಸರು ನಾಮಕರಣ ಮಾಡಲಾಗುವುದು ಎಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕರ್ನಾಟಕ ಇತಿಹಾಸ ಅಕಾಡೆಮಿಯ ಉಪಾಧ್ಯಕ್ಷ ಡಾ.ಎಂ.ಜಿ.ನಾಗರಾಜ್, ಕರ್ನಾಟಕ ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಬಾನಂದೂರು ಕೆಂಪಯ್ಯ, ಚಲನಚಿತ್ರ ನಟಿ [illegible], ಡಾ. ಎಸ್.ಜಿ. ಸುಶೀಲಮ್ಮ ಗೌರವ ಸಮರ್ಪಣೆ ಮಾಡಲಾಯಿತು.

ಎಡೆಯೂರು ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ದರಾಮ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಅ.ದೇವೇಗೌಡ, ಶ್ರೀ ವಿ. ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷೆ ಶೈಲಜಾ ಸೋಮಣ್ಣ ಇದ್ದರು.

> ಮನುಷ್ಯನಿಗೆ ಮೂಲಭೂತವಾಗಿ ಬೇಕಾದ ಆರೋಗ್ಯ, ಶಿಕ್ಷಣ ಮತ್ತು ಅನ್ನದಾಸೋಹವನ್ನು ಶ್ರೀಗಳು ನೆರವೇರಿಸಿಕೊಂಡು ಬಂದಿದ್ದರು. ಈ ನಿಟ್ಟಿನಲ್ಲಿ ನಾಡಿನಾದ್ಯಂತ ವಿದ್ಯಾಕೇಂದ್ರಗಳನ್ನು ಶ್ರೀಗಳು ಸ್ಥಾಪಿಸಿದ್ದಾರೆ.
>
> ■ ಶ್ರೀ ಸೌಮ್ಯನಾಥ ಸ್ವಾಮೀಜಿ, ವಿಜಯನಗರ ಶಾಖಾ ಮಠ

> ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಸಮಾಜಸೇವಾ ಕಾರ್ಯ ಅಪಾರ. ಬಡಕುಟುಂಬದಲ್ಲಿ ಜನಿಸಿದ ಶ್ರೀಗಳು ಸಮಾಜಸೇವೆ ಮಾಡುವುದರ ಮೂಲಕವೇ ಎಲ್ಲರಿಗೂ ಪ್ರೀತಿಪಾತ್ರರಾದರು. ದೈವಸಮಾನರಾದ ಶ್ರೀಗಳು ಎಳೆಯ ವಯಸ್ಸಿನಲ್ಲಿಯೇ ಆಧ್ಯಾತ್ಮದ ಕಡೆಗೆ ಒಲವು ತೋರಿದ್ದರು. ಇಂಥ ಮಹಾನುಭಾವರ ಜಯಂತ್ಯುತ್ಸವದಲ್ಲಿ ಭಾಗವಹಿಸಿದ್ದು ನೆಮ್ಮದಿ ತಂದಿದೆ.
>
> ■ ದೊಡ್ಡರಂಗೇಗೌಡ, ಸಾಹಿತಿ

ಸಂಯುಕ್ತ ಕರ್ನಾಟಕ

ಶ್ರೀಗಳ 78ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ದೊಡ್ಡರಂಗೇಗೌಡರ ಅಭಿಮತ

ಬಾಲಗಂಗಾಧರನಾಥ ಶ್ರೀಗಳು ಆಧುನಿಕ ಯೋಗಿ

ಬೆಂಗಳೂರು: ಅನ್ನ ಆರೋಗ್ಯ ಅಕ್ಷರಗಳೆಂಬ ತ್ರಿವಿಧ ದಾಸೋಹದ ಮೂಲಕ ಬಡ ಭಕ್ತರ ಬಾಳಿಗೆ ಆಸರೆಯಾಗಿದ್ದ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರು ಆಧುನಿಕ ಕಾಲದ ಯೋಗಯೋಗಿ ಎಂದು ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡ ಅವರು ಹೇಳಿದರು.

ವಿಜಯನಗರದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀಮಠದ ಅಭ್ಯುದಯಕ್ಕಾಗಿ ಅಂದು ಸ್ವಾಮೀಜಿಯವರು ಸ್ವತಃ ಜೋಳಿಗೆ ಹಿಡಿದು ಭಕ್ತರ ಬಳಿಗೆ ಬಂದವರು. ಸ್ವಾಮೀಜಿಯವರ ಕರೆಗೆ ಓಗೊಟ್ಟ ಭಕ್ತರು ಎತ್ತಿನ ಬಂಡಿಯಲ್ಲಿ ಶ್ರೀಮಠಕ್ಕೆ ಸಾಕೆನ್ನಿಸುವಷ್ಟು ಧವಸ-ಧಾನ್ಯ ತಂದು ಸುರಿದ ಪರಿಣಾಮ ಮಠವು ಸಂಪದ್ಭರಿತವಾಯಿತು ಎಂದು ಸ್ಮರಿಸಿಕೊಂಡರು.

ಲೋಕ ಕಲ್ಯಾಣಕ್ಕಾಗಿ ಶ್ರೀಗಳು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಭಕ್ತರ ಪಾಲಿಗೆ ದೇವರೆನ್ನಿಸಿದ್ದ ಬಾಲಗಂಗಾಧರನಾಥ ಸ್ವಾಮೀಜಿಯಂಥವರು ಸಾವಿರಕ್ಕೊಬ್ಬರಾಗಿದ್ದು, ನಾನು ಕೂಡ ಅವರ ಮಾನಸ ಪುತ್ರ ಎಂದು ನುಡಿ ನಮನ ಸಲ್ಲಿಸಿದರು.



ಡಾ.ಬಾಲಗಂಗಾಧರನಾಥ ಶ್ರೀಗಳ 78ನೇ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡರು ಉದ್ಘಾಟಿಸಿದರು. ಸಚಿವ ವಿ.ಸೋಮಣ್ಣ, ತೋಂಟದ ಶ್ರೀ ಸಿದ್ಧರಾಮ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ಮೇಲ್ಮನೆ ಸದಸ್ಯ ಅ.ದೇವೇಗೌಡ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಇದ್ದರು.

ಇದಕ್ಕೂ ಮುನ್ನ ಮಾತನಾಡಿದ ವಸತಿ ಸಚಿವ ವಿ.ಸೋಮಣ್ಣ ಅವರು, ಸ್ವಾಮೀಜಿಯವರು ನಮ್ಮಂಥ ರಾಜಕಾರಣಿಗಳಿಗೆ ಸಂಸ್ಕೃತಿ ಮತ್ತು ಸಂಸ್ಕಾರ ತುಂಬಿದವರು. ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಮತ್ತು ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಕೃಪಾಶೀರ್ವಾದದಿಂದ ನಾನು ರಾಜಕೀಯದಲ್ಲಿ ಈ ಮಟ್ಟಕ್ಕೇರಿದ್ದು, ಇಂದು ನಮ್ಮೊಂದಿಗಿಲ್ಲದಿದ್ದರೂ ನಮ್ಮ ಹೃದಯದಲ್ಲಿ ಸದಾ ತುಂಬಿಕೊಂಡಿದ್ದಾರೆ. ಲಕ್ಷಾಂತರ ಮಕ್ಕಳಿಗೆ ಈ ಇಬ್ಬರೂ ಮಹನೀಯರು ವಿದ್ಯೆ ದಾನ ಮಾಡಿದ್ದಾರೆ ಎಂದು ಹೇಳಿದರು.

ಎಂ.ಸಿ.ಲೇಔಟ್‌ನ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದ ಈ ಜಾಗ ಈ ಮುನ್ನ ಬೇರೆ ಉದ್ದೇಶಕ್ಕೆಂದು ಬಳಸಲು ನಿರ್ಧರಿಸಲಾಗಿತ್ತು. ಆದರೆ, ಇಲ್ಲಿನ ಮಕ್ಕಳಿಗೆ ಆಟದ ಕೇಂದ್ರವಾಗಬೇಕೆಂದು ಅಂದು ಶ್ರೀಗಳು ಸೂಚಿಸಿದ ಕಾರಣ ಇಲ್ಲಿ ಸಾರ್ವಜನಿಕ ಕ್ರೀಡಾಂಗಣ ಮೈದಳೆಯುವಂತೆ ಮಾಡಿದೆ ಎಂದು ಅವರು ತಿಳಿಸಿದರು.

ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಐವರು ಮಹನೀಯರನ್ನು ಇದೇ ಸಂದರ್ಭದಲ್ಲಿ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಶಿಕ್ಷಣ ತಜ್ಞ ಪ್ರೊ.ಕೆ.ಕೃಷ್ಣ, ಚಲನಚಿತ್ರ ರಂಗದ ನಟ, ನಿರ್ಮಾಪಕ ನಿರ್ದೇಶಕ ಸಿ.ವಿ.ಶಿವಶಂಕರ್, ಇತಿಹಾಸ ತಜ್ಞ ಡಾ.ಎಂ.ಜಿ.ನಾಗರಾಜ್, ಜಾನಪದ ವಿದ್ವಾಂಸ ಡಾ.ಬಾನಂದೂರು ಕೆಂಪಯ್ಯ, ಸುಮಂಗಲಿ ಸೇವಾಶ್ರಮದ ಡಾ.ಎಸ್.ಜಿ.ಸುಶೀಲಮ್ಮ ಅವರನ್ನು ಡಾ.ದೊಡ್ಡರಂಗೇಗೌಡ ಅವರು ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ತೋಂಟದ ಶ್ರೀ ಸಿದ್ಧರಾಮ ಸ್ವಾಮೀಜಿ ಅವರು ಸಾನಿಧ್ಯ ವಹಿಸಿದ್ದರು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಮೇಲ್ಮನೆ ಸದಸ್ಯ ಅ.ದೇವೇಗೌಡ ಸೇರಿ ಮತ್ತಿತರರು ಉಪಸ್ಥಿತರಿದ್ದರು.

ಎಂ.ಸಿ.ಲೇಔಟ್‌ನ ಅಗ್ರಹಾರ ದಾಸರಹಳ್ಳಿಯಲ್ಲಿ 150 ಕೋಟಿ ರೂ.ಗಳ ವೆಚ್ಚದಲ್ಲಿ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಲೋಕಾರ್ಪಣೆಗೆ ಸಿದ್ಧಗೊಂಡಿದ್ದು, ಫೆಬ್ರವರಿ 29ರಂದು ಉದ್ಘಾಟನೆಯಾಗಲಿದೆ. ವಿಕ್ಟೋರಿಯಾ, ಕೆ.ಸಿ.ಜನರಲ್ ಆಸ್ಪತ್ರೆಗಳ ಮಾದರಿಯಲ್ಲಿ ಅತ್ಯಾಧುನಿಕ ಸೇವಾ ಸೌಲಭ್ಯಗಳುಳ್ಳ ಈ ಬೃಹತ್ ಆಸ್ಪತ್ರೆ ಕಟ್ಟಡಕ್ಕೆ ಡಾ.ಬಾಲಗಂಗಾಧರನಾಥ ಸಂಸ್ಮರಣಾ ಭವನವೆಂದು ನಾಮಕರಣ ಮಾಡಲಾಗುವುದು ಎಂದು ಸಚಿವ ವಿ.ಸೋಮಣ್ಣ ಇದೇ ಸಂದರ್ಭದಲ್ಲಿ ತಿಳಿಸಿದರು.

ಉದಯವಾಣಿ
ಗುರುವಾರ, ಜನವರಿ 19, 2023


ಆಸ್ಪತ್ರೆಗೆ ಬಾಲಗಂಗಾಧರನಾಥ ಶ್ರೀಗಳ ಹೆಸರು

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ಶ್ರೀಗಳು ಪ್ರೇರಣೆ ▫ ಸ್ವಾಮೀಜಿ ಜಯಂತಿಯಲ್ಲಿ ಸಚಿವ ಸೋಮಣ್ಣ

ಬೆಂಗಳೂರು: ದಾಸರಹಳ್ಳಿಯಲ್ಲಿ ನಿರ್ಮಾಣಗೊಂಡ 300 ಹಾಸಿಗೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಮೂಲ ಪ್ರೇರಣೆ ಬಾಲಗಂಗಾಧರನಾಥ ಸ್ವಾಮೀಜಿ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಸ್ವಾಮೀಜಿ ಹೆಸರಿಡಲಾಗುವುದು ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಬಿಜಿಎಸ್ ಆಟದ ಮೈದಾನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪದ್ಮ ಭೂಷಣ ಬಾಲಗಂಗಾಧರನಾಥ ಸ್ವಾಮೀಜಿ 78ನೇ ಜಯಂತ್ಯುತ್ಸವ ಮತ್ತು ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಾಲಗಂಗಾಧರನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ನನಗೆ ಸಮಾಜ ಸೇವೆ, ರಾಜಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಸ್ಫೂರ್ತಿಯಾಗಿದ್ದಾರೆ. ಗೋವಿಂದರಾಜ ನಗರ, ವಿಜಯನಗರ ಭಾಗದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸಲು ಸ್ವಾಮೀಜಿ ಕಾರಣ ಎಂದು ಸ್ಮರಿಸಿದರು.



ಬಾಲಗಂಗಾಧರನಾಥ ಸ್ವಾಮೀಜಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು. ಸಚಿವ ವಿ.ಸೋಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ಆದಿಚುಂಚನಗಿರಿ ಮಠದ ವಿಜಯನಗರ ಶಾಖೆಯ ಸೌಮ್ಯನಾಥ ಸ್ವಾಮಿ ಹಾಗೂ ಎಡೆಯೂರು ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, ಬಾಲಗಂಗಾಧರನಾಥ ಸ್ವಾಮೀಜಿ ಈ ಶತಮಾನದ ಮಹಾಯೋಗಿ. ಅಂತಹ ಮಹಾ ಪುರುಷರ ಜಯಂತಿಯಲ್ಲಿ ಭಾಗವಹಿಸಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು. ಸಾಹಿತಿ ಡಾ.ದೊಡ್ಡರಂಗೇಗೌಡ, ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಮತ್ತಿತರರು ಇದ್ದರು.

ಇದೇ ವೇಳೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷ ಡಾ.ಎಂ.ಜಿ. ನಾಗರಾಜ್, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಾನಂದೂರು ಕೆಂಪಯ್ಯ, ಚಲನಚಿತ್ರ ಸಾಹಿತಿ ಸಿ.ವಿ. ಶಿವಶಂಕರ್, ಸುಮಂಗಲಿ ಸೇವಾ ಆಶ್ರಮದ ಡಾ.ಎಸ್.ಜಿ. ಸುಶೀಲಮ್ಮ ಅವರಿಗೆ ಗೌರವ ಸಲ್ಲಿಸಲಾಯಿತು.

ಸಂಜೆವಾಣಿ

Saturday 14 January 2023



ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ 50ನೇ ವಾರ್ಷಿಕೋತ್ಸವವನ್ನು ಆರಂಭವಾಯಿತು. ಸಮಾರಂಭದ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಡಾ. ಎಸ್.ಆರ್. ಹೊನ್ನಲಿಂಗಯ್ಯ, ಶಿಕ್ಷ ದತ್ತಿಯ ಅಧ್ಯಕ್ಷರು ಪಂಡಿತರಾಧ್ಯ, ಪ್ರಧಾನ ಕಾರ್ಯದರ್ಶಿ ವೂಡೇ.ಪಿ ಕೃಷ್ಣ, ಕಾಲೇಜಿನ ಪ್ರಾಂಶುಪಾಲೇ ಪ್ರೊ. ಮಹಾಲಕ್ಷ್ಮಿ ಹಾಗೂ ಪದಾಧಿಕಾರಿಗಳು ಮಕ್ಕಳ ಸರ್ವೋತ್ತಮುಖ ಬೆಳವಣಿಗೆಯಲ್ಲಿ ಪಠ್ಯದ ಜೊತೆಗೆ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಕನ್ನಡಪ್ರಭ ಶುಕ್ರವಾರ 13.1.2023



• ಕನ್ನಡಪ್ರಭ ವಾರ್ತೆ ಮೈಸೂರು

ಮಾನವನು ಪಶುತ್ವವನ್ನು ಕಡಿಮೆ ಮಾಡಿಕೊಂಡಾಗ ಮನುಷ್ಯತ್ವವು ಹೆಚ್ಚಾಗುತ್ತದೆ ಎಂದು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಮಹಾಮೇಧಾನಂದ ತಿಳಿಸಿದರು.

ನಗರದ ಶೇಷಾದ್ರಿಪುರಂ ಪದವಿ ಕಾಲೇಜು ಆಂತರಿಕ ಗುಣಮಟ್ಟ ಭರವಸೆ ಕೋಶ, ಯೂತ್ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಎನ್‌ಸಿಸಿ ಘಟಕದ ವತಿಯಿಂದ ಸ್ವಾಮಿ ವಿವೇಕಾನಂದರ 160ನೇ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆಯನ್ನು ಅವರು ಉದ್ಘಾಟಿಸಿ ಮಾತನಾಡಿದರು. ಮನುಷ್ಯರಿಂದ ದೈವತ್ವ ಸೃಷ್ಟಿಯಾಗುತ್ತದೆ ಹಾಗೂ ಮನುಷ್ಯರು ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ನಿಸ್ವಾರ್ಥ ಸೇವೆಯಿಂದ ಕೆಲಸ ಮಾಡುವ ವ್ಯಕ್ತಿ ಇತಿಹಾಸದ ಪುಟದಲ್ಲಿರುತ್ತಾರೆ ಎಂದು ಅವರು ಹೇಳಿದರು.

ಕೆ.ಆರ್. ಆಸ್ಪತ್ರೆಯ ರಕ್ತನಿಧಿ ಕೇಂದ್ರದ ನಿರ್ದೇಶಕ ಡಾ. ಬಿ.ಎಸ್. ಮಂಜುನಾಥ್ ಮಾತನಾಡಿ, ರಕ್ತದಾನ ಮಾಡುವುದರಿಂದ ಮತ್ತೊರ್ವ ರೋಗಿಗೆ ಆಗುವಂತಹ ಅನುಕೂಲಗಳನ್ನು ಅಂಕಿ ಅಂಶಗಳ ಸಹಿತ ತಿಳಿಸಿಕೊಟ್ಟರು ಹಾಗೂ ರಸ್ತೆ ಅಪಘಾತಗಳಿಂದ ಅತೀ ಹೆಚ್ಚಾಗಿ ಯುವಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದರು.

ಇದೇ ವೇಳೆ ಕೆ. ಎಂ. ನಂಜಪ್ಪ ನೆನಪಿನಾರ್ಥವಾಗಿ ಸ್ವಯಂ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಸಂಯೋಜನಾಧಿಕಾರಿ ರಾಜು ಚಂದ್ರಶೇಖರ್ ಮಾತನಾಡಿ, ರಕ್ತದಾನ ಮಾಡುವುದರಿಂದ ಆರೋಗ್ಯದಲ್ಲಿ ಏನೆಲ್ಲಾ ಪ್ರಯೋಜನವಾಗುತ್ತದೆ ಎಂದು ತಿಳಿಸಿಕೊಟ್ಟರು. ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವುಡೇ.ಪಿ. ಕೃಷ್ಣ ಕಾಲೇಜಿನ ಪ್ರಾಂಶುಪಾಲೆ ಸೌಮ್ಯ ಈರಪ್ಪ ಇದ್ದರು. ಎನ್. ದೀಕ್ಷಾ ನಿರೂಪಿಸಿದರು. ಟಿ.ಎಸ್. ಕೃತಿಕ ಸ್ವಾಗತಿಸಿದರು. ಲಿನ್ಸಿ ನಾಚಪ್ಪ ವಂದಿಸಿದರು.

ಪ್ರಜಾವಾಣಿ
ಶುಕ್ರವಾರ • ಜನವರಿ 13, 2023




ಸ್ವಯಂಪ್ರೇರಿತ ರಕ್ತದಾನ ಶಿಬಿರ

[illegible]

ಈ ಸಂಜೆ

Jan 12, 2023



ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವ ಸಮಾರಂಭದಲ್ಲಿ ಪ್ರೊ. ನಿರಂಜನ ವಾನಳ್ಳಿ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ದತ್ತಿಯ ಅಧ್ಯಕ್ಷರಾದ ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ವೂಡೇ ಪಿ ಕೃಷ್ಣ, ಪ್ರಾಂಶುಪಾಲರಾದ ಜಿ.ಕೆ. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಗುರುವಾರ ○ ಜನವರಿ 12, 2023

ಸಾಹಿತಿ ಕಮಲಾ ಹಂಪನಾ ಪ್ರತಿಪಾದನೆ

'ನಿರಂತರ ಕಲಿಕೆ ಸಾಧನೆಗೆ ಮೆಟ್ಟಿಲು'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಷ್ಟೇ ಉನ್ನತ ಸಾಧನೆ ಮಾಡಿದರೂ ಕಲಿಕೆಯಲ್ಲಿ ಸದಾ ವಿದ್ಯಾರ್ಥಿಗಳಾಗಿದ್ದಾಗ ಮಾತ್ರ ಜ್ಞಾನ ಹಾಗೂ ಬದುಕಿನ ನಿರಂತರತೆ ಸಾಧ್ಯ' ಎಂದು ಸಾಹಿತಿ ಕಮಲಾ ಹಂಪನಾ ಪ್ರತಿಪಾದಿಸಿದರು.

ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾಲೇಜಿನ 'ಸುವರ್ಣ ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬದುಕಿನ ಕತ್ತಲು ಹೋಗಲಾಡಿಸುವ ಬೆಳಕು ವಿದ್ಯೆ. ಮನುಷ್ಯನನ್ನು ಉನ್ನತಮಟ್ಟಕ್ಕೆ ಒಯ್ಯುವ ಮಾರ್ಗ ಅದೊಂದೆ. ಉತ್ತಮ ಶಿಕ್ಷಕರೇ ಶಿಕ್ಷಣ ಸಂಸ್ಥೆಯ ಆಧಾರಸ್ತಂಭ. ಕರ್ಣ, ಏಕಲವ್ಯ ಸಹ ಸಮಾಜದ ಸ್ಥಿತ್ಯಂತರಗಳನ್ನು ದಾಟಿ ಗುರುವಿನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿದರು. ತಮಗೂ ಕುವೆಂಪು ಸೇರಿ ಉತ್ತಮ ಗುರುಗಳು ಸಿಕ್ಕಿದ್ದರಿಂದ ನಿರೀಕ್ಷಿತ ಜ್ಞಾನ ಸಂಪಾದನೆ, ಸಮಾಜದ ಋಣ ತೀರಿಸುವ ಶಕ್ತಿ ಗಳಿಸಲು ಸಾಧ್ಯವಾಯಿತು' ಎಂದರು.

ಸಾಹಿತಿ ಹಂಪ ನಾಗರಾಜಯ್ಯ, 'ಸಮಯವನ್ನು ಗೌರವಿಸುವ ವ್ಯಕ್ತಿ ವಿದ್ವತ್ ಸಂಪಾದಿಸುತ್ತಾನೆ. ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಾನೆ. ಗುರುಗಳನ್ನು ಗೌರವಿಸುವವನು ಅವರ ಮಾರ್ಗದಲ್ಲೇ ನಡೆದು ಗುರುವನ್ನು ಮೀರಿಸುವ ಸಾಧಕನಾಗುತ್ತಾನೆ' ಎಂದು ಹೇಳಿದರು.



'ಸುವರ್ಣ ಸಂಭ್ರಮ' ಕಾರ್ಯಕ್ರಮದಲ್ಲಿ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕಮಲಾ ಹಂಪನಾ ಮತ್ತು ಹಂಪ ನಾಗರಾಜಯ್ಯ ಇದ್ದಾರೆ
—ಪ್ರಜಾವಾಣಿ ಚಿತ್ರ

ಪ್ರಾಸ್ತಾವಿಕ ಭಾಷಣದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, 'ಕಾಲೇಜಿನಲ್ಲಿ ಪಠ್ಯದ ಜತೆಗೆಪೂರಕ ಪಠ್ಯ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗಿದೆ. ಕೈಗೆಟಕುವ ಶುಲ್ಕದಲ್ಲಿ ಶಿಕ್ಷಣ ನೀಡಲಾಗುತ್ತಿದೆ' ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಟಿ.ಎಸ್.ಹೆಂಜಾರಪ್ಪ, ವಾಗ್ಮಿ ಇಂದೂಮತಿ ಸಾಲಿಮಠ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎನ್.ಪಿ.ಕಾರ್ತೀಕ್, ಪ್ರಾಂಶುಪಾಲ ಆರ್.ವಿ.ಮಂಜುನಾಥ್, ಧರ್ಮದರ್ಶಿ ಕೃಷ್ಣಸ್ವಾಮಿ, ಅನಂತರಾಮು, ನಟರಾಜ್, ಚಂದ್ರಶೇಖರ್ ಉಪಸ್ಥಿತರಿದ್ದರು.

ಈ ಸಂಜೆ

Jan 10 2023



ನಗರದ ಶೇಷಾದ್ರಿಪುರಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ನಾಡೋಜ ಹಂಪನಾಗರಾಜಯ್ಯ ದಂಪತಿಯನ್ನು ಸನ್ಮಾನಿಸಲಾಯಿತು. ಕಾಲೇಜಿನ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ , ಡಾ. ವೂಡೇಪಿ ಕೃಷ್ಣ, ಪ್ರೊ.ಮಂಜುನಾಥ್ ಸೇರಿದಂತೆ ಮತ್ತಿತರ ಹಿರಿಯ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹೊಸ ದಿಗಂತ
ಶನಿವಾರ, 7 ಜನವರಿ 2023, ಬೆಂಗಳೂರು

ಹಚ್ಚೆ ನಾಡಲ್ಲಿ ಕನ್ನಡ ತೇರು

೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸರ್ವರಿಗೂ ಸ್ವಾತಂತ್ರ್ಯ ಇರಲಿ



VIJAYAVANI BENGALURU
ಶುಕ್ರವಾರ 6 ಜನವರಿ 2023
6 JANUARY 2023

ವಿಜಯವಾಣಿ ಚಿತ್ರ



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಸ್ನೇಹ-ಸಮ್ಮಿಲನದಲ್ಲಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳಲ್ಲಿ ಸೇವೆಸಲ್ಲಿಸಿ. ನಿವೃತ್ತರಾದವರಿಗೆ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎನ್.ಆರ್. ಪಂಡಿತಾರಾಧ್ಯ, ವೂಡೇ ಪಿ. ಕೃಷ್ಣ ಇತರರಿದ್ದರು.

ಮೈಸೂರು ಮಿತ್ರ ಗುರುವಾರ 5 ಜನವರಿ 2023



ಮೈಸೂರು ನಗರ ಕನ್ನಡಪರ ಸಂಘಟನೆ, ನಾಗರಿಕ ಹಿತರಕ್ಷಣಾ ವೇದಿಕೆಯ 35ನೇ ವಾರ್ಷಿಕೋತ್ಸದ ಅಂಗವಾಗಿ ಬೆಂಗಳೂರಿನ ರಮಣಶ್ರೀ ಹೋಟೆಲ್‌ನಲ್ಲಿ ನಾಡೋಜ ಡಾ.ಷಡಕ್ಷರಿ ಅವರಿಗೆ ಸಮಾಜ ಸೇವಾ ರತ್ನ ಬಿರುದು ನೀಡಿ, ಸನ್ಮಾನಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ಕೃಷ್ಣ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ಹನುಮಂತೇಗೌಡ, ಮೆಸ್ ಬಾಬು, ಸರ್ದಾರ್ ಮಹೇಶ್, ಮುರುಗೇಶ್ ಇದ್ದಾರೆ.

ಪ್ರಜಾವಾಣಿ
ಬುಧವಾರ • ಜನವರಿ 4, 2023



ಮೈಸೂರು ನಗರ ಕನ್ನಡವರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯ 35ನೇ ವಾರ್ಷಿಕೋತ್ಸವ ಪ್ರಯುಕ್ತ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಷಡಕ್ಷರಿ ಅವರಿಗೆ ಬೆಂಗಳೂರಿನ ರಮಣಶ್ರೀ ಹೋಟೇಲ್‌ನಲ್ಲಿ ಮಂಗಳವಾರ 'ಸಮಾಜ ಸೇವಾ ರತ್ನ' ಬಿರುದು ನೀಡಿ ಸನ್ಮಾನಿಸಲಾಯಿತು. ವೇದಿಕೆ ಉಪಾಧ್ಯಕ್ಷ ಹನುಮಂತೇಗೌಡ, ಸಂಘಟನಾ ಕಾರ್ಯದರ್ಶಿ ಮುರುಗೇಶ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ಶೇಷಾದ್ರಿಪುರಂ ಕಾಲೇಜಿನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು) ಇದ್ದರು

ಈ ಸಂಜೆ

Jan 3, 2023

ಜನಮಾನಸದ ಮಹಾ ಸಂತ

ಸಿದ್ದೇಶ್ವರ ಶ್ರೀಗಳು ಒಬ್ಬ ದೈವಿಕ ಶಕ್ತಿ . ಅವರ ಆಶೀರ್ವಾದ ನಮ್ಮ ಮೇಲೆ ಸದಾ ಇರುತ್ತದೆ. ಇಂತಹ ಸಂತರು ಜನಿಸುವುದು ಕೂಡ ವಿರಳ. ಅವರ ಅಗಲಿಕೆಯಿಂದ ಆಧ್ಯಾತ್ಮಿಕ ಲೋಕಕ್ಕೆ ದೊಡ್ಡ ನಷ್ಟ ಉಂಟಾಗಿದೆ.

-ಡಾ.ಸುಧಾಕರ್
ಆರೋಗ್ಯ ಸಚಿವರು


ಕೋಟ್ಯಂತರ ಜನರಿಗೆ ಆಧ್ಯಾತ್ಮಿಕ ಪ್ರವಚನದ ಮೂಲಕ ಮಾರ್ಗದರ್ಶನ ನೀಡಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿಯುವಂತಹ ಶುದ್ಧ, ಸರಳ ಜೀವನದ ಮೂಲಕ ಎಲ್ಲರಿಗೂ ಮಾದರಿಯಾಗಿದ್ದ ನಡೆದಾಡುವ ದೇವರು, ಪರಮಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ಲಿಂಗೈಕ್ಯರಾಗಿರುವುದು ಅತೀವ ನೋವುಂಟು ಮಾಡಿದೆ. ಸಾರಸ್ವತ ಲೋಕಕ್ಕೆ, ಆಧ್ಯಾತ್ಮಿಕ ಜಗತ್ತಿಗೆ ತುಂಬಲಾರದ ನಷ್ಟವಾಗಿದೆ. ಶ್ರೀಗಳಿಗೆ ನಮ್ಮ ಭಾವಪೂರ್ಣ ನಮನಗಳು.

-ನಾಡೋಜ ಡಾ.ವೂಡೆ ಪಿ.ಕೃಷ್ಣ
ಅಧ್ಯಕ್ಷರು, ಗಾಂಧಿ ಸ್ಮಾರಕ ನಿಧಿ
ಬೆಂಗಳೂರು

ಸ್ವಾಮೀಜಿ ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ಆದರೆ, ಅವರು ನೀಡಿರುವ ಪ್ರವಚನಗಳು ಮತ್ತು ತೋರಿರುವ ಆದರ್ಶ ಗುಣಗಳು ಭೂಮಿ ಮೇಲೆ ಸದಾ ಇರುತ್ತದೆ. ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಅವರು ಕಂಕಣಬದ್ಧರಾಗಿ ತೋರಿದ ದಿಟ್ಟತನವನ್ನು ಯಾರೂ ಮರೆಯುವಂತಿಲ್ಲ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

-ಸತೀಶ್ ಜಾರಕಿಹೊಳಿ
ಶಾಸಕರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರು

ಪ್ರಜಾವಾಣಿ
ಮಂಗಳವಾರ ಜನವರಿ 3, 2023




ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸ್ನೇಹಸಮ್ಮಿಲನ ಸಮಾರಂಭಲ್ಲಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಜಗದೀಶ್, ಗೀತಾ.ಎಂ, ವೀರಣ್ಣಗೌಡ, ಏಕಾಂಬರೇಶ್ವರ್ ಹಾಗೂ ಪ್ರೊ.ಚಂದ್ರಿಕಾ ಪುರಾಣಿಕ್ ಅವರಿಗೆ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ.ಪಿ.ಕೃಷ್ಣ, ಧರ್ಮದರ್ಶಿಗಳಾದ ಕೆ.ಕೃಷ್ಣಸ್ವಾಮಿ, ಎಸ್.ಶೇಷನಾರಾಯಣ, ಎಂ.ಎಸ್.ನಟರಾಜ್, ಆರ್.ಬಿ.ಮೃತ್ಯುಂಜಯ, ಸಿ.ಪ್ರಶಾಂತ್ ಕುಮಾರ್, ಎನ್.ಪಿ.ಕಾರ್ತಿಕ್, ಎಂ.ವಿ.ಮುಕುಂದ್, ಜಿ.ಪರಮಶಿವಯ್ಯ ಹಾಗೂ ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್ ಇದ್ದರು.

ವಿಜಯ ಕರ್ನಾಟಕ
ಗುರುವಾರ,26 ಜನವರಿ 2023

ಅಭಿನಂದನಾ ಸಮಾರಂಭ 30ಕ್ಕೆ

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ವತಿಯಿಂದ ಲೇಖಕ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರಿಗೆ ಜ.30 ರಂದು ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.





ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ಡಾ.ಎಲ್.ಹನುಮಂತಯ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಮಾರಂಭವು ಜ.30 ಸೋಮವಾರ ಸಂಜೆ 5.30ಕ್ಕೆ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ನಡೆಯಲಿದೆ.

https://www.upayuktha.com/ https://epaper.upayuktha.com/
A Member of PADMA (Print And Digital Media Association)- recognised by Govt of India
ಉಪಯುಕ್ತ ನ್ಯೂಸ್
25-01-2023, ಬುಧವಾರ
ಉಪಯುಕ್ತ ನ್ಯೂಸ್ ಡಿಜಿಟಲ್ ಮಾಧ್ಯಮ ಬಳಗದ ಎಲೆಕ್ಟ್ರಾನಿಕ್ ಪತ್ರಿಕೆ

ಡಾ.ಅರಳುಮಲ್ಲಿಗೆ ಪಾರ್ಥಸಾರಥಿ 2ನೇ ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನ ಸಂಪನ್ನ
ಅಂತರಾಷ್ಟ್ರೀಯ ಖ್ಯಾತಿಯ ಹರಿದಾಸ ಸಾಹಿತ್ಯ ವಿದ್ವಾಂಸ ವಿದ್ಯಾವಾಚಸ್ಪತಿ ಅಧ್ಯಕ್ಷತೆ



ಬೆಂಗಳೂರು : ಮುಂದಿನ ತಲೆಮಾರಿನವರಿಗೆ ಪರಿಚಯ ಮಾಡಿ ಕೊಡುವುದಕ್ಕಾಗಿ ಕಲ್ಯಾಣ ಕರ್ನಾಟಕದ ಎಲ್ಲಹರಿದಾಸರ ಪರಿಚಯಾತ್ಮಕ ಚಿತ್ರ ಪುಸ್ತಿಗೆಗಳನ್ನು ಪ್ರಕಟಿಸಿ ಕೈಗೆಟುಕುವ ಬೆಲೆಯಲ್ಲಿ ಇದನ್ನು ಮನೆ ಮನೆಗೆ, ಪ್ರತಿ ಶಾಲೆಗೆ ತಲುಪಿಸಬೇಕು.

ಹರಿದಾಸ ಕೀರ್ತನ ಬಳಗದ ವತಿಯಿಂದ ಸೇಡಂನ ದಾಸಧೇನು ಟ್ರಸ್ಟ್ ಸಹಯೋಗದಲ್ಲಿ ನಗರದ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿರುವ ಶ್ರೀಕೃಷ್ಣರಾಜ ಪರಿಷ್ಮಂದಿರದಲ್ಲಿ 2ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಆಯೋಜಿಸಿದೆ. ಸಮ್ಮೇಳನಾಧ್ಯಕ್ಷತೆಯನ್ನು ಅಂತರಾಷ್ಟ್ರೀಯ ಖ್ಯಾತಿಯ ಹರಿದಾಸ ಸಾಹಿತ್ಯ ವಿದ್ವಾಂಸ ವಿದ್ಯಾವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ರವರು ವಹಿಸಿ ಮಾತನಾಡುತ್ತ 'ದಾಸಸಾಹಿತ್ಯ, ಬದಲಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗಲಿದೆ. ಏಕೆಂದರೆ ಮನುಷ್ಯ ದುರಾಗಿ ಆಗುತ್ತಿದ್ದಾನೆ. ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿದೆ. ನಂಬಿ ಬಂದಿದ್ದ ಮೌಲ್ಯಗಳು ಕುಸಿಯುತ್ತಿವೆ. ಮಾನವೀಯ ಮೃದು ಸಂಬಂಧಗಳು ಹಿಂದೆ ಸರಿದಿವೆ. ಎಲ್ಲರೂ ಯಾಂತ್ರಿಕ ವ್ಯವಹಾರಿಕ ವ್ಯವಸ್ಥೆಯ ಭಾಗವಾಗುತ್ತಿದ್ದೇವೆ. ಬಹು ರಾಷ್ಟ್ರೀಯ ವ್ಯವಸ್ಥೆಗಳು, ಜಾಗತೀಕರಣ, ಮಿತಿಮೀರಿದ ನಗರೀಕರಣ, ದಿನೇ ದಿನೇ ಹೆಚ್ಚುತ್ತಿರುವ ಕೊಳ್ಳುಬಾಕ ಸಂಸ್ಕೃತಿ, ಈ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ರಕ್ಷಣೆ ಮಾಡುವಲ್ಲಿ ದಾಸಸಾಹಿತ್ಯದ ಪಾತ್ರ ಮುಂದಿನ ದಿನಗಳಲ್ಲಿ ಮಹತ್ವದ್ದಾಗಲಿದೆ' ಎಂದು ಅಭಿಪ್ರಾಯ ಪಟ್ಟರು.

ದಾಸಪಂಥ, ಪ್ರೀತಿ, ಗೌರವ, ವಿಶ್ವಾಸ, ವಿವೇಕ, ವಿನಯಗಳ ಜ್ಞಾನಭಕ್ತಿ ವೈರಾಗ್ಯಗಳ ಬೆಳಕಿನಲ್ಲಿ ನಡೆಯುವ ಸೊಬಗು. ಇದರಲ್ಲಿ ಸ್ವಾರ್ಥ, ಆಸೆಯ ಹಿಂದಕ್ಕೆ ಬರಬಾರದು. 'ಕುಲಕುಲಕುಲವೆಂದು ಹೊಡೆದಾಡದಿರಿ' ಎಂಬ ಅರಿವು ಮೂಡಿಸಿದ್ದೇ ದಾಸಸಾಹಿತ್ಯ. ದಾಸರುಗಳನ್ನು ಜಾತಿವಾದದ, ಕೋಮು ವಿಭಾಗ ಮಾಡಿ ಒಬ್ಬರ ವಿರುದ್ಧ ಮತ್ತೆ ಒಬ್ಬರನ್ನು ಎತ್ತಿ ಕಟ್ಟುವ ಕೆಲಸ ಮಾಡಬಾರದು. ಎಂದಿನಿಂದಲೂ ನಂಬಿಕೊಂಡು ಬಂದ ಇತಿಹಾಸವನ್ನು ಸ್ವಲಾಭಕ್ಕಾಗಿ ಸ್ವಕೀಯರ ಹಿತಕ್ಕಾಗಿ ತಿರುಚಬಾರದು. ಎಂದು ಸಮ್ಮೇಳನವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಬೇಲಿಮಠದ ಪೂಜ್ಯ ಶ್ರೀ ಶಿವರುದ್ರ ಮಹಾಸ್ವಾಮಿಗಳು ತಿಳಿಸಿದರು.


ಕೇಂದ್ರೀಯ ಶಿಕ್ಷಣ ದತ್ತಿಯ ಗೌ.ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಮತ್ತು ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ಕಾರ್ಯದರ್ಶಿ, ರಂಗವಿಠಲ ಮಾಸಪತ್ರಿಕೆ ಸಂಪಾದಕ ವಿದ್ವಾನ್ ಎಚ್.ಬಿ. ಲಕ್ಷ್ಮೀನಾರಾಯಣಾಚಾರ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಮಾರಂಭದಲ್ಲಿ ಶ್ರೀ ಕೃಷ್ಣದೇವರಾಯ 1530 ರಲ್ಲಿ ಮತ್ತು ಶ್ರೀ ವ್ಯಾಸರಾಯರು 1539 ರಲ್ಲಿ ಅಂತ್ಯರಾದ ನಂತರ ಅಳಿಯ ರಾಮರಾಯನ 12 ವರ್ಷದ (1539-1565) ಕಾಲಾವಧಿಯಲ್ಲಿ ಪುರಂದರ ಕನಕರ ಜವಾಬ್ದಾರಿಯುತ ಲೋಕ ಸಂಗ್ರಹ ಲೋಕ ಶಿಕ್ಷಣ ಮತ್ತು ಲೋಕಹಿತ ಪ್ರಮುಖವಾದದ್ದು, ಇದು ಜಗತ್ತಿನ ಇನ್ನಾವ ಸಂತ ಮಹಾಂತರು ಮಾಡಿಲ್ಲ. ಐತಿಹಾಸಿಕವಾದ ಕಾಲಾವಧಿಯಲ್ಲಿ ನಿರ್ದಿಷ್ಟವಾದ ಈಗಿನ ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಸಂಭವನೀಯ ತಾಳಿಕೋಟೆ ಯುದ್ಧವನ್ನು ಊಹಿಸಿ ಮಾಡಿದ ಶಿಷ್ಟ ರಕ್ಷಣೆ ತುಂಬಾ ಮಹತ್ವವಾದದ್ದು. ಕಲ್ಯಾಣ ಕರ್ನಾಟಕದ ಹರಿದಾಸರು ನೀಡಿದ ಸಮಾಗಿಕ ಕೊಡುಗೆ ಕುರಿತಂತೆ ಈ ಸಮ್ಮೇಳನವು ವಿಚಾರ ಮಾಡುತ್ತಿರುವುದು ಅಭಿನಂದನಾರ್ಹ. ಎಂದು ಸೇಡಂನ ದಾಸಧೇನು ಟ್ರಸ್ಟ್ ಅಧ್ಯಕ್ಷ ಡಾ.ವಾಸುದೇವ ಅಗ್ನಿಹೋತ್ರಿ ಆಶಯ ನುಡಿಗಳನ್ನಾಡಿದರು. ಇದೇ ಸಂದರ್ಭದಲ್ಲಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿರವರ 'ವಿಷ್ಣುಸಹಸ್ರ ನಾಮದ ಅಪೂರ್ವ ಅರ್ಥಗಳು ಮತ್ತು ಡಾ.ಎಚ್.ವಿ. ಪ್ಲವಶಿರವರ 'ದಾಸ ದೀಪ್ತಿ' ಕೃತಿ ಲೋಕಾರ್ಪಣೆಗೊಳ್ಳಲಿದೆ.

ದಾಸ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಂಶೋಧನೆ: ಶ್ರೀಧರ ರಾಯಸಂ; ಪ್ರವಚನ: ನಾಗರಾಜ ಪೋಲೀಸ್ಪಟ್ಟಲ್ಲಿ; ಸಂಘಟನೆ : ವೆಂಕೋಬರಾವ್ ; ಸಾಹಿತ್ಯ : ಡಾ.ಮಂಜುನಾಥ ಪಾಟೀಲ; ಭಜನೆ: ಬೇಕಲ್‌ವರ್ಮ ಜಗನ್ನಾಥ ದಾಸರು ಹಾಗೂ ಸಂಗೀತ: ವಿದ್ವಾನ್ ಶ್ರೀನಿಧಿರವರುಗಳಿಗೆ ಅಭಿನಂದನೆ ಮಾಡಲಾಯಿತು.



ಸಮ್ಮೇಳನದ ಕುರಿತು

ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವೆಂದೇ ಪರಿಗಣಿತವಾಗಿರುವ ಕಲ್ಯಾಣ ಕರ್ನಾಟಕ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ವಿಶೇಷವಾದ ಭಕ್ತಿ ಸಾಹಿತ್ಯದ ಹಿನ್ನೆಲೆಯಲ್ಲಿ ಹೇಗೆ ಮಹತ್ವಪೂರ್ಣವಾದ ಶ್ರೀಮಂತ ಕೊಡುಗೆ ನೀಡಿದೆ ಎನ್ನುವ ವಿಚಾರವಾಗಿ ಒಂದು ವಿಶೇಷ ಗೋಷ್ಠಿಯನ್ನು ಈ ಸಮ್ಮೇಳನದಲ್ಲಿ ಆಯೋಜಿಸಲಾಗಿತ್ತು. ಈ ಗೋಷ್ಠಿಯ ವೈಶಿಷ್ಟ್ಯವೆಂದರೆ ಕಲ್ಯಾಣ ಕರ್ನಾಟಕ ಭಾಗದಲ್ಲೇ ಈ ಬಗ್ಗೆ ದಶಕಗಳ ಕಾಲ ವಿದ್ವತ್ಪೂರ್ಣ ಕೃಷಿ ಮಾಡಿರುವ ವಿದ್ವಾಂಸರುಗಳೇ ಸ್ವತಃ ಬಂದು ಗೋಷ್ಠಿಯಲ್ಲಿ ಭಾಗವಹಿಸಿ ಈ ಬಗ್ಗೆ ಬೆಳಕು ಚೆಲ್ಲಿದರು. ದಾಸ ಸಾಹಿತ್ಯ ನಿಂತ ನೀರಲ್ಲ, ಇಂದಿಗೂ ಸಮೃದ್ಧಧಾರೆಯಾಗಿ ತುಂಬಿ ತುಂಬಿ ಹರಿಯುತ್ತಿರುವ ನೀರು ಎಂಬುದನ್ನು 'ಆಧುನಿಕ ಹರಿದಾಸ ಸಾಹಿತ್ಯ' ಎಂಬ ಗೋಷ್ಠಿಯಲ್ಲಿ ನಿರೂಪಿಸಲಾಯಿತು ಇದರಲ್ಲೂ ವಿಶೇಷವಾಗಿ ಅರವತ್ತಕ್ಕೂ ಹೆಚ್ಚು ಹರಿದಾಸ ಗ್ರಂಥಗಳನ್ನು, ಸಹಸ್ರಾರು ಹರಿದಾಸ ಕೀರ್ತನೆಗಳನ್ನು ರಚಿಸಿರುವ ಜಗತ್ತಿನ ನಾನಾ ರಾಷ್ಟ್ರಗಳಿಗೆ ದಾಸ ಸಾಹಿತ್ಯ ಸೌರಭವನ್ನು ಅತ್ಯಂತ ಯಶಸ್ವಿಯಾಗಿ ಪ್ರಸರಿಸಿ ಬಂದಿರುವ ಈ ಸಮ್ಮೇಳನಾಧ್ಯಕ್ಷರಾದ ಡಾ| ಅರಳುಮಲ್ಲಿಗೆ ಪಾರ್ಥಸಾರಥಿಯವರ ಸಾಹಿತ್ಯದ ಕುರಿತು ಗೋಷ್ಠಿಯಲ್ಲಿ ಚಿಂತನ-ಮಂಥನ ನಡೆಯಿತು.



ಸಮ್ಮೇಳನದ ಇನ್ನೊಂದು ಸ್ವಾರಸ್ಯಕರ ಕಾರ್ಯಕ್ರಮ ಸಂವಾದ, ದಾಸ ಸಾಹಿತ್ಯದಲ್ಲಿ ದಶಕಗಳ ಕಾಲ ಕೃಷಿ ಮಾಡಿರುವ ಹತ್ತಾರು ವಿದ್ವಾಂಸರು ಸಮ್ಮೇಳನಾಧ್ಯಕ್ಷರೊಡನೆ ಸ್ಪಂದಿಸುತ್ತ ದಾಸಸಾಹಿತ್ಯ ಕ್ಷೇತ್ರದ ಹೊಳಹುಗಳು- ಸುಳಿವುಗಳು, ಆಗಬೇಕಾದ ಕೆಲಸಗಳ ಬಗ್ಗೆ ಚಿಂತಿಸುವ, ಅಧ್ಯಯನಶೀಲರಿಗೆ, ದಾಸಸಾಹಿತ್ಯಾಸಕ್ತರಿಗೆ ಮಾರ್ಗದರ್ಶನ ಮಾಡುವ ವಿಧೇಯಕವಾಗಿರುವ ಈ ಕಾರ್ಯಕ್ರಮ ಅರ್ಥಪೂರ್ಣವಾಯಿತು.

ಮುಂದಿನ ಪುಟಕ್ಕೆ >>>>>>

ಸಂಸ್ಕೃತಿ ರಕ್ಷಣೆಗೆ ದಾಸ ಸಾಹಿತ್ಯ ಬೇಕು

ವಿದ್ಯಾವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಸಮ್ಮೇಳನಾಧ್ಯಕ್ಷರು, ಸಾಧಕರಿಗೆ ಸನ್ಮಾನ, ಅಭಿನಂದನೆ

[illegible]



ಕೃತಿಗಳ ಲೋಕಾರ್ಪಣೆ

[illegible]

ಪ್ರಜಾವಾಣಿ ಸೋಮವಾರ • ಜನವರಿ 23, 2023

ಚಿತ್ರಾವಳಿ



ಹರಿದಾಸ ಕೀರ್ತನ ಬಳಗ ನಗರದಲ್ಲಿ ಭಾನುವಾರ ಆಯೋಜಿಸಿದ್ದ 2ನೇ ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನವನ್ನು ಬೇಲಿಮಠದ ಶಿವರುದ್ರ ಸ್ವಾಮೀಜಿ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಲೇಖಕ ಆರ್. ವಾದಿರಾಜು, ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ಕಾರ್ಯದರ್ಶಿ ಎಚ್.ಡಿ.ಲಕ್ಷ್ಮೀನಾರಾಯಣ, ಹರಿದಾಸ ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮತ್ತು ದಾಸದೇನು ಟ್ರಸ್ಟ್ ಅಧ್ಯಕ್ಷ ವಾಸುದೇವ್ ಅಗ್ನಿಹೋತ್ರಿ ಇದ್ದಾರೆ.